Editor: NITYANANDASWAMI Publisher: U. BASAVARAJA RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE

ಸಂಪುಟ-17 ಸಂಚಿಕೆ-12 ಮಾರ್ಚ್ 20-26, 2023 ಪುಟ 16 ರೂ. 10/-
Volume-17 Issue-12 March 20-26, 2023 Pages:16 Price: 10/-





ಅಮೆರಿಕನ್ ಬ್ಯಾಂಕ್‌ಗಳ ದಿವಾಳಿ ಮಹಾ ಆರ್ಥಿಕ ಕುಸಿತದ ಮುನ್ಸೂಚನೆಯೇ?

ಮೋದಿ ಮಂಡ್ಯ ಭೇಟಿ: ಬಂದಾ ಪುಟ್ಟ ಹೋದಾ ಪುಟ್ಟಾ..!



ಕುಂಕುಮ ಇಡೋದು ಬಿಡೋದು ನಮ್ಮ ಹಕ್ಕು ನಿಮ್ಮದೇನು?





ವ್ಯಕ್ತಿ ಸ್ವಾತಂತ್ರ್ಯದ ಮೇಲೆ ಸಂಸದನ ದಾಳಿ!

ಬಿಜೆಪಿ ಕಾರ್ಯಕ್ರಮದಂತಾದ ಬೆಂಗಳೂರು-ಮೈಸೂರು ರಸ್ತೆ ಉದ್ಘಾಟನೆ

ಮಿಥ್ಯೆ 1: 'ಸಾವರ್ಕರ್ ಒಬ್ಬ ದಂತಕತೆಯಾದ ಸ್ವಾತಂತ್ರ್ಯ ಹೋರಾಟಗಾರ'!?

ಈ ಮಿಥ್ಯೆ ಎಂತಹ ಅರೆ ಸತ್ಯಗಳು ಮತ್ತು ಸುಳ್ಳುಗಳಿಂದ ಕೂಡಿದೆ ಎಂಬುದನ್ನು ಓದಿದ್ದೀರಿ. ತನ್ನ ರಾಜಕೀಯ ಜೀವನದ ಮೊದಲ ಘಟ್ಟದಲ್ಲಿ ಕೋಮು ಸಾಮರಸ್ಯದ ಸ್ವತಂತ್ರ ಭಾರತದ ಆದರ್ಶಕ್ಕಾಗಿ ತುಡಿಯುತ್ತಿದ್ದ ಕ್ರಾಂತಿಕಾರಿಯಾಗಿದ್ದ ಸಾವರ್ಕರ್, ಸೆಲ್ಯುಲರ್ ಜೈಲಿನಲ್ಲಿನ ಕಾರಾಗೃಹವಾಸ ಮತ್ತು ಅಲ್ಲಿನ ಘೋರಯಾತನೆ ಕಂಡ ನಂತರ ಕ್ರಾಂತಿಕಾರಿಯಾಗಿ ಉಳಿದಿರಲಿಲ್ಲ.

ಮಿಥ್ಯೆ 2: ಸಾವರ್ಕರ್ ತಮ್ಮ ಬದುಕಿನ ಬಹುಭಾಗವನ್ನು ಅಂಡಮಾನಿನ ಸೆಲ್ಯುಲರ್ ಜೈಲಿನಲ್ಲಿ ಕಳೆದರು!?

ಸಾವರ್ಕರ್ ನಿಜವಾಗಿಯೂ ಕ್ರಾಂತಿಕಾರಿಯಾಗಿದ್ದಾಗ ಅವರಿಗೆ ಬ್ರಿಟಿಷರು ಎರಡು ವಿಭಿನ್ನ ಪ್ರಕರಣಗಳಲ್ಲಿ ಒಟ್ಟು 50 ವರ್ಷ ಗಡೀಪಾರಿನ ಶಿಕ್ಷೆ ವಿಧಿಸಿದ್ದು ನಿಜ. ಆದರೆ ಅದರಲ್ಲಿ ಅವರು ಅಂಡಮಾನಿನ ಸೆಲ್ಯುಲರ್ ಜೈಲಿನಲ್ಲಿ ಶಿಕ್ಷೆ ಅನುಭವಿಸಿದ್ದು ಕೇವಲ 10 ವರ್ಷ.

ಮಿಥ್ಯೆ 3 – ಸಾವರ್ಕರ್ ಅವರ ಕ್ಷಮಾಯಾಚನೆಯ ಅರ್ಜಿಗಳು ಸ್ವಾತಂತ್ರ್ಯ ಗಳಿಕೆಗೆ ಒಂದು ತಂತ್ರವಷ್ಟೆ!?

ಸಾವರ್ಕರ್ ಅವರು ಬ್ರಿಟಿಷ್ ಆಳರಸರಿಗೆ ಕ್ಷಮಾಯಾಚನೆಯ ಪತ್ರಗಳನ್ನು ಬರೆದಿದ್ದರು ಎಂಬುದನ್ನು ಅಲ್ಲಗಳೆಯಲು ಸಾಧ್ಯವಿಲ್ಲವಾದ್ದರಿಂದ, ಅದು ದರಿದ್ರ ಜೈಲಿನಿಂದ ಹೊರಬಂದು ಸಕ್ರಿಯ ರಾಜಕೀಯ ಮತ್ತು ಸ್ವಾತಂತ್ರ್ಯ ಚಳವಳಿಗೆ ಮರಳಲು ಮಾಡಿದ್ದ ತಂತ್ರ ಎಂದು ಅದನ್ನು ಅವರ ಬೆಂಬಲಿಗರು ಸಮರ್ಥಿಸಿಕೊಳ್ಳುತ್ತಿದ್ದಾರೆ. ಆದರೆ ಈ ಸಮರ್ಥನೆಯೂ ಸಾವರ್ಕರ್ 1913 ಮತ್ತು 1920 ರಲ್ಲಿ ಬರೆದ ಕ್ಷಮಾಯಾಚನೆಯ ಪತ್ರದ ಮೂಲ ಪಠ್ಯವನ್ನು ಓದಿದರೆ, ಅರ್ಥಹೀನವಾಗುತ್ತದೆ ಎನ್ನುತ್ತಾರೆ ಲೇಖಕರು ಈ ಅಧ್ಯಾಯದಲ್ಲಿ.. ..

"ಕ್ಷಮಾದಾನದ ಉಪಕಾರವು ಭವಿಷ್ಯದಲ್ಲಿ ನನ್ನನ್ನು ರಾಜಕೀಯವಾಗಿ ಉಪಯುಕ್ತನನ್ನಾಗಿ ಮಾಡುತ್ತದೆ"!


1920ರಲ್ಲಿ ಪೂರ್ಣ ಶರಣಾಗತಿಯನ್ನು ಒಪ್ಪಿಸಿದ ಸಮಗ್ರವಾದ ಕ್ಷಮಾಯಾಚನೆಯ ಅರ್ಜಿಯ ಕೊನೆಯಲ್ಲಿ ಸಾವರ್ಕರ್ ಹೀಗೆ ಹೇಳಿದ್ದರು!

ಸಾವರ್ಕರ್ ಅವರು ನವಂಬರ್ 14, 1913ರಂದು ಅಂಡಮಾನಿನ ಸೆಲ್ಯುಲರ್ ಜೈಲಿನಲ್ಲಿ ಖುದ್ದಾಗಿ ಕ್ರಡಕ್ ಅವರಿಗೆ ಸಲ್ಲಿಸಿದ್ದ ಕ್ಷಮಾಯಾಚನೆಯ ಪತ್ರವೇ ಕೊನೆಯದಲ್ಲ. ಅವರು ಒಟ್ಟೆಲ್ಲಾ ಐದು ಕ್ಷಮಾಯಾಚನೆಯ ಅರ್ಜಿಗಳನ್ನು 1911, 1913, 1914, 1918 ಮತ್ತು 1920ರಲ್ಲಿ ಸಲ್ಲಿಸಿದ್ದರು. ಇತ್ತೀಚೆಗೆ ಸಾವರ್ಕರ್ ಅವರನ್ನು ಸಮರ್ಥಿಸಿ ಬರೆದ ಪುಸ್ತಕವೊಂದು "ಈ ಅವಧಿಯಲ್ಲಿ ಕ್ಷಮಾಯಾಚನೆ ಮಾಡಿ ಮತ್ತು ತನ್ನನ್ನು ಬಿಡುಗಡೆ ಮಾಡಬೇಕೆಂದು ಕೋರಿ ಕನಿಷ್ಠ ಏಳು ಅರ್ಜಿಗಳನ್ನು ಸಲ್ಲಿಸಿದ್ದರು." ಎಂಬ ವಾಸ್ತವಾಂಶವನ್ನು ಹೇಳುತ್ತದೆ.

1920 ರಲ್ಲಿ ಅವರು ಬರೆದ ಕ್ಷಮಾಯಾಚನೆಯ ಅರ್ಜಿಯು ಪೂರ್ಣ ಶರಣಾಗತಿಯನ್ನು ಒಪ್ಪಿಸಿದ ಸಮಗ್ರವಾದ ಪತ್ರವಾಗಿದೆ.

ಆ ಪತ್ರದ ಪೂರ್ಣ ಪಾಠ ಇಲ್ಲಿದೆ;

ಸೆಲ್ಯುಲರ್ ಜೈಲು, ಪೋರ್ಟ್‌ಬ್ಲೈರ್ ದಿನಾಂಕ 30 ಮಾರ್ಚ್ 1920


18

PROCEEDINGS OF THE

HOME DEPARTMENT, AUGUST 1920.

Imperial Legislative Council.

Rejection of petition to release Savarkar.

QUESTION AND ANSWER IN THE IMPERIAL LEGISLATIVE COUNCIL REGARDING THE RELEASE OF THE SAVARKAR BROTHERS.

REJECTION OF A PETITION SUBMITTED BY V. D. SAVARKAR PRAYING FOR THE RELEASE UNDER THE AMNESTY OF HIMSELF AND HIS BROTHER.

CELLULAR JAIL, PORT BLAIR,
The 30th March 1920.

To

THE CHIEF COMMISSIONER OF ANDAMANS.

In view of the recent statement of the Hon'ble Member for the Home Department to the Government of India, to the effect that "the Government was willing to consider the papers of any individual, and give them their best consideration if they were brought before them"; and that "as soon as it appeared to the Government that an individual could be released without danger to the State, the Government would extend the Royal clemency to that person," the undersigned most humbly begs that he should be given a last chance to submit his case, before it is too late. You, Sir, at any rate, would not grudge me this last favour of forwarding this petition to His Excellency the Viceroy of India, especially and if only to give me the satisfaction of being heard, whatever the Government decision may be.

1. The Royal proclamation most magnanimously states that Royal clemency

ಅಂಡಮಾನಿನ ಚೀಫ್ ಕಮಿಷನರ್ ಅವರಿಗೆ,


"ಯಾವುದೇ ಒಬ್ಬ ವ್ಯಕ್ತಿಯ ಪತ್ರಗಳನ್ನು ಸರ್ಕಾರವು ಪರಿಗಣನೆಗೆ ತೆಗೆದುಕೊಳ್ಳಲು ಬಯಸುತ್ತದೆ, ಮತ್ತು ತಮ್ಮ ಮುಂದೆ ಅಂತಹ ಪತ್ರಗಳನ್ನು ತಂದದ್ದೇ ಆದರೆ, ಅವುಗಳಿಗೆ ಹೆಚ್ಚಿನ ಗಮನ ನೀಡಲಾಗುವುದು." ಮತ್ತು "ಪ್ರಭುತ್ವಕ್ಕೆ ಯಾವುದೇ ಅಪಾಯವಿಲ್ಲದೆ ಆ ವ್ಯಕ್ತಿಯನ್ನು ಬಿಡುಗಡೆ ಮಾಡಬಹುದು ಎಂದು ಸರ್ಕಾರಕ್ಕೆ ಸ್ಪಷ್ಟವಾದ ಕೂಡಲೇ, ಸರ್ಕಾರವು ಆ ವ್ಯಕ್ತಿಗೆ ರಾಜೋಚಿತ ಕ್ಷಮೆಯನ್ನು ನೀಡುತ್ತದೆ" ಎಂಬ ಭಾರತ ಸರ್ಕಾರದ ಗೃಹ ಇಲಾಖೆಯ ಗೌರವಾನ್ವಿತ ಸದಸ್ಯರ ಇತ್ತೀಚಿನ ಹೇಳಿಕೆಯ ಕಾರಣದಿಂದ ಈ ಕೆಳಗೆ ಸಹಿಮಾಡಿರುವ ನಾನು ಹೆಚ್ಚು ವಿಳಂಬವಾಗುವುದಕ್ಕೆ ಮುಂಚಿತವಾಗಿ ತನ್ನ ಮೊಕದ್ದಮೆಯನ್ನು ತಮ್ಮ ಮುಂದೆ ಸಲ್ಲಿಸಲು ಕೊನೆಯ ಅವಕಾಶ ನೀಡಬೇಕೆಂದು ಅತ್ಯಂತ ವಿನಯಪೂರ್ವಕವಾಗಿ ಕೋರಿಕೊಳ್ಳುತ್ತೇನೆ. ಸ್ವಾಮಿ, ವಿಶೇಷವಾಗಿ ಘನತೆವೆತ್ತ ಭಾರತದ ವೈಸ್‌ರಾಯ್ ಅವರಿಗೆ ಈ ಅರ್ಜಿಯನ್ನು ಕಳಿಸಿಕೊಡುವ ಮತ್ತು ಸರ್ಕಾರದ ತೀರ್ಮಾನಗಳು ಏನೇ ಆಗಿದ್ದರೂ, ನನ್ನನ್ನು ಆಲಿಸುವ ಸಮಾಧಾನವನ್ನು ನನಗೆ ದಯಪಾಲಿಸುವ ಕೊನೆಯ ಕೃಪೆಯನ್ನು, ಏನೇ ಆಗಲಿ, ತಾವು ತೋರದಿರುವುದಿಲ್ಲ.

1. "ರಾಜಕೀಯ ಪ್ರಗತಿಗಾಗಿನ ಅವರ ಅತ್ಯುತ್ಸಾಹದಿಂದಾಗಿ" ಕಾನೂನನ್ನು ಉಲ್ಲಂಘಿಸಿದವರೆಂದು ಕಂಡು ಬಂದ ಎಲ್ಲರಿಗೂ ರಾಜೋಚಿತ ಕ್ಷಮೆಯನ್ನು ನೀಡಬೇಕು ಎಂದು ರಾಜಪ್ರಭುತ್ವ ಪ್ರಕಟಿಸಿದೆ. ನನ್ನ ಮತ್ತು ನನ್ನ ಸೋದರನ ಪ್ರಕರಣಗಳು ಈ ವಿಧದಲ್ಲಿ ಸರ್ವಶ್ರೇಷ್ಠವಾದವು. ನಾನಾಗಲೀ ಅಥವಾ ನನ್ನ ಕುಟುಂಬದ ಸದಸ್ಯರಾಗಲೀ ನಮ್ಮಿಂದಾಗಿ ಆದ ಯಾವುದೇ ವೈಯಕ್ತಿಕ ಅಪರಾಧಕ್ಕಾಗಿ ಅಥವಾ ನಮಗೆ ವೈಯಕ್ತಿಕ ಸಹಾಯವನ್ನು ನಿರಾಕರಿಸಿದ್ದಕ್ಕಾಗಿ ಸರ್ಕಾರದ ವಿರುದ್ಧ ದೂರಲು ಏನೂ ಇಲ್ಲ. ಉಜ್ವಲವಾದ ವೃತ್ತಿಜೀವನವೊಂದು ನನ್ನ ಮುಂದಿತ್ತು ಮತ್ತು ಇಂತಹ ಅಪಾಯಕಾರಿ ಹಾದಿಗಳನ್ನು ತುಳಿದ ಕಾರಣ ವೈಯಕ್ತಿಕವಾಗಿ ಗಳಿಸುವಂತದ್ದು ಏನೂ ಇರಲಿಲ್ಲ, ಆದರೆ ಎಲ್ಲವನ್ನೂ ಕಳೆದುಕೊಳ್ಳಬೇಕಾಗಿತ್ತು. ಇಷ್ಟು ಹೇಳಿದರೆ ಸಾಕೆಂದು ಭಾವಿಸುತ್ತೇನೆ – ಗೃಹ ಇಲಾಖೆಯ ಗೌರವಾನ್ವಿತ ಸದಸ್ಯರೊಬ್ಬರು 1913 ರಲ್ಲಿ ಹೇಳಿದ್ದರು ". . .ಇಂತಹ ಶಿಕ್ಷಣ ಅಷ್ಟೊಂದು ಓದು . . . ನಮ್ಮ ಸರ್ಕಾರದ ಅಡಿಯಲ್ಲಿ ಅತ್ಯಂತ ದೊಡ್ಡ ಹುದ್ದೆಗಳಲ್ಲಿ ಇರಬಹುದಾಗಿತ್ತು . . ." ಇಂತಹ ಸಾಕ್ಷ್ಯಗಳಿದ್ದಾಗ್ಯೂ ಯಾರಲ್ಲಾದರೂ ನನ್ನ ಉದ್ದೇಶದ ಬಗ್ಗೆ ಯಾವುದಾದರೂ ಸಂದೇಹಗಳು ಅವಿತುಕೊಂಡಿದ್ದರೆ, ಅಂಥವರಿಗೆ ನಾನು ಹೇಳುವುದೇನೆಂದರೆ 1909ರವರೆಗೆ ನನ್ನ ಕುಟುಂಬದ ಯಾವ ಸದಸ್ಯನ ವಿರುದ್ಧವೂ ಆರೋಪ ಇಲ್ಲ ಎನ್ನುವುದನ್ನು ಎತ್ತಿತೋರಿಸಲು ಅನುಮತಿ ಕೋರುತ್ತೇನೆ; ಈ ಮೊಕದ್ದಮೆಗೆ ಕಾರಣವಾದ ನನ್ನ ಬಹುಪಾಲು ಎಲ್ಲಾ ಚಟುವಟಿಕೆಗಳೂ ಅದರ ಮುಂಚಿನ ವರ್ಷಗಳದ್ದಾಗಿದ್ದವು. 1899ರಿಂದ 1909ರವರೆಗೆ ಮಜ್ಜಿನಿ ಜೀವನ ವೃತ್ತಾಂತ (ಮಜ್ಜಿನಿ ಇಟಲಿಯ ಕ್ರಾಂತಿಕಾರಿ–ಅನು) ಮತ್ತು ಇತರ ಪುಸ್ತಕಗಳನ್ನು ಬರೆದಿರುವುದು, ಹಲವಾರು ಸೊಸೈಟಿಗಳನ್ನು ಸಂಘಟಿಸಿದ್ದು ಮತ್ತು ಶಸ್ತ್ರಾಸ್ತ್ರಗಳ ಪಾರ್ಸಲ್ ಕಳಿಸಿದ್ದನ್ನು ನನ್ನ ಯಾವುದಾದರೂ ಸೋದರರರನ್ನು ಬಂಧಿಸುವುದಕ್ಕಿಂತ ಮುಂಚೆ ಅಥವಾ ನಾನು ನನ್ನ ವೈಯಕ್ತಿಕ ಕುಂದುಕೊರತೆಗಳ ಬಗ್ಗೆ ದೂರು ನೀಡುವುದಕ್ಕಿಂತ ಮುಂಚೆ (ರೌಲೆಟ್ ವರದಿ ಪುಟ 6) ಎಂದು ಫಿರ್ಯಾದಿ, ನ್ಯಾಯಾಧೀಶರುಗಳು ಮತ್ತು ರೌಲೆಟ್ ವರದಿ ಎಲ್ಲವೂ ಒಪ್ಪಿಕೊಂಡಿದ್ದವು. ಆದರೆ ಬೇರೆ ಯಾರಾದರೂ ನಮ್ಮ ಮೊಕದ್ದಮೆಗಳ ಬಗ್ಗೆ ಇದೇ ರೀತಿಯ ಅಭಿಪ್ರಾಯ ಹೊಂದಿದ್ದರೆ? ಸರಿ, ಭಾರತದ ಸಾರ್ವಜನಿಕರು 5,000ಕ್ಕೂ ಕಡಿಮೆ ಇಲ್ಲದ ಸಹಿಗಳೊಂದಿಗೆ ಮಹಾಪ್ರಭುಗಳಿಗೆ ಸಲ್ಲಿಸಿದ ಬೃಹತ್ತಾದ ಅರ್ಜಿಯಲ್ಲಿ ನನ್ನ ಬಗ್ಗೆ ವಿಶೇಷವಾದ ಮಾತನ್ನು ಹೇಳಿದ್ದಾರೆ. ವಿಚಾರಣೆಯಲ್ಲಿ ನನಗೆ ಒಂದು ನ್ಯಾಯದರ್ಶಿ ಮಂಡಳಿಯನ್ನು ನಿರಾಕರಿಸಲಾಯಿತು: ನನ್ನ ಎಲ್ಲಾ ಕಾರ್ಯಾಚರಣೆಗಳ ಉದ್ದೇಶವು ರಾಜಕೀಯ ಪ್ರಗತಿಗಾಗಿನ ಅತ್ಯುತ್ಸಾಹದಿಂದಾಗಿ ಆಗಿತ್ತು ಮತ್ತು ನನ್ನನ್ನು ವಿಷಾದನೀಯ ಕಾನೂನು ಉಲ್ಲಂಘನೆಯತ್ತ ಕೊಂಡೊಯ್ದಿತು ಎಂದು ಈಗ ಇಡೀ ದೇಶದ ನ್ಯಾಯದರ್ಶಿ ಮಂಡಳಿಯು ಅಭಿಪ್ರಾಯಪಟ್ಟಿದೆ.

2. ಕೊಲೆಗೆ ಸಹಾಯ ಮಾಡಿದೆ ಎಂಬ ಎರಡನೆಯ ಮೊಕದ್ದಮೆ ಕೂಡ ನನ್ನನ್ನು ರಾಜೋಚಿತ ಕ್ಷಮೆಯಿಂದ ನಿಲುಕದಷ್ಟು ದೂರ ಎಸೆಯಲಾರದು. ಏಕೆಂದರೆ

(ಎ) ಆ ಘೋಷಣೆಯು ಅಪರಾಧದ ಅಥವಾ ಒಂದು ವಿಭಾಗದ ಅಥವಾ ನ್ಯಾಯಾಲಯದ ಸ್ವರೂಪದಲ್ಲಿ ಅಪರಾಧದ ಉದ್ದೇಶವನ್ನೂ ಮೀರಿ ಯಾವುದೇ ವ್ಯತ್ಯಾಸ ಮಾಡುವುದಿಲ್ಲ. ಅದು ಸಂಪೂರ್ಣವಾಗಿ ಉದ್ದೇಶಕ್ಕೆ ಸಂಬಂಧಪಟ್ಟಿದ್ದಾಗಿದೆ ಮತ್ತು ಅದು ವೈಯಕ್ತಿಕವಾದುದಾಗಿರದೆ ರಾಜಕೀಯದ್ದಾಗಿರಬೇಕು ಎಂದು ವಿಧಿಸುತ್ತದೆ.

(ಬಿ) ಎರಡನೆಯದಾಗಿ, ಸರ್ಕಾರ ಕೂಡ ಈಗಾಗಲೇ ಅದೇ ದೃಷ್ಟಿಯಲ್ಲಿ ಅರ್ಥೈಸಿ ಬರಿನ್ ಹಾಗೂ ಹೆಮ್ ಮತ್ತಿತರನ್ನು ಬಿಡುಗಡೆ ಮಾಡಿದೆ. ತಮ್ಮ ಪಿತೂರಿಯ ಉದ್ದೇಶಗಳಲ್ಲಿ ಒಂದಾದ "ಪ್ರಮುಖ ಸರ್ಕಾರಿ ಅಧಿಕಾರಿಗಳನ್ನು ಹತ್ಯೆ ಮಾಡುವುದು" ಎನ್ನುವುದನ್ನು ಈ ವ್ಯಕ್ತಿಗಳು ತಪ್ಪೊಪ್ಪಿಕೊಂಡಿದ್ದಾರೆ ಮತ್ತು ಅವರದೇ ತಪ್ಪೊಪ್ಪಿಕೆಯಲ್ಲಿ ಮ್ಯಾಜಿಸ್ಟ್ರೇಟರುಗಳನ್ನು ಕೊಲ್ಲಲು ಹುಡುಗರನ್ನು ಕಳಿಸಿದ ಅಪರಾಧಿಗಳು ತಾವೆಂದು ಹೇಳಿಕೊಂಡಿದ್ದಾರೆ. ಈ ಮ್ಯಾಜಿಸ್ಟ್ರೇಟ್ ಮೊದಲು "ವಂದೇ ಮಾತರಂ" ವೃತ್ತಪತ್ರಿಕೆಯ ಪ್ರಕರಣದಲ್ಲಿ ಬರೀನ್ ಅವರ ಸೋದರ ಅರಬಿಂದ ಹಾಗೂ ಇತರರ ಮೇಲೆ ಕಾನೂನು ಕ್ರಮ ಜರುಗಿಸಿದ್ದರು. ಮತ್ತು ಹೀಗಿದ್ದಾಗ್ಯೂ ಬರೀನ್ ನನ್ನು ನ್ಯಾಯವಾಗಿಯೇ ರಾಜಕೀಯೇತರ ಹಂತಕನೆಂದು ಪರಿಗಣಿಸಲಿಲ್ಲ. ನನಗೆ ಸಂಬಂಧಪಟ್ಟಂತೆ ಆಕ್ಷೇಪಣೆಯು ಬಹಳ ದುರ್ಬಲವಾಗಿದೆ. ಏಕೆಂದರೆ ನಾನು ಇಂಗ್ಲೆಂಡಿನಲ್ಲಿದ್ದೆ, ಜಾಕ್ಸನ್ ಅವರನ್ನು ಹತ್ಯೆ ಮಾಡುವ ನಿರ್ದಿಷ್ಟ ಸಂಚು ಅಥವಾ ಉದ್ದೇಶ ನನಗೆ ತಿಳಿದಿರಲಿಲ್ಲ ಮತ್ತು ನನ್ನ ಸೋದರನ ಬಂಧನವಾಗುವುದಕ್ಕೆ ಮುಂಚೆಯೇ ನಾನು ಶಸ್ತ್ರಾಸ್ತ್ರಗಳ ಪಾರ್ಸೆಲನ್ನು ಕಳಿಸಿದ್ದೆ, ಆದಕಾರಣ ಯಾವುದೇ ನಿರ್ದಿಷ್ಟ ವೈಯಕ್ತಿಕ ಅಧಿಕಾರಿಯ ವಿರುದ್ಧ ಸ್ವಲ್ಪವೂ ವೈಯಕ್ತಿಕ ದ್ವೇಷ ಹೊಂದಿರಲು ಸಾಧ್ಯವಿಲ್ಲ ಎಂಬ ಅಂಶವನ್ನು ಫಿರ್ಯಾದಿ ನ್ಯಾಯೋಚಿತವಾಗಿಯೇ ಒಪ್ಪಿಕೊಂಡಿದ್ದರು. ಆದರೆ ಕೆನಡಿಯನ್ನು ಸಾಯಿಸಿದ ಅದೇ ಬಾಂಬನ್ನು ನಿಜವಾಗಿಯೂ ಹೆಮ್ ತಯಾರಿಸಿದ್ದ ಮತ್ತು ಅದು ತಲುಪಬೇಕಾದ ಸ್ಥಳದ ಸಂಪೂರ್ಣ ಅರಿವು ಅವನಿಗಿತ್ತು. (ರೌಲೆಟ್ ವರದಿ, ಪುಟ 33). ಆದಾಗ್ಯೂ ಅದರ ಆಧಾರದಲ್ಲಿ ಹೆಮ್‌ನನ್ನು ಕ್ಷಮೆಯ ವ್ಯಾಪ್ತಿಯಿಂದ ಹೊರಗೆ ಹಾಕಲಿಲ್ಲ. ಬರೀನ್ ಮತ್ತು ಇತರರ ಮೇಲೆ ನಿಶ್ಚಿತವಾದ ಕುಮ್ಮಕ್ಕು ನೀಡಿದ್ದಕ್ಕಾಗಿ ಪ್ರತ್ಯೇಕವಾಗಿ ಆರೋಪ ಹೊರಿಸಲಿಲ್ಲ, ಏಕೆಂದರೆ ಅವರ ಮೇಲೆ ಅದಾಗಲೇ ಪಿತೂರಿ ಮೊಕದ್ದಮೆ ಅಡಿಯಲ್ಲಿ ಮರಣದಂಡನೆ ಶಿಕ್ಷೆ ವಿಧಿಸಲಾಗಿತ್ತು. ನನ್ನ ಮೇಲೆ ಖಚಿತವಾದ ಆರೋಪ ಹೊರಿಸಲಿಲ್ಲ ಏಕೆಂದರೆ ನನ್ನ ಮೇಲೆ ಆ ಆಪಾದನೆ ಇರಲಿಲ್ಲ, ಮತ್ತೂ ಏನೆಂದರೆ ವಶಕ್ಕೆ ತೆಗೆದುಕೊಳ್ಳುವ ಸಲುವಾಗಿ ಫ್ರಾನ್ಸ್ ನನ್ನನ್ನು ಹಿಂದಕ್ಕೆ ಕರೆಸಿಕೊಂಡದ್ದು ಅಂತರ್ರಾಷ್ಟ್ರೀಯ ಸೌಲಭ್ಯದ ದೃಷ್ಟಿಯಿಂದಷ್ಟೇ. ಆದ್ದರಿಂದ, ಅಧಿಕಾರಿಗಳ ಹತ್ಯೆಗೆ ಕುಮ್ಮಕ್ಕು ನೀಡಿದ್ದನ್ನು ಮತ್ತು ಇನ್ನೂ ಘೋರವಾದ ದುಷ್ಕಾರ್ಯದಲ್ಲಿ ಭಾಗಿಯಾಗಿರುವುದನ್ನು ಒಪ್ಪಿಕೊಂಡ ಬರೀನ್ ಹಾಗೂ ಹೆಮ್ ಅವರಿಗೆ ನೀಡಿದಂತೆ ನನಗೂ ಕ್ಷಮೆಯನ್ನು ವಿಸ್ತರಿಸಲು ಸರ್ಕಾರ ಕೃಪೆ ತೋರಬೇಕೆಂದು ನಾನು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಏಕೆಂದರೆ ಒಂದು ಕಾನೂನು ಅಂಶ ಅದು ಪರಿಭಾವಿಸುವ ಅಪರಾಧಕ್ಕಿಂತ ಹೆಚ್ಚಿನದ್ದು ಖಂಡಿತವಾಗಿಯೂ ಪ್ರಸ್ತುತವಾಗುವುದಿಲ್ಲ. ನನ್ನ ಸೋದರನ ಪ್ರಕರಣದಲ್ಲಿ ಈ ಪ್ರಶ್ನೆ ಉದ್ಭವಿಸುವುದೇ ಇಲ್ಲ. ಏಕೆಂದರೆ ಅವನ ಪ್ರಕರಣವು ಯಾವುದೇ ಹತ್ಯೆಗೆ ಸಂಬಂಧಪಟ್ಟಿದ್ದಲ್ಲ.



'ವೀರ' ಸಾವರ್ಕರ್–ಏಳು ಮಿಥ್ಯೆಗಳು

ಮಿಥ್ಯೆಗಳನ್ನು ಸತ್ಯಸಂಗತಿಗಳಿಂದ ಬೇರ್ಪಡಿಸುವ ಒಂದು ಪ್ರಾಮಾಣಿಕ ಆಕಾಂಕ್ಷೆಯಿಂದ ರಚಿಸಿರುವ ಡಾ.ಶಮ್ಸುಲ್ ಇಸ್ಲಾಮ್ ರವರ 'ಸಾವರ್ಕರ್ ಅನ್‌ಮಾಸ್ಕ್ಡ್' ಸಾವರ್ಕರ್‌ರವರನ್ನು ಕುರಿತ ಏಳು ಮಿಥ್ಯೆಗಳನ್ನು ದಾಖಲೆಗಳ ಬೆಳಕಿನಲ್ಲಿ ಪರಿಶೀಲಿಸುತ್ತದೆ.

ಡಾ. ಶಮ್ಸುಲ್‌ಇಸ್ಲಾಂ
ಅನು: ಟಿ.ಸುರೇಂದ್ರರಾವ್

ಭಾಗ–21

3. ಆ ಕಾರಣದಿಂದ ಬರಿನ್ ಹಾಗೂ ಹೆಮ್ ಅವರ ಪ್ರಕರಣಗಳಲ್ಲಿ ಈಗಾಗಲೇ ಸರ್ಕಾರವು ಆ ಘೋಷಣೆಯನ್ನು ಅರ್ಥೈಸಿದಂತೆ ನಾನು ಮತ್ತು ನನ್ನ ಸೋದರ ಇಬ್ಬರೂ "ಪೂರ್ಣ ಪ್ರಮಾಣದಲ್ಲಿ" ರಾಜೋಚಿತಕ್ಷಮೆ ಪಡೆಯಲು ಸಂಪೂರ್ಣವಾಗಿ ಅರ್ಹರಾಗಿದ್ದೇವೆ. ಆದರೆ ಅದು ಸಾರ್ವಜನಿಕ ಸುರಕ್ಷತೆಯೊಂದಿಗೆ ಸಮಂಜಸವೇ? ಖಂಡಿತವಾಗಿಯೂ ಹೌದು ಎಂದು ನಾನು ಪ್ರತಿಪಾದಿಸುತ್ತೇನೆ. ಏಕೆಂದರೆ

(ಎ) ನಮ್ಮನ್ನು "ಅರಾಜಕತಾವಾದಿಗಳ ಕುಲದವರು" ಎಂದು ಗೃಹ ಕಾರ್ಯದರ್ಶಿಯವರು ಉಲ್ಲೇಖಿಸಿದಂತೆ ನಾವು ಅಂಥವರಲ್ಲ ಎಂದು ಅತ್ಯಂತ ದೃಢವಾಗಿ ಘೋಷಿಸುತ್ತೇನೆ. ಆದ್ದರಿಂದ ಅಂತಹ ಉಗ್ರವಾದಿ ಪಂಥವನ್ನು ನಂಬುವವರಿಂದ ಬಹಳ ದೂರ ಇದ್ದೇನೆ, ಅಷ್ಟೇ ಅಲ್ಲ, ಒಬ್ಬ ಕ್ರೊಪೋಟ್ಕಿನ್ ಅಥವಾ ಒಬ್ಬ ಟಾಲ್‌ಸ್ಟಾಯ್ ಅಂಥವರ ಶಾಂತಿಯುತ ಹಾಗೂ ತಾತ್ವಿಕ ಅರಾಜಕತಾವಾದವನ್ನು ಕೂಡ ಒಪ್ಪದವನು ನಾನು. ನನ್ನ ಹಿಂದಿನ ಕ್ರಾಂತಿಕಾರಿ ಪ್ರವೃತ್ತಿಗಳಿಗೆ ಸಂಬಂಧಪಟ್ಟಂತೆ: ಕ್ಷಮೆ ಬೇಡುವುದಕ್ಕಾಗಿ ಮಾತ್ರವಲ್ಲ ಈ ಹಿಂದೆಯೇ, ನಾನು ಹಲವು ವರ್ಷಗಳ ಹಿಂದೆಯೇ ಇದರ ಬಗ್ಗೆ ತಿಳಿಸಿದ್ದೇನೆ ಮತ್ತು ನಾನು ಸರ್ಕಾರಕ್ಕೆ ಸಲ್ಲಿಸಿದ ನನ್ನ ಅರ್ಜಿಗಳಲ್ಲಿ (1918, 1914) ನಾನು ಸಂವಿಧಾನಕ್ಕೆ ಬದ್ಧನಾಗಿರುತ್ತೇನೆ ಎಂಬ ನನ್ನ ದೃಢವಾದ ಇಂಗಿತವನ್ನು ವ್ಯಕ್ತಪಡಿಸಿದ್ದೇನೆ ಮತ್ತು ಮೋಂಟೆಗ್ಯೂ ಅವರು ಅದನ್ನು ರೂಪಿಸಲು ಆರಂಭ ಪುಟ 6 ಕ್ಕೆ

ಸಂಪಾದಕೀಯ

ಪ್ರಧಾನಿಗಳು ಸ್ಥಾನದ ಘನತೆಯನ್ನು ಕಾಪಾಡಿಕೊಳ್ಳುವುದು ಅಗತ್ಯ

ಕರ್ನಾಟಕಕ್ಕೆ ಸತತವಾಗಿ ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ರವರು ಭೇಟಿ ನೀಡುತ್ತಿರುವುದನ್ನು ಪ್ರಶ್ನಿಸಲಾಗುತ್ತಿದೆ. ಹಿಂದೆ ಅತೀವೃಷ್ಟಿಯಿಂದ ಜನ, ಜಾನುವಾರು, ಆಸ್ತಿಪಾಸ್ತಿ ಹಾಳಾಗಿ ರೋಧಿಸುತ್ತಿರುವಾಗ ಕತ್ತು ಹೊರಳಿಸದ ಡಬಲ್ ಎಂಜಿನ್ ಗಳು ಈಗ ಗ್ರಹಗಳಂತೆ ರಾಜ್ಯವನ್ನು ಸುತ್ತುತ್ತಿರುವುದ್ಯಾಕೆ? ದಿನವೂ ಹತ್ತಾರು ಅಭಿವೃದ್ಧಿ ಯೋಜನೆಗಳ ಉದ್ಘಾಟನೆ, ಸಾವಿರಾರು ಕೋಟಿ ಹಣದ ಕೊಡುಗೆಗಳ ಬಗ್ಗೆ ಮಾತನಾಡುವವರು ಹಿಂದೆ ಆದ ಹಾನಿಯ ಪರಿಹಾರಕ್ಕೆ ಇಲ್ಲಿಯವರೆಗೂ ಕವಡೆ ಕಾಸೂ ನೀಡದಿರೋದು ಯಾಕೆ ಎಂಬೆಲ್ಲಾ ಪ್ರಶ್ನೆಗಳನ್ನು ಕೇಳಲಾಗುತ್ತಿದೆ. ಪೂರ್ಣಗೊಳ್ಳದ ರಸ್ತೆಯನ್ನು ಉದ್ಘಾಟಿಸಿದ ಮೋದಿಯವರು ಉದ್ಘಾಟಿಸಿದ್ದು ರಸ್ತೆಯನ್ನೋ ಅಥವಾ ಟೋಲ್ ಸುಲಿಗೆಯ ಕೇಂದ್ರವನ್ನೋ ಎಂಬ ಪ್ರಶ್ನೆಯಲ್ಲಿ ವಾಸ್ತವ ಇಲ್ಲದಿಲ್ಲ. ಇದು ಸರಕಾರಿ ಕಾರ್ಯಕ್ರಮವಾದರೂ ಅದು ಪೂರ್ಣ ಆಳುವ ಬಿಜೆಪಿಯ, ಸಂಘಪರಿವಾರದ ಕಾರ್ಯಕ್ರಮವನ್ನಾಗಿಸಿದ್ದು ಸಹ ಟೀಕೆಗೆ ಒಳಗಾಗಿದೆ. ಇಲ್ಲೆಲ್ಲಾ ವಿರೋಧ ಪಕ್ಷಗಳನ್ನು, ಅದರ ಜನ ಪ್ರತಿನಿಧಿಗಳನ್ನು ಪ್ರಜ್ಞಾಪೂರ್ವಕವಾಗಿಯೇ ದೂರ ಇರಿಸಿದ ರಾಜಕಾರಣ ಅರ್ಥವಾಗುವಂತಹುದೇ. ಇಂತಹ ಸಮಾರಂಭಗಳನ್ನು ವ್ಯವಸ್ಥೆ ಗೊಳಿಸಲು ಅವರಿಗೆ ಬೇಕಾದಂತೆ ಖರ್ಚು ಮಾಡಿದ್ದು ಸರಕಾರದ ಬೊಕ್ಕಸದಿಂದಲೇ. ಅಂದರೆ ಅಧಿಕಾರದಲ್ಲಿ ಇದ್ದ ಮಾತ್ರಕ್ಕೆ ಸಾರ್ವಜನಿಕರ ಹಣವನ್ನು ಪಕ್ಷದ, ಚುನಾವಣಾ ಉದ್ದೇಶಗಳಿಗೆ ಬಳಸಬಹುದೇ? ಹೀಗೆ ಬಿಜೆಪಿ ತನ್ನ ಅಧಿಕಾರವನ್ನು, ಇಡೀ ಆಡಳಿತ ಯಂತ್ರ ಮತ್ತು ಸಂಪನ್ಮೂಲಗಳನ್ನು ಮುಂಬರುವ ಚುನಾವಣಾ ಲಾಭಕ್ಕಾಗಿ ದುರುಪಯೋಗ ಮಾಡಿರುವುದು ನಿಚ್ಚಳ.

ಮಂಡ್ಯ ಮತ್ತು ಧಾರವಾಡದಲ್ಲಿ ಮೂಲ ಸೌಕರ್ಯಗಳ ಅಭಿವೃದ್ಧಿ ಮತ್ತು ಉನ್ನತ ಶಿಕ್ಷಣ ಸಂಸ್ಥೆಯೊಂದರ ಕ್ಷೇತ್ರದಲ್ಲಿ ನಿಂತಾಗಲೂ ಪ್ರಧಾನಿಗಳು ಕೇವಲ ವಿರೋಧ ಪಕ್ಷಗಳನ್ನು ಟೀಕಿಸಲು ಸಂದರ್ಭ ಬಳಸಿದ್ದು ಸರಿಯಲ್ಲ. ಮೇಲಾಗಿ, ಪ್ರಧಾನಿಗಳ ಮಾತುಗಳೂ ಸಹ ಆ ಉನ್ನತ ಹುದ್ದೆಗೆ, ಸಮಾರಂಭ, ಸಂದರ್ಭಕ್ಕೆ ಅನುಗುಣವಾಗಿ ಇರಲಿಲ್ಲ ಎನ್ನುವುದೂ ವಿಷಾದನೀಯ. ಬದಲಾಗಿ, ಮಾತುಗಳು ದೇಶವನ್ನು ಪ್ರತಿನಿಧಿಸಿದ ಮುತ್ಸದ್ದಿ ರಾಜಕಾರಣಿಗಿಂತ ಕೇವಲ ಚುನಾವಣಾ ಮತ ಗಳಿಕೆಯ ತಂತ್ರಕ್ಕೆ ಅನುಗುಣವಾಗಿತ್ತು. ಇದರೊಟ್ಟಿಗೆ ಮಂಡ್ಯದಲ್ಲಿ ಪ್ರಧಾನ ಮಂತ್ರಿಗಳು ಇತ್ತೀಚೆಗೆ ಬಿಜೆಪಿ ಪಕ್ಷ ಸೇರಿಕೊಂಡ ರೌಡಿ ಶೀಟರ್ ವ್ಯಕ್ತಿಯೊಂದಿಗಿನ ಭೇಟಿ ಖಂಡಿತಕ್ಕೂ ಒಂದು ಕಪ್ಪು ಚುಕ್ಕೆ. ಪ್ರಧಾನಮಂತ್ರಿಯಂತಹ ಗಣ್ಯರನ್ನು ಭೇಟಿ ಮಾಡಲು ಅದಕ್ಕೆ ತನ್ನದೇ ಆದ ಶಿಷ್ಟಾಚಾರಗಳು, ಬಿಗಿ ಭದ್ರತಾ ಕ್ರಮಗಳೂ ಇರುತ್ತವೆ. ಅವೆಲ್ಲವನ್ನು ಮೀರಿ ಪ್ರಧಾನಿಗಳಿಗೆ ಆತನನ್ನು ಭೇಟಿ ಮಾಡಿಸಿದ್ದು ಮತ್ತು ಅವರು ರೌಡಿ ಒಬ್ಬನಿಗೆ ಕೈ ಮುಗಿದಿರುವುದು ತೀವ್ರ ಟೀಕೆಗೆ ಗುರಿಯಾಗಿದೆ. ಇಂತಹದೊಂದು ಹೇಗೆ ಸಂಭವಿಸಿತು? ಇದಕ್ಕೆ ಪ್ರಧಾನಿಗಳು ಅಥವಾ ಪ್ರಧಾನಮಂತ್ರಿಯವರ ಕಚೇರಿ ಅನುಮತಿಸಿದ್ದು ಹೇಗೆ? ಅಷ್ಟೊಂದು ಶಿಷ್ಟಾಚಾರ, ಬಿಗಿ ಭದ್ರತೆಯ ನಡುವಿನಲ್ಲಿ ಇಂಥವರೊಬ್ಬರನ್ನು ಭೇಟಿ ಮಾಡಿಸಲು ಸಾಧ್ಯವಾಗಿದ್ದಕ್ಕೆ ಅದರ ಉನ್ನತ ಮಟ್ಟದ ನಾಯಕರ ಪಾಲು ಇರುವುದು ನಿಶ್ಚಿತ. ಈ ಬಗ್ಗೆ ಸೂಕ್ತವಾದ ತನಿಖೆ ನಡೆಸುವುದು ಅಗತ್ಯ ಎನ್ನುವ ಮಾತುಗಳಿಗೆ ಅರ್ಥವಿದೆ. ಈಗಾಗಲೇ ಕರ್ನಾಟಕದ ಸರ್ಕಾರ ಸಾವಿರಾರು ರೌಡಿಶೀಟರ್ ಗಳ ಮೇಲಿನ ಮೊಕದ್ದಮೆಗಳನ್ನು ಹಿಂತೆಗೆದುಕೊಂಡಿರುವುದು ಮತ್ತು ಅದರಲ್ಲಿ ಕೆಲವು ಪ್ರಮುಖರನ್ನು ಬಿಜೆಪಿ ಪಕ್ಷಕ್ಕೆ ಸೇರಿಸಿಕೊಂಡಿರುವುದು ತೀವ್ರವಾದ ಟೀಕೆ, ವಿರೋಧಕ್ಕೆ ಕಾರಣವಾಗಿದೆ. ಸದಾವಕಾಲ ನೈತಿಕತೆ, ಸಂಸ್ಕೃತಿಯ ಬಗೆಗೆ ಸಾರ್ವಜನಿಕ ಬೋಧನೆ ಮಾಡುವ ಬಿಜೆಪಿ ಮತ್ತು ಸಂಘ ಪರಿವಾರದವರು ತಾವು ಮಾಡಿದ ಈ ಕೃತ್ಯಗಳನ್ನು ಅದೇಗೆ ಸಮರ್ಥಿಸಿಕೊಳ್ಳುತ್ತಾರೆ. ಸಂಘ ಪರಿವಾರದ ಸೇವೆ ಮಾಡಲು ತೊಡಗಿದ ಕೂಡಲೇ ಪಾಪಿಗಳು ಪವಿತ್ರಾತ್ಮರಾಗುತ್ತಾರೆಯೇ?

ರೂಢೀಗತ ರಾಜಕೀಯ ಸಂಸ್ಕೃತಿ ಮತ್ತು ಅಸ್ತಿತ್ವದಲ್ಲಿರುವ ನೀತಿ ನಿಯಮಗಳನ್ನು ಗಾಳಿಗೆ ತೂರುವುದರಲ್ಲಿ ಬಿಜೆಪಿ ಸದಾ ಮುಂದಿದೆ. ಒಂದೊಂದು ಹೊಸ ಕೆಟ್ಟ ಸಂಪ್ರದಾಯಗಳನ್ನು ಹಾಕುತ್ತಿದೆ. ಅಂತಹ ನಿರ್ಧಾರಗಳನ್ನು ಮೇಲಿಂದ ಮೇಲೆ ಕೈಗೊಳ್ಳುತ್ತಲೇ ಬರುತ್ತಿದೆ. ಜನಾದೇಶಕ್ಕೆ ವಿರುದ್ಧವಾದ ಪಕ್ಷಾಂತರದ ಅನೈತಿಕ ರಾಜಕಾರಣದ ಒಂದು ಕೆಟ್ಟ ಮಾದರಿಯಾದ 'ಆಪರೇಷನ್ ಕಮಲ' ಎನ್ನುವುದನ್ನು ಇದೇ ಬಿಜೆಪಿ ಕರ್ನಾಟಕದಲ್ಲಿ ಲಜ್ಜೆಗೆಟ್ಟು ಜಾರಿಗೆ ತಂತು. ಅದು ರಾಜಕಾರಣದಲ್ಲಿ ಒಂದು ಒಪ್ಪಿತ ಹಾಗೂ ರಾಜಕೀಯ ಚಾಣಾಕ್ಷತನದ ಮೌಲ್ಯ ಎನ್ನುವಂತೆಯೇ ಮಾಡಲಾಯಿತು. ಈಗ ಸರಕಾರದ ಯೋಜನೆಗಳ ಫಲಾನುಭವಿಗಳನ್ನು ಒಂದೆಡೆ ಸೇರಿಸಿ ಬಿಜೆಪಿ ಪಕ್ಷಕ್ಕೆ ಮತ ಹಾಕುವಂತೆ 'ದಭಾಯಿಸುವ' ಕ್ರಮವನ್ನು ಸರಕಾರದ ಹಣ ಮತ್ತು ಆಡಳಿತಾತ್ಮಕ ವ್ಯವಸ್ಥೆಯಿಂದಲೇ ಸಂಘಟಿಸುವ ಕೆಟ್ಟ ಮಾದರಿಯನ್ನು ದಕ್ಷಿಣ ಕನ್ನಡದ ಜಿಲ್ಲೆಯಲ್ಲಿ ಈ ಅವಧಿಯಲ್ಲಿ ಬಿಜೆಪಿ ಆರಂಭಿಸಿತು. ಈಗ ಅದನ್ನು ರಾಜ್ಯದ ಎಲ್ಲಾ ಕಡೆಗಳಲ್ಲೂ ವಿಸ್ತರಿಸಲಾಗುತ್ತಿದೆ. ಮೋದಿಯವರನ್ನು ಸ್ವಾಗತಿಸಲು ಎಂದೂ ಇಲ್ಲದ ಉರೀಗೌಡ, ನಂಜೇಗೌಡ ಎನ್ನುವರ ಹೆಸರಿನಲ್ಲಿ ದ್ವಾರಗಳನ್ನು ಜಿಲ್ಲಾಡಳಿತದ ಮೂಲಕವೇ ಹಾಕಿಸಲಾದದ್ದು ದೊಡ್ಡ ಪ್ರಮಾದ. ತಡವಾಗಿಯಾದರೂ ಆಡಳಿತ ಜನಾಕ್ರೋಶವನ್ನು ಸರಿಯಾಗಿ ಅರ್ಥ ಮಾಡಿಕೊಂಡಿತು ಎನ್ನುವುದು ಬೇರೆ ವಿಷಯ. ಆದರೆ ಇದರ ಹಿಂದೆ ಸಂಘಪರಿವಾರದ ಕೈವಾಡ, ಒತ್ತಡ ಇರುವುದು ಖಚಿತ. ರಾಜ್ಯಾದ್ಯಂತ ಬಿಜೆಪಿ ಪಕ್ಷದ ರಾಜಕೀಯ ದುರ್ಲಾಭಕ್ಕೆ ಸಾರ್ವಜನಿಕರ ಹಣ, ಸಮಯ, ಆಡಳಿತದ ಸಾಮರ್ಥ್ಯಗಳನ್ನು ಎಗ್ಗಿಲ್ಲದೆ ವ್ಯರ್ಥ ಮಾಡಲಾಗುತ್ತಿದೆ. ಅದನ್ನೇ ಈಗ ಚುನಾವಣಾ ಪೂರ್ವದಲ್ಲಿ ರಾಜ್ಯದ ಬೇರೆ ಬೇರೆ ಕಡೆಗಳಲ್ಲಿ ಅನುಸರಿಸಲಾಗುತ್ತಿದೆ. ಇಂಥಹ ಚುನಾವಣಾ 'ಮೇಳ'ಗಳಿಗೆ ಪ್ರಧಾನಿ ಮತ್ತು ಕೇಂದ್ರ ಗೃಹ ಸಚಿವರಂತವರು ಪದೇಪದೇ ಭಾಗಿಯಾಗುವುದು ಸಮಂಜಸವಲ್ಲ, ಶೋಭೆ ತರುವುದೂ ಇಲ್ಲ. ಅವರ ಪಕ್ಷ ಅಂತವುಗಳನ್ನು ಸಂಘಟಿಸಿದಲ್ಲಿ ಪಕ್ಷದ ನಾಯಕರಾಗಿ ಅವರು ಭಾಗವಹಿಸಲು ಅಭ್ಯಂತರವೇನು ಇರುವುದಿಲ್ಲ. ಆದರೂ ಅದಕ್ಕೊಂದು ಮಿತಿ ಮತ್ತು ಸ್ಥಾನದ ಘನತೆ, ಗಂಭೀರತೆಗಳು ಇರುತ್ತವೆ ಎನ್ನುವುದನ್ನು ಮರೆಯಬಾರದು. ಪ್ರಧಾನಿ ಹುದ್ದೆಯ ಘನತೆಯನ್ನು ರಾಜಕೀಯ ಲಾಭಕ್ಕೆ ಒಡ್ಡಬಾರದು ಎನ್ನುವ ವಿವೇಕವೂ ಇರಬೇಕಾಗುತ್ತದೆ. ಆದ್ದರಿಂದ ಭಾರತದ

ಪುಟ 4 ಕ್ಕೆ

ಈ ವಾರ

ಟಿಕೆಟ್ ಗಾಗಿ ಅಂತರ್ ಯುದ್ಧಗಳು

ಎಸ್.ವೈ. ಗುರುಶಾಂತ್

'ಯುದ್ಧ ನಡೆಯುವುದು ರಣರಂಗದಲ್ಲಾದರೂ ಅದು ಆರಂಭಗೊಳ್ಳುವುದು ನಮ್ಮೊಳಗೆ' ಎನ್ನುವ ಮಾತಿದೆ. ಚುನಾವಣೆ ಘೋಷಣೆ ಹತ್ತಿರವಾಗುತ್ತಿರುವಾಗ ಸ್ಪರ್ಧೆಗೆ ಸಂಬಂಧಿಸಿ ಪ್ರತಿಯೊಂದು ರಾಜಕೀಯ ಪಕ್ಷವೂ ಅಭ್ಯರ್ಥಿಯ ಆಯ್ಕೆಯನ್ನೂ ಒಳಗೊಂಡು 'ಸರ್ವ' ಸಿದ್ಧತೆಯ ತಾಲೀಮು ನಡೆಸುತ್ತಿವೆ. ಆಯಾ ಪಕ್ಷಗಳ ಒಳಗೂ ಅಂತರ್ ಯುದ್ಧ ನಡೆಯುತ್ತಿದೆ. ಎಂದಿನಂತೆ ಚುನಾವಣೆ ಹತ್ತಿರದ ಕೆಲವು ತಿಂಗಳ ಮೊದಲು ರಾಜಕೀಯ ಚಟುವಟಿಕೆಗಳಿಗೆ ಇಳಿಯುತ್ತಿದ್ದ ಬಹುತೇಕ ಪಕ್ಷಗಳು ಈ ಬಾರಿ ವರ್ಷಕ್ಕೂ ಮೊದಲೇ ಕಣ ಸಿದ್ಧತೆಗೆ ಧುಮುಕಿದ್ದವು. ಈಗಾಗಲೇ ಹಲವು ಸುತ್ತಿನ ರಾಜಕೀಯ ಪ್ರಚಾರ ಯಾತ್ರೆಗಳನ್ನು ರಾಜ್ಯದಾದ್ಯಂತ ಮುಗಿಸಿಯೂ ಆಗಿದೆ.

ಈಗ ಪ್ರತಿ ಕ್ಷೇತ್ರವಾರು ಅಭ್ಯರ್ಥಿಗಳ ಆಯ್ಕೆಗೆ ಪಟ್ಟಿ ಸಿದ್ಧತೆ. ಹೀಗಾಗಿ ಎಲ್ಲೆಲ್ಲೂ ಬಿರುಸಿನ ಚಟುವಟಿಕೆ, ದೆಹಲಿಗೆ ನಾಯಕರ ಓಡಾಟ, ಅವರ ಹಿಂದೆ ಹಿಂಬಾಲಕರ ಪರದಾಟ.

* * *

ರಾಜ್ಯದ ಪ್ರಮುಖ ಪಕ್ಷಗಳು ವಿಶೇಷವಾಗಿ ಅಧಿಕಾರದ ಗದ್ದುಗೆ ಹಿಡಿಯುವ 'ಭರವಸೆ' ಇಟ್ಟುಕೊಂಡಿರುವ, ಬಿಜೆಪಿ, ಕಾಂಗ್ರೆಸ್ ಪಕ್ಷಗಳಲ್ಲಿ ಟಿಕೇಟ್ ಆಕಾಂಕ್ಷಿಗಳ ವರಸೆ, ಈ ಪಕ್ಷಗಳತ್ತ ವಲಸೆ ಜೋರಾಗಿದೆ. ತಮ್ಮದೇನಿದ್ದರೂ 'ಕಿಂಗ್ ಮೇಕರ್' ಪಾತ್ರ, ತಮ್ಮನ್ನು ಯಾರೂ ನಿರ್ಲಕ್ಷಿಸಲು ಸಾಧ್ಯವೇ ಇಲ್ಲ ಎಂದು ಗಟ್ಟಿಯಾಗಿ ನಂಬಿರುವ ಜಾತ್ಯಾತೀತ ಜನತಾ ದಳವೂ ಈ ಟಿಕೆಟ್ ಬೇಡಿಕೆ, ಒತ್ತಡಗಳಿಂದ ಹೊರತಾಗಿಲ್ಲ. ಒಟ್ಟಾರೆ ಈ ಎಲ್ಲ ಪಕ್ಷಗಳ ಒಳಗೆ ಭಾರಿ ಭಿನ್ನಮತ, ಬಂಡಾಯದ ಸ್ಫೋಟಗಳು ನಡೆಯುತ್ತಲೇ ಇವೆ. ಒಂದು ಪಕ್ಷದಲ್ಲಿ ಟಿಕೇಟ್ ಸಿಗದಿದ್ದರೆ ಇನ್ನೊಂದು ಪಕ್ಷದತ್ತ ಮುಖ ಮಾಡುವವರಿಗೂ ಕಡಿಮೆ ಏನಿಲ್ಲ. ಪಕ್ಷ ಬಿಟ್ಟು ಬೇರೆ ಪಕ್ಷಕ್ಕೆ ಹೋಗುವ, ಕೆಲವರನ್ನು ಗುರಿಯಾಗಿಸಿ ಸೆಳೆಯುವ ಕಸರತ್ತು ಆಂತರಿಕವಾಗಿ, ಬಹಿರಂಗವಾಗಿಯೂ ನಡೆದಿವೆ. ಪಕ್ಷಗಳ ಒಳಗೇ ಪೈಪೋಟಿ, ಗುದ್ದಾಟಗಳೂ ನಡೆದಿವೆ. ಕಣಕ್ಕಿಳಿದಾಗ ನಡೆಯುವ ಹೋರಾಟಕ್ಕಿಂತಲೂ ಅದರ ಪೂರ್ವಭಾವಿಯಾಗಿ ನಡೆಯುತ್ತಿರುವ ಬಡಿದಾಟಗಳು ರೋಚಕವಾಗಿವೆ. ಇದು ಬಹುತೇಕ ಈ ಬಣ ಬಡಿದಾಟದ ರಾಜಕೀಯ ಯಾವ ಪಕ್ಷವನ್ನು ಬಿಟ್ಟಿಲ್ಲ. ಇವರ ಬಡಿದಾಟಗಳನ್ನು ನಿಯಂತ್ರಣಕ್ಕೆ ತರುವ, ಸರಿಪಡಿಸುವ ಕೆಲಸದಲ್ಲಿ ಆ ಪಕ್ಷಗಳ ಹೈಕಮಾಂಡ್ ಗಳು ಹೈರಾಣಾಗಿ ಹೋಗುತ್ತಿವೆ.

* * *

'ಅಭ್ಯರ್ಥಿಗಳ ಆಯ್ಕೆಗೆ ಮಾನದಂಡಗಳೇನು?' ಎಂಬ ಪ್ರಶ್ನೆಗೆ 'ಗೆಲ್ಲುವ ಸಾಮರ್ಥ್ಯ' ಎನ್ನುತ್ತಾರೆ ಕೆ.ಪಿ.ಸಿ.ಸಿ.ಅಧ್ಯಕ್ಷ ಡಿ.ಕೆ.ಶಿವಕುಮಾರ್. ಗೆಲ್ಲುವ ಸಾಮರ್ಥವನ್ನು ಅಳೆಯುವ ಮಾನದಂಡ ಏನು ಎಂಬುದಕ್ಕೆ ಬಹಿರಂಗವಾಗಿ ಅವರು ಉತ್ತರಿಸಿಲ್ಲ. ಆದರೆ ಟಿಕೇಟ್ ಗೆ ಅರ್ಜಿ ಹಾಕಿ ಇಂಟರ್ ವ್ಯೂ ಗೆ ಹಾಜರಾದ ಆಕಾಂಕ್ಷಿಯೊಬ್ಬರ ಹೇಳಿಕೆಯಂತೆ' ನಿಮ್ ಹತ್ರ ಎಷ್ಟು ಕೋಟಿಗಳು ಇದೇರೀ? ಪಕ್ಷದ ಫಂಡ್ ಗೆ ಎಷ್ಟು ಕೊಡ್ತೀರಿ? ಎಲೆಕ್ಷನ್ ನಲ್ಲಿ ಎಷ್ಟು ಖರ್ಚು ಮಾಡ್ತೀರಿ?' . ಇದು ಆಯ್ಕೆಗೆ ಒಂದು ಮುಖ್ಯ ಮಾನದಂಡ! ಸಾರ್ವಜನಿಕ ರಂಗದಲ್ಲಿ ಅವರ ಸೇವೆ ಅನುಭವ ಮತ್ತು ಆ ಪಕ್ಷಕ್ಕೆ, ಅದರ ತತ್ವಕ್ಕೆ ಇರುವ ನಿಷ್ಠೆ ಗೆ ಜಾಗ ಎಲ್ಲಿ? ರಾಜ್ಯದ ಕ್ಷೇತ್ರಗಳ ಸ್ಥಿತಿ ಗತಿ, ಅಭ್ಯರ್ಥಿಗಳ ಬಲಾಬಲಗಳ ಬಗ್ಗೆ ನಾಲ್ಕು ಸುತ್ತಿನ ಸರ್ವೆ ಮಾಡಿಸಿದ್ದಾರಂತೆ ಕೆ.ಪಿ.ಸಿ.ಸಿ.ಅಧ್ಯಕ್ಷರು. ನಿಜ ಇದೂ ಕೂಡ ಖರ್ಚಿನ ಬಾಬ್ತೇ! ಇದು ಕೇವಲ ಈ ಪಕ್ಷಕ್ಕೆ ಮಾತ್ರ ಸೀಮಿತವಲ್ಲ. ಬಹುತೇಕ ಪಕ್ಷಗಳು ಈ ಸರ್ವೆ ಏಜನ್ಸಿಗಳನ್ನೇ ನಂಬಿ ಸ್ಪರ್ಧೆಗೆ ಇಳಿಯಲಿವೆ. ಹಿಂದೆ ನಾಯಕತ್ವ ನೆಲಮೂಲದ ಅನುಭವಗಳಿಂದ ನಿರ್ಧರಿಸುತ್ತಿತ್ತು. ಈಗ ಆಧುನಿಕ ಮಾಹಿತಿ ತಂತ್ರಜ್ಞಾನ, ಏಜನ್ಸಿಗಳ ಸಮೀಕ್ಷೆ. ಅನೇಕ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳ ಆಯ್ಕೆಯಲ್ಲಿ, ಚುನಾವಣಾ ಪ್ರಚಾರದ ವಿಷಯಗಳನ್ನು ನಿರ್ಧರಿಸುವಲ್ಲಿ ಇದೇ ಏಜನ್ಸಿಗಳ ಸೂಚನೆಗಳೇ ನಿರ್ಧಾರಕ ಎನ್ನುವುದರಲ್ಲಿ ಅನುಮಾನವಿಲ್ಲ. ಹೀಗಾಗಿ ಅಭ್ಯರ್ಥಿಗಳು ಈಗ ಆಯ್ಕೆಯಾದರೂ ಕೊನೆ ಗಳಿಗೆಯಲ್ಲಿ ದಿಢೀರನೇ ಬದಲಾದರೂ ಆಶ್ಚರ್ಯವೇನಿಲ್ಲ. ಮಾಜಿ ಮುಖ್ಯಮಂತ್ರಿ ಸಿದ್ಧರಾಮಯ್ಯನಂತಹವರೇ ಇನ್ನು ಸ್ಪರ್ಧಿಸುವ ಕ್ಷೇತ್ರವೊಂದನ್ನು ಖಚಿತವಾಗಿ ಆಯ್ಕೆ ಮಾಡಲು ಆಗಿಲ್ಲ ಎನ್ನುವುದೇ ಸಂದರ್ಭದ ವ್ಯಂಗ್ಯ. ಕೋಲಾರ ಎಂದಿದ್ದ ಅವರು ಈಗ ಸರ್ವೆ, ರೀ ಸರ್ವೆ, ಹೊರಗಿನ ವಾತಾವರಣ, ಒಳ ಬಂಡಾಯಗಳ ಬೇಗುದಿಯನ್ನು ಎದುರಿಸುತ್ತಾ, ಹೊಸ ಕ್ಷೇತ್ರಗಳತ್ತ ನೋಡುತ್ತಾ ಬಿಜೆಪಿ ಪಕ್ಷದ ನಾಯಕರ ಲೇವಡಿಗಳಿಗೆ ಆಹಾರವಾಗಿದ್ದಾರೆ.

* * *

ಬಂಡಾಯ, ಬಾಣ ಬಿರುಸುಗಳಿಗೆ ಅತೀ ಹೆಚ್ಚು ಒಳಗಾಗುತ್ತಿರುವುದು ಬಿಜೆಪಿ ಅನಿಸುತ್ತಿದೆ.

ಆಶ್ಚರ್ಯ ಎನ್ನುವಂತೆ ಅನಾದಿ ಕಾಲದಿಂದಲೂ ತಾವು ಗುರು ಶಿಷ್ಯರು ಎನ್ನುತ್ತಿದ್ದ ಸಚಿವ ವಿ. ಸೋಮಣ್ಣ ಮತ್ತು ಬಿ.ಎಸ್.ಯಡಿಯೂರಪ್ಪ ನವರ ನಡುವೆ ನಡೆದಿರುವ ಬಿರುಸಿನ ವಾಗ್ವಾದಗಳು, ಇನ್ನೊಂದು ಮಗ್ಗುಲಲ್ಲಿ ಪರಸ್ಪರ ಕೊಡುತ್ತಿರುವ ಒಳ ಗುದ್ದುಗಳು. ಈ ಕದನದ ಮೂಲ ಕೇಂದ್ರ ವಸ್ತುಗಳು ಅವರ ಮಕ್ಕಳೇ! ಲಿಂಗಾಯತರ ಪ್ರಶ್ನಾತೀತ ನಾಯಕರಾಗಿ ಬಿ.ಎಸ್. ವೈ. ಮಾತ್ರವೇ ಇರಬೇಕೆಂದು, ಅವರ ನಂತರದಲ್ಲಿ ಆ ಸ್ಥಾನವನ್ನು ಅವರ ಮಗ ಬಿ ವೈ ವಿಜಯೇಂದ್ರನಿಗೆ ಸಿಕ್ಕಬೇಕೆಂದೂ ಬಯಸುತ್ತಿದ್ದಾರೆ ಅವರು. 'ಆ ಕಾರಣದಿಂದ ನನ್ನನ್ನು ನನ್ನ ಮಗನನ್ನು ಮೂಲೆಗುಂಪು ಮಾಡಲು ಯತ್ನಿಸುತ್ತಿದ್ದಾರೆ' ಎನ್ನುವುದು ಸಚಿವ ಸೋಮಣ್ಣನವರ ಆರೋಪ. ತಮ್ಮ ಉಸ್ತುವಾರಿಯಲ್ಲಿರುವ ಚಾಮರಾಜನಗರ ಜಿಲ್ಲೆಯ ಎಲ್ಲ ವ್ಯವಹಾರಗಳಲ್ಲೂ ವಿಜಯೇಂದ್ರ ಮೂಗು ತೂರಿಸುತ್ತಿದ್ದಾನೆ ಮತ್ತು ಹನೂರು ಕ್ಷೇತ್ರದ ಅಭ್ಯರ್ಥಿಯನ್ನಾಗಿಸಲು ತನ್ನ ಮಗ ಅರುಣನಿಗೆ ಅಡ್ಡಿಯಾಗುತ್ತಿದ್ದಾನೆ ಎನ್ನುವ ಆರೋಪ ಸೋಮಣ್ಣನವರದು. ಒಂದು ಹಂತದಲ್ಲಿ 'ಯಡಿಯೂರಪ್ಪನವರಿಗೆ ಯಡಿಯೂರಪ್ಪನವರೇ ಸಾಟಿ, ಸೋಮಣ್ಣನಿಗೆ ಈ ಸೋಮಣ್ಣನಿಗೆ ಸಾಟಿ. ನಾನು ಎಲೆಕ್ಷನ್ ಸ್ಟ್ರ್ಯಾಟಜಿಸ್ಟ್ ಗೊತ್ತಾ' ಅಂತಾನೂ ಸೋಮಣ್ಣ ನವರು ಗುಟುರು ಹಾಕಿದ್ದಾರೆ. ಈ ಪ್ರಶ್ನೆ ಇತ್ಯರ್ಥವಾಗದಿದ್ದರೆ ಬಿಜೆಪಿ ತೊರೆದು ಕಾಂಗ್ರೆಸ್ಸಿಗೆ ವಲಸೆ ಹೋಗಲೂ ಸಿದ್ಧವಾಗಿದ್ದಾರೆ. ಕಳೆದ ವರ್ಷದಿಂದಲೂ ಆ ಸಿದ್ಧತೆ ಮತ್ತು ಪ್ರಮುಖ ಕೈ ನಾಯಕರ ಸಂಪರ್ಕದಲ್ಲಿದ್ದಾರೆ ಎನ್ನಲಾಗುತ್ತಿದೆ. ಈ ವಿವಾದ ಅಂತಿಮವಾಗಿ ಕೇಂದ್ರದ ಅಮಿತ್ ಶಾ ಅವರಿಗೂ ತಲುಪಿದೆ. ದುಡುಕಿ ಯಾವುದೇ ತೀರ್ಮಾನ ಮಾಡದಂತೆ, ಚುನಾವಣೆ ಮುಗಿಯಲಿ ಎಂದು ಶಾ ಹೇಳಿದ್ದಾರೆ ಎನ್ನುವ ಸುದ್ದಿಯೂ ಇದೆ. ಬಿ.ಎಸ್.ವೈ ಪ್ರಾಬಲ್ಯವನ್ನು ದುರ್ಬಲಗೊಳಿಸಲು ಬಿಜೆಪಿ ಹೈಕಮಾಂಡ್ ಸತತವಾಗಿ ಪ್ರಯತ್ನಿಸುತ್ತಿರುವುದು ಇದ್ದೇ ಇದೆ. ಆದರೆ ಬಿ.ಎಸ್.ವೈ. ಹೊರತುಪಡಿಸಿ ಬಿಜೆಪಿ ಗೆಲ್ಲುವುದು ಕೂಡ ಕಷ್ಟ ಸಾಧ್ಯ ಎನ್ನುವ ಲೆಕ್ಕಾಚಾರವು ಇದೆಯಲ್ಲ. ಹಾಗಾಗಿ ಬಿ.ಎಸ್.ವೈ. ಪ್ರಾಬಲ್ಯವನ್ನು ದುರ್ಬಲಗೊಳಿಸುತ್ತಲೇ, ವಿಜೆಯೇಂದ್ರ ತುಂಬಾ ಪ್ರಾಮುಖ್ಯತೆ ಪಡೆಯದಂತೆಯೂ ನೋಡಿಕೊಳ್ಳುವ ಪ್ರಯತ್ನ ಜೊತೆಯಲ್ಲೇ ನಡೆಯುತ್ತಿರುವುದು ಸುಳ್ಳೇನಲ್ಲ.

ಬಿ.ಎಸ್.ಯಡಿಯೂರಪ್ಪನವರ ಮೇಲೆ ಹರಿಹಾಯುವಂತೆ ಸಿ.ಟಿ. ರವಿ ಅವರನ್ನು ಬಿಟ್ಟಿರುವುದು ಅದೇ ಹೈಕಮಾಂಡ್ ಎನ್ನುವುದೂ ಗುಟ್ಟೇನಲ್ಲ. ಒಂದು ಪ್ರಸಂಗದಲ್ಲಿ ಸಿ.ಟಿ.ರವಿ ಆಡಿದ

ಪುಟ 06 ಕ್ಕೆ

ಕನಿಷ್ಟ ಪಿಂಚಣಿ ಹೆಚ್ಚಿಸಲು ಹೋರಾಟ ತೀವ್ರಗೊಳಿಸಿ; ಎ.ಕೆ.ಪದ್ಮನಾಭನ್ ಕರೆ

ವರದಿ: ವಾ. ಉಚ್ಚಿಲ್

ಭವಿಷ್ಯ ನಿಧಿಯಲ್ಲಿ ಪಿಂಚಣಿ ಪಡೆಯುತ್ತಿರುವ 73 ಲಕ್ಷ ಪಿಂಚಣಿದಾರರಲ್ಲಿ ಸುಮಾರು 24 ಲಕ್ಷ ಪಿಂಚಣಿದಾರರು ಕನಿಷ್ಟ ಪಿಂಚಣಿ ವ್ಯಾಪ್ತಿಯಲ್ಲಿ ಇದ್ದಾರೆ. ಇವರಿಗೆ ತಿಂಗಳಿಗೆ 1,000 ಮತ್ತು ಅದಕ್ಕಿಂತಲೂ ಕಡಿಮೆ ಪಿಂಚಣಿ ಸಿಗುತ್ತದೆ. 2014ರ ನಂತರ ಕನಿಷ್ಟ ಪಿಂಚಣಿಯಲ್ಲಿ ಏರಿಕೆ ಆಗಿರುವುದಿಲ್ಲ. ಪಿಂಚಣಿ ಹೆಚ್ಚಿಸಲು ಹತ್ತು ಹಲವು ಸಮಿತಿಗಳನ್ನು ಸರಕಾರ ರಚನೆ ಮಾಡಿದೆ. ಆದರೆ ಅವುಗಳ ವರದಿಯನ್ನು ಬಹಿರಂಗ ಮಾಡುವುದಿಲ್ಲ ಮತ್ತು ಜ್ಯಾರಿ ಮಾಡುವುದೂ ಇಲ್ಲ. ಪಿಂಚಣಿ ಅನ್ನುವುದು ಕಾರ್ಮಿಕರ ಹಕ್ಕು, ಅದು ಸರಕಾರದ ದ'ಂು'ಾಬಿ ಕ್ಷ್ಂು'ಾಲ್ಲ ಅನ್ನುವ ಮಾತನ್ನು ಸುಪ್ರಿಂಕೋರ್ಟ್ ಹೇಳಿದೆ. ಆದರೂ ಸರಕಾರಕ್ಕೆ ಕಿವಿ ಕೇಳಿಸುವುದಿಲ್ಲ. ಆದುದರಿಂದ ಪಿಂಚಣಿದಾರರು ತಮ್ಮ ಸಂಘಟನೆಯನ್ನು ಬಲಗೊಳಿಸಿ ಬೀದಿಗಿಳಿದು ಹೋರಾಟಕ್ಕೆ ಮುಂದಾಗಬೇಕು ಎಂದು ಸಿ.ಬಿ.ಟಿ. ಸದಸ್ಯರೂ ಸಿಐಟಿಯು ಅಖಿಲ ಭಾರತ ಉಪಾಧ್ಯಕ್ಷರೂ ಆದ ಎ.ಕೆ. ಪದ್ಮನಾಭನ್ ಕರೆ



ನೀಡಿದರು.

ಅವರು ಮಾರ್ಚ್ 14ರಂದು ಮಂಗಳೂರಿನ ಕುದ್ಮುಲ್ ರಂಗರಾವ್ ಪುರಭವನದಲ್ಲಿ ಪಿ.ಎಫ್. ಪಿಂಚಣಿದಾರರ ದ.ಕ. ಜಿಲ್ಲಾ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಮತ್ತೋರ್ವ ಅತಿಥಿ ಪಿಎಫ್‌ಪಿಎಯ ಅಖಿಲ ಭಾರತ ಕನ್ವೀನರ್ ಎಂ. ಧರ್ಮಜಂ, ಕಾಸರಗೋಡು ಜಿಲ್ಲಾ ಕಾರ್ಯದರ್ಶಿ ಕಾರ್ಯಾಂಬು, ಬೇಬಿ ಶೆಟ್ಟಿ ಮಾತನಾಡಿದರು. ಜೆ. ಬಾಲಕೃಷ್ಣ ಶೆಟ್ಟಿ ಸಭೆಯ ಅಧ್ಯಕ್ಷತೆ ವಹಿಸಿದರು. ಯು.ಬಿ. ಲೋಕಯ್ಯ, ವಸಂತ ಆಚಾರಿ, ಸುನಿಲ್ ಕುಮಾರ್ ಬಜಾಲ್, ಪ್ರೇಮ ಮಂಜೇಶ್ವರ, ಸುಂದರ ಕುಂಪಲ, ವಿಲಾಸಿನಿ ತೊಕ್ಕೊಟ್ಟು, ಜಯಂತಿ ಬಿ. ಶೆಟ್ಟಿ, ಪದ್ಮಾವತಿ ಶೆಟ್ಟಿ, ರಾಧಾ ಮೂಡಬಿದ್ರೆ, ನೋಣಯ್ಯ ಗೌಡ ಉಪಸ್ಥಿತರಿದ್ದರು. ಆರಂಭದಲ್ಲಿ ಸುಕುಮಾರ್ ತೊಕ್ಕೊಟ್ಟು ಸ್ವಾಗತಿಸಿ, ಸದಾಶಿವ ದಾಸ್ ಧನ್ಯವಾದವಿತ್ತರು.

ಕಾರ್ಖಾನೆ ಕಾಯ್ದೆಗೆ ತಿದ್ದುಪಡಿ ವಿರೋಧಿಸಿ ಉಡುಪಿಯಲ್ಲಿ ಪ್ರತಿಭಟನೆ:

ಕಾರ್ಖಾನೆ ಕಾಯ್ದೆಗೆ ಕಾರ್ಮಿಕ ವಿರೋಧಿ ತಿದ್ದುಪಡಿಯನ್ನು ವಿರೋಧಿಸಿ ಸಿಐಟಿಯು ಉಡುಪಿ ಮತ್ತು ಬ್ರಹ್ಮಾವರ ವಲಯ ಸಮಿತಿಗಳ ನೇತೃತ್ವದಲ್ಲಿ ಮಾರ್ಚ್ 13 ರಂದು ಉಡುಪಿ ಜಿಲ್ಲಾಧಿಕಾರಿಗಳ ಕಚೇರಿ ಎದುರು ಕಾಯ್ದೆಯ ತಿದ್ದುಪಡಿ ಪ್ರತಿಯನ್ನು ಸುಟ್ಟು ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯನ್ನು ಉದ್ದೇಶಿಸಿ ಉಡುಪಿ ಜಿಲ್ಲಾ ಸಿಐಟಿಯು ಮುಖಂಡ ಹಾಗೂ ಕಟ್ಟಡ ನಿರ್ಮಾಣ ಕಾರ್ಮಿಕರ ಸಂಘದ ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ಮಾತನಾಡಿದರು. ಪ್ರತಿಭಟನೆಯಲ್ಲಿ ಮುಖಂಡರಾದ ವಾಮನ ಪೂಜಾರಿ, ಸಿಐಟಿಯು ಬ್ರಹ್ಮಾವರ ತಾಲೂಕು ಮುಖಂಡರಾದ ಸುಬಾಸ್ ನಾಯಕ್, ಉಮೇಶ್ ಕುಂದರ್, ಮನೋಹರ್, ವಾಮನ ಪಡುಬಿದ್ರಿ ಭಾಗವಹಿಸಿದ್ದರು.

ಕಾರ್ಮಿಕ ಕಲ್ಯಾಣ ಮಂಡಳಿಯ ಹಣದ ದುರುಪಯೋಗದ ವಿರುದ್ಧ ಕುಂದಾಪುರದಲ್ಲಿ ಪ್ರತಿಭಟನೆ:

ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೇ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಹಣವನ್ನು ಕಾರ್ಮಿಕರ ಕಲ್ಯಾಣಕ್ಕೆ ವಿನಿಯೋಗಿಸುವುದನ್ನು ಕೈಬಿಟ್ಟು ಮತ ಬ್ಯಾಂಕಿಗಾಗಿ ಕಿಟ್ ಖರೀದಿಸಿ ರಾಜಕೀಯ ಸಮಾವೇಶದಲ್ಲಿ ವಿತರಣೆ ಮಾಡುವುದರ ವಿರುದ್ಧ ಕುಂದಾಪುರ ತಾಲೂಕು ಕಟ್ಟಡ ಕಾರ್ಮಿಕರ ಸಂಘದ ನೇತೃತ್ವದಲ್ಲಿ ಮಾರ್ಚ್ 13ರಂದು ಕುಂದಾಪುರದ ಶಾಸ್ತ್ರಿ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಕಟ್ಟಡ ಕಾರ್ಮಿಕರ ಮಕ್ಕಳ ಶೈಕ್ಷಣಿಕ ಧನ ಸಹಾಯಕ್ಕಾಗಿ ಸಲ್ಲಿಸುವ ಅರ್ಜಿಯ ನಿಯಮ ಬದಲಾವಣೆ ಅನಗತ್ಯವಾಗಿದ್ದು, ಹಿಂದಿನ ಅರ್ಜಿ ನಿಯಮದಂತೆಯೇ ಧನಸಹಾಯ ಮಂಜೂರು ಮಾಡಬೇಕೆಂದು ಆಗ್ರಹಿಸಲಾಯಿತು.

ಬೀದಿ ಬದಿ ವ್ಯಾಪಾರಿಗಳಿಂದ ಮುಖ್ಯಮಂತ್ರಿಗೆ ಮುತ್ತಿಗೆ ಯತ್ನ:


ಮಂಗಳೂರು ಮಹಾನಗರ ಪಾಲಿಕೆಯು ಬೀದಿ ಬದಿ ವ್ಯಾಪಾರಿಗಳಿಗೆ 2014ರ ಬೀದಿ ಬದಿ ವ್ಯಾಪಾರಸ್ಥರ ಜೀವನೋಪಾಯ ಸಂರಕ್ಷಣೆ ಮತ್ತು ನಿಯಂತ್ರಣ ಕಾಯ್ದೆ ಮತ್ತು 2019ರ ಕರ್ನಾಟಕ ಬೀದಿ ಬದಿ ವ್ಯಾಪಾರ ನಿಯಮದಂತೆ ನಗರದಲ್ಲಿ ಬೀದಿ ಬದಿ ವ್ಯಾಪಾರಕ್ಕೆ ಅವಕಾಶ ನೀಡದೆ ಪಾಲಿಕೆ ಅಧಿಕಾರಿಗಳು ದಾಳಿ ನಡೆಸುತ್ತಿರುವುದನ್ನು ಖಂಡಿಸಿ ಮಾರ್ಚ್ 15ರಂದು ಮಂಗಳೂರು ನಗರಕ್ಕೆ ಆಗಮಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರಿಗೆ ಬೀದಿ ಬದಿ ವ್ಯಾಪಾರಿಗಳು ಮುತ್ತಿಗೆ ಹಾಕಲು ಯತ್ನಿಸಿದರು.

ಮಂಗಳೂರಿನಲ್ಲಿ ನಿರಂತರ ಮನವಿ ಮತ್ತು ಹೋರಾಟಗಳ ಮೂಲಕ ಪಾಲಿಕೆ ಅಧಿಕಾರಿಗಳಿಗೆ ತಮ್ಮ ಸಮಸ್ಯೆ ಅರಿಕೆ ಮಾಡುತ್ತಿದ್ದರೂ, ಅಧಿಕಾರಿಗಳು ನಿರ್ಲಕ್ಷ್ಯ ತೋರುವುದನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರಲು ಅವರು ಭಾಗವಹಿಸಿದ ಕರಾವಳಿ ಉತ್ಸವ ಕಾರ್ಯಕ್ರಮದ ಮುಖ್ಯದ್ವಾರದ ಬಳಿ ಅವರ ನಿರೀಕ್ಷೆಯಲ್ಲಿ ಬೀದಿ ಬದಿ ವ್ಯಾಪಾರಸ್ಥರ ಶ್ರೇಯೋಭಿವೃದ್ಧಿ ಸಂಘದ ಸದಸ್ಯರು, ಗೌರವ ಅಧ್ಯಕ್ಷ ಬಿ.ಕೆ. ಇಮ್ತಿಯಾಜ್ ಮತ್ತು ಸಿಐಟಿಯು ಮುಖಂಡ ಸುನಿಲ್ ಕುಮಾರ್ ಬಜಾಲ್ ನೇತೃತ್ವದಲ್ಲಿ ಕಾದು ನಿಂತಿದ್ದರು. ಪೊಲೀಸರು ಮುಖ್ಯಮಂತ್ರಿಗಳ ಭೇಟಿಗೆ ಅವಕಾಶ ನೀಡದಿದ್ದಾಗ ಸದಸ್ಯರು ಮುತ್ತಿಗೆ ಹಾಕಲು ಮುಂದಾದರು. ಆಗ ಪೊಲೀಸರು ಪಟ್ಟು ಸಡಿಲಿಸಿ, ಸಂಘದ 10 ಮಂದಿ ಪ್ರತಿನಿಧಿಗಳಿಗೆ ಗಣ್ಯರ ಗ್ಯಾಲರಿಯಲ್ಲಿ ಕುಳಿತುಕೊಳ್ಳಲು ಅವಕಾಶ ಮಾಡಿಕೊಟ್ಟರು. ಸಭೆ ಮುಗಿದ ಬಳಿಕ ಬೀದಿ ವ್ಯಾಪಾರಿಗಳು ಘೋಷಣೆ ಕೂಗುತ್ತಾ ಮುಖ್ಯಮಂತ್ರಿ ಕಡೆ ಸಾಗಲು ಮುಂದಾದಾಗ ಮುಖ್ಯಮಂತ್ರಿಗಳೇ ತಾನಾಗಿ ಮುಂದೆ ಬಂದು ವ್ಯಾಪಾರಿಗಳ ಪ್ರತಿನಿಧಿಗಳಿಂದ ಮನವಿ ಸ್ವೀಕರಿಸಿ ಕ್ರಮಕೈಗೊಳ್ಳಲು ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು.

ಪ್ರತಿಭಟನೆಯ ನೇತೃತ್ವವನ್ನು ಬಿ.ಕೆ. ಇಮ್ತಿಯಾಜ್, ಸುನಿಲ್ ಕುಮಾರ್ ಬಜಾಲ್, ಸಂಘದ ಅಧ್ಯಕ್ಷ ಮುಹಮ್ಮದ್ ಮುಸ್ತಾಫ, ಕಾರ್ಯದರ್ಶಿ ಹರೀಶ್ ಪೂಜಾರಿ ಮತ್ತು ಸಂಘದ ಪದಾಧಿಕಾರಿಗಳು ವಹಿಸಿದ್ದರು.

ಸಾಮಾಜಿಕ ಕಾರ್ಯಕರ್ತ, ಪಕ್ಷದ ಸದಸ್ಯ ಗಂಗಾಧರ ಶೆಟ್ಟಿ ಉಳ್ಳಾಲ ನಿಧನ:

ಗಂಗಾಧರ ಶೆಟ್ಟಿ ಉಳ್ಳಾಲ (75 ವರ್ಷ) ಅವರು ಮಂಗಳೂರಿನಲ್ಲಿ ಹಂಚು ಕಾರ್ಖಾನೆ ಕಾರ್ಮಿಕರಾಗಿ, ಕಾರ್ಮಿಕ ಸಂಘಟನೆಯಲ್ಲಿ ಸಕ್ರಿಯವಾಗಿದ್ದವರು. ಕೆಲಸ ತ್ಯಜಿಸಿ ಮುಂದೆ ಉಳ್ಳಾಲ ಪ್ರದೇಶದಲ್ಲಿ ಸಾಕ್ಷರತಾ ಕಾರ್ಯಕರ್ತರಾಗಿ, ಗ್ರಾಮ ಸ್ವರಾಜ್ ಹಾಗೂ ಸ್ವಚ್ಛತಾ ಅಭಿಯಾನದ ಸಾಮಾಜಿಕ ಕಾರ್ಯಕರ್ತರಾಗಿಯೂ ದುಡಿದಿದ್ದವರು. ಕಾರ್ಮಿಕರಾಗಿದ್ದಾಗ ಮಂಗಳೂರು ಸಮುದಾಯದ ವಾರ್ಡ್ ನಂಬರ್ ಆಜಿ ಯಂಥ ರಂಗನಾಟಕದಲ್ಲೂ ಸಮುದಾಯ ಹಾಗೂ ಸಾಕ್ಷರತಾ ಆಂದೋಲನದ ಹಲವಾರು ಬೀದಿ ನಾಟಕಗಳಲ್ಲೂ ಸಕ್ರಿಯ ಪಾತ್ರ ವಹಿಸಿದವರು. ಐಕ್ಯರಂಗ, ಜನಶಕ್ತಿ ಪತ್ರಿಕೆಯ ವಿತರಕರಾಗಿಯೂ ಉಳ್ಳಾಲ ಪ್ರದೇಶದಲ್ಲಿ ಮನೆ ಮನೆಗೆ ಪತ್ರಿಕೆ ತಲುಪಿಸಿದವರು.



ಸಿಪಿಐ(ಎಂ) ಪಕ್ಷದ ಸಕ್ರಿಯ ಕಾರ್ಯಕರ್ತರಾಗಿದ್ದ ಗಂಗಾಧರ ಶೆಟ್ಟಿಯವರು ಅಲ್ಪಕಾಲದ ಅಸೌಖ್ಯದಿಂದ ಮಾರ್ಚ್ 15ರಂದು ನಿಧನರಾಗಿದ್ದಾರೆ. ಅವರ ಪಾರ್ಥಿವ ಶರೀರಕ್ಕೆ ಗೌರವಾರ್ಪಣೆ ಸಲ್ಲಿಸಲು ಸಿಪಿಐ(ಎಂ) ದ.ಕ. ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿ, ಮುನೀರ್ ಕಾಟಿಪಳ್ಳ, ಉಳ್ಳಾಲ ಸಿಪಿಐ(ಎಂ) ಮುಖಂಡ ಕೃಷ್ಣಪ್ಪ ಸಾಲ್ಯಾನ್, ಯು. ಜಯಂತನಾಯ್ಕ್, ಸಮುದಾಯದ ವಾಸುದೇವ ಉಚ್ಚಿಲ್, ಜಿಲ್ಲೆಯ ಹಿರಿಯ ಜನಶಿಕ್ಷಣ ಸಂಯೋಜಕರಾದ ಶೀನ ಶೆಟ್ಟಿ, ಕೃಷ್ಣ ಮೂಲ್ಯ, ಸ್ಥಳೀಯ ಬಿಜೆಪಿ ಹಾಗೂ ಕಾಂಗ್ರೆಸ್ ನಾಯಕರು ಭೇಟಿ ನೀಡಿ ಅವರ ಅಂತಿಮ ದರ್ಶನ ಪಡೆದರು.

ಗಂಗಾಧರ ಶೆಟ್ಟಿ ಉಳ್ಳಾಲ ರವರಿಗೆ ಜನಶಕ್ತಿ ಪತ್ರಿಕೆ ಕಂಬನಿ ಮಿಡಿದಿದ್ದು ಅವರ ಕುಟುಂಬಕ್ಕೆ ಸಾಂತ್ವನ ಮತ್ತು ಸಂತಾಪಗಳನ್ನು ತಿಳಿಸಿದೆ.

STATEMENT OF THE OWNERSHIP ETC

The Weekly Newspaper "JANASHAKTHI KANNADA VARA PATRIKE"

Form IV

(See Rule 8)

1.	Place of Publication	:	EMS Bhavana, No.37/A, 8th Cross, Mahalakshmi Layout, Bangalore-560086 (Karnataka)
2.	Periodicity of Publication	:	weekly
3.	Printer's Name	:	U. BASAVARAJ
	(Whether Citizen of India? If Foreigner, State the Country of Origin)	:	Indian
4.	Address	:	No. 12, 18th Cross, Sampangirama Nagar, Bangalore 560027
5.	Editor`s Name	:	NITYANANDASWAMI
	(Whether Citizen of India? If Foreigner, State the Country of Origin)	:	Indian
	Address	:	EMS Bhavana, No.37/A, 8th Cross, Mahalakshmi Layout, Bangalore-560086 (Karnataka)
6.	Name and address of Individuals Communist Party of India(Marxist) Who own the News paper and Karnataka State Committee partners or Shareholders holding more then one percent of the Total capital	:	EMS Bhavana, No.37/A, 8th Cross, Mahalakshmi Layout, Bangalore-560086 (Karnataka)

I U. BASAVARAJ, here by declare that the particulars given above are true to the best of my knowledge and belief.

Sd/-

U. BASAVARAJ

Publisher

Date : March 17, 2023

Bangalore

ಪ್ರಧಾನಿಗಳು ಸ್ಥಾನದ ಘನತೆಯನ್ನು ಕಾಪಾಡಿಕೊಳ್ಳುವುದು... ಪುಟ 3 ರಿಂದ

ಪ್ರಧಾನಿಗಳು ಕನಿಷ್ಠ ಆ ಸ್ಥಾನದ ಹುದ್ದೆ, ಘನತೆ ಗೌರವಗಳನ್ನು ಕಾಪಾಡುವುದರತ್ತ ಗಮನಹರಿಸಿ ತಿದ್ದಿಕೊಳ್ಳುವುದು ಅತಿ ಅಗತ್ಯ.

ತನ್ನ ಜನ ವಿರೋಧಿ ಮತ್ತು ಜನದ್ರೋಹದ ನೀತಿ ಕಾರ್ಯ ವಿಧಾನಗಳಿಂದಾಗಿ ಸೋಲುವ ಭೀತಿಯಲ್ಲಿರುವ ಬಿಜೆಪಿ ಪಕ್ಷ ತನ್ನ ತಪ್ಪುಗಳನ್ನು ತಿದ್ದಿಕೊಳ್ಳುವಂತೆ ಮಾಡುವುದು ಉನ್ನತ ನಾಯಕರ ಹೊಣೆಗಾರಿಕೆ. ಅದರ ಬದಲು ಅವೆಲ್ಲವನ್ನು ಸಮರ್ಥಿಸುವಂತೆ ಮತ್ತು ಜನತೆಯನ್ನ ಹಾದಿ ತಪ್ಪಿಸುವಂತಹ ಕಾರ್ಯದಲ್ಲಿ ಪ್ರಧಾನಿಗಳು ತೊಡಗುವುದು ಖಂಡಿತಕ್ಕೂ ಜಗತ್ತಿನ ಕಣ್ಣಲ್ಲಿ ಹಗುರವಾಗುವಂತೆ ಮಾಡುತ್ತದೆ ಎನ್ನುವುದು ಗಮನದಲ್ಲಿರಬೇಕು. ಆದರೆ ಇಲ್ಲಿ ಹಾದಿ ತಪ್ಪಿರುವುದು ಕೇವಲ ರಾಜ್ಯದ ನಾಯಕರು ಎನ್ನುವುದು ತಪ್ಪಾಗುತ್ತದೆ. ಸ್ವತಃ ಗೃಹ ಸಚಿವ ಅಮಿತ್ ಶಾ ರವರೆ ಪಕ್ಷದ ಪರವಾಗಿ ಕರ್ನಾಟಕದಲ್ಲಿನ ಚುನಾವಣೆಯ ಎಲ್ಲ ಉಸ್ತುವಾರಿಯನ್ನು ವಹಿಸಿಕೊಂಡಿದ್ದಾರೆ. ಯಾಕೆಂದರೆ ಇವೆಲ್ಲವೂ ಎಲ್ಲವನ್ನು ನಿಯಂತ್ರಿಸುವ ಕೇಂದ್ರದ ನಾಯಕತ್ವದ ಹೊಣೆಗಾರಿಕೆಯೇ ಇಲ್ಲಿ ಪ್ರಮುಖವಾಗಿದೆ ಎನ್ನುವ ಅಂಶವನ್ನು ಮರೆಯುವಂತಿಲ್ಲ. ಅಂದರೆ ಸರಿ ದಾರಿಯಲ್ಲಿ ನಡೆಸಬೇಕಾದವರೇ ಹಾದಿ ತಪ್ಪಿದರೆ ಆ ಹಾದಿಯೇ ಸರಿಯಾದ ಹಾದಿ ಎಂದು ಪ್ರತಿಪಾದಿಸುವುದಾದರೆ ಇನ್ನೇನಾಗಬಹುದು?



ಬಿಜೆಪಿ ಕಾರ್ಯಕ್ರಮದಂತಾದ ಬೆಂಗಳೂರು–ಮೈಸೂರು ರಸ್ತೆ ಉದ್ಘಾಟನೆ:

ಸಿದ್ದಯ್ಯ ಸಿ.

ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಲಾಭಗಳಿಸುವ ಉದ್ದೇಶದಿಂದ, ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲವಾದರೂ, ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಮಾರ್ಚ್ 12ರಂದು ಉದ್ಘಾಟನೆ ಮಾಡಿದ್ದಾರೆ. ಪ್ರಧಾನಿ ಆದವರೊಬ್ಬರಿಂದ ರಾಷ್ಟ್ರೀಯ ಹೆದ್ದಾರಿ ಉದ್ಘಾಟನೆ ವಿಶೇಷವೇನಲ್ಲ ಬಿಡಿ. ಇಲ್ಲಿ ವಿಶೇಷ ಮತ್ತು ಆಕ್ಷೇಪಗಳಿಗೆ ಕಾರಣವಾಗಿರುವುದು, ಈ ಉದ್ಘಾಟನೆಯನ್ನು ಧಾರ್ಮಿಕ ಮೂಲಭೂತವಾದಿ ಸಂಘಟನೆಯೊಂದು ತನ್ನ ಬೆಳವಣಿಗೆಗಾಗಿ ಬಳಸಿಕೊಂಡ ರೀತಿ ಮತ್ತು ವಿಧಾನಸಭಾ ಚುನಾವಣೆಯ ಹೊಸ್ತಿಲಲ್ಲಿ ಬಿಜೆಪಿ ತನ್ನ ಚುನಾವಣಾ ಲಾಭಕ್ಕಾಗಿ ಬಳಸಿಕೊಂಡ ರೀತಿ.

ಸರ್ಕಾರಿ ಕಾರ್ಯಕ್ರಮ ಎಂದಾದರೆ ಅಲ್ಲಿ ತ್ರಿವರ್ಣ ಧ್ವಜಗಳು, ತ್ರಿವರ್ಣಗಳ ಬಂಟಿಂಗ್ಸ್, ಬ್ಯಾನರ್, ಕಟೌಟ್ ಗಳು ಇರಬೇಕು. ಏಕೆಂದರೆ ಅದು ಸಾರ್ವಜನಿಕರ ತೆರಿಗೆ ಹಣದಲ್ಲಿ ನಡೆಯುವ ಸಾರ್ವಜನಿಕ ಕಾರ್ಯಕ್ರಮ. ಇಂತಹ ಕಾರ್ಯಕ್ರಮದಲ್ಲಿ ಪ್ರಧಾನಿ, ಮುಖ್ಯಮಂತ್ರಿ, ಸಚಿವರುಗಳು ಸಾರ್ವಜನಿಕರ ಸೇವಕರಾಗಿ ನಡೆದುಕೊಳ್ಳಬೇಕೇ ವಿನಃ, ಒಂದು ಪಕ್ಷದ ವಕ್ತಾರರಾಗಿ, ಅಥವಾ ತಮ್ಮ ಮಾತೃ ಸಂಘಟನೆಯ ಪರವಾಗಿ ಮಾತನಾಡುವುದಲ್ಲ. ಇಲ್ಲಿ ಪಕ್ಷಾತೀತವಾಗಿ ಎಲ್ಲಾ ರಾಜಕೀಯ ಪಕ್ಷಗಳ ಜನಪ್ರತಿನಿಧಿಗಳು ಮತ್ತು ಜನರು ಭಾಗಿಯಾಗಿರಬೇಕು. ಆದರಿಲ್ಲಿ ಬಿಜೆಪಿಯನ್ನು ಬೆಂಬಲಿಸುವ ಸುಮಲತಾ ಅವರನ್ನು ಬಿಟ್ಟರೆ, ಉಳಿದೆಲ್ಲರೂ ಬಿಜೆಪಿ ಮತ್ತು ಸಂಘಪರಿವಾರದವರೇ ಇದ್ದರು. ಕೇಸರಿ ಬಣ್ಣದ ಬ್ಯಾನರ್, ಬಂಟಿಂಗ್, ಕಟೌಟ್ ಗಳನ್ನು ಅಳವಡಿಸಲಾಗಿತ್ತು. ಬಿಜೆಪಿ ಬಾವುಟಗಳನ್ನು ಹಾಕಲಾಗಿತ್ತು. ತಾವು ಕರೆತಂದ ಮಹಿಳೆಯರು, ಮಕ್ಕಳು ಸೇರಿದಂತೆ ಹಲವರ ಹೆಗಲ ಮೇಲೆ ಕೇಸರಿ ಸಾಲು ಹಾಕಿದ್ದರು. ಇದು ಒಂದು ಪಕ್ಷದ ಮತ್ತು ಹಿಂದುತ್ವವಾದಿ ಸಂಘಟನೆಯೊಂದರ ಕಾರ್ಯಕ್ರಮದಂತೆ ನಡೆಯಿತು.

ಚುನಾವಣಾ ಪ್ರಚಾರ ಸಭೆಯಂತಿತ್ತು

ರಾಜ್ಯದ ವಿಧಾನಸಭಾ ಚುನಾವಣೆ ಇನ್ನೇನು ಘೋಷಣೆಯಾಗಲಿದೆ. ಇಂತಹ ಸಂದರ್ಭವನ್ನು ಹೆದ್ದಾರಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಬಿಜೆಪಿ ಮತ್ತು ಸಂಘಪರಿವಾರ ಚೆನ್ನಾಗಿಯೇ ಬಳಸಿಕೊಂಡಿದೆ. ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರದ ಸಾಧನೆಗಳನ್ನು ಹೊಗಳುವುದು, ವಿರೋಧ ಪಕ್ಷಗಳನ್ನು ಟೀಕಿಸುವುದು, ವಿವಿಧ ಯೋಜನೆಗಳ ಮೂಲಕ ಸರ್ಕಾರ ಜನರಿಗೆ ನೀಡಿದ, ನೀಡುತ್ತಿರುವ ಸೌಲಭ್ಯಗಳ ಕುರಿತಾದ ಅಂಕಿ ಅಂಶಗಳನ್ನು ನೀಡುವುದು, ಮುಂದಿನ ದಿನಗಳಲ್ಲಿ ಏನೆಲ್ಲಾ ಮಾಡುತ್ತೇವೆ ಎಂದು ಭರವಸೆ ಕೊಡುವುದು ಯಾವುದೇ ಒಂದು ರಾಜಕೀಯ ಪಕ್ಷಕ್ಕೆ ತರವಲ್ಲ.

ಇದು ಸರ್ಕಾರದ ಕಾರ್ಯಕ್ರಮವೇ ವಿನಃ, ಯಾವುದೇ ಒಂದು ರಾಜಕೀಯ ಪಕ್ಷದ ಅಥವಾ ಒಂದು ಧಾರ್ಮಿಕ ಸಂಘಟನೆಯ ಕಾರ್ಯಕ್ರಮವಲ್ಲ. ಉದ್ಘಾಟನಾ ಕಾರ್ಯಕ್ರಮಕ್ಕೆ ಜಿಲ್ಲಾಡಳಿತದ ಮೂಲಕವೇ ಅಂಗನವಾಡಿ, ಆಶಾ ಕಾರ್ಯಕರ್ತೆಯರು ಸೇರಿದಂತೆ ಸರ್ಕಾರದ ಸ್ಕೀಮ್ ನೌಕರರು, ಶಾಲಾ ಕಾಲೇಜುಗಳ ಶಿಕ್ಷಕರು ಕಡ್ಡಾಯವಾಗಿ ಭಾಗವಹಿಸುವಂತೆ ಮಾಡಿದ್ದಾರೆ. ಮಹಿಳಾ ಸ್ವಯಂ ಸೇವಾ ಸಂಘಗಳ ಸದಸ್ಯೆಯರನ್ನು ಒತ್ತಾಯ ಪೂರ್ವಕವಾಗಿ ಕರೆತರಲಾಗಿದೆ. ಜನರನ್ನು ಕರೆತರಲು ಸಾವಿರಾರು ಬಸ್ಸುಗಳ ಏರ್ಪಾಡು ಮಾಡಲಾಗಿದೆ. ಲಕ್ಷಾಂತರ ರೂಪಾಯಿ ವೆಚ್ಚ ಮಾಡಿ ಬ್ಯಾನರ್, ಬಂಟಿಂಗ್ಸ್, ಕಟೌಟ್ ಗಳನ್ನು ಅಳವಡಿಸಲಾಗಿದೆ. ಇವೆಲ್ಲದರ ವೆಚ್ಚ ಸರ್ಕಾರದ ಬೊಕ್ಕಸದಿಂದ ಆಗುತ್ತದೆ. ಅಂದರೆ ಈ ಹಣ ಸಾರ್ವಜನಿಕರ ಹಣ. ಸಾರ್ವಜನಿಕರ ಹಣ ವೆಚ್ಚ ಮಾಡಿ, ಒಂದು ರಾಜಕೀಯ ಪಕ್ಷ ಮತ್ತು ಒಂದು ಧಾರ್ಮಿಕ ಮೂಲಭೂತವಾದಿ ಸಂಘಟನೆಯ ಪರವಾದ ಪ್ರಚಾರ ಎಷ್ಟು ಸರಿ?

ಉರಿಗೌಡ ಮತ್ತು ನಂಜೇಗೌಡ ಮಹಾದ್ವಾರ; ಹಿಂದುತ್ವವಾಧಿಗಳ ಪ್ರಚಾರ ತಂತ್ರದ ಭಾಗ


ರಾಷ್ಟ್ರೀಯ ಹೆದ್ದಾರಿ ಉದ್ಘಾಟನೆಗೆ ಹಾಕಲಾಗಿದ್ದ ಸ್ವಾಗತ ಕೋರುವ ಕಮಾನುಗಳಲ್ಲಿನ ಒಂದರಲ್ಲಿ ಉರಿಗೌಡ ಮತ್ತು ದೊಡ್ಡ ನಂಜೇಗೌಡರ ಹೆಸರಿನಲ್ಲಿ ಮಹಾದ್ವಾರವೊಂದನ್ನು ಸಂಘಪರಿವಾರ ನಿರ್ಮಿಸಿತ್ತು. ಇದನ್ನು ಜನರ ವ್ಯಾಪಕ ಟೀಕೆಯ ನಂತರ ತೆಗೆಯಲಾಯಿತು. ಆದರೆ, ಇದು ಹಿಂದುತ್ವವಾದಿಗಳ ಅಜೆಂಡಾ ಸಾಧಿಸುವ ದೆಸೆಯಲ್ಲಿ ಗೆಲುವು ಎಂಬುದೇ ಸತ್ಯ. 'ಒಕ್ಕಲಿಗ ಜನಾಂಗದ ಉರಿಗೌಡ ಮತ್ತು ನಂಜೇಗೌಡ ಪುಟ 15 ಕ್ಕೆ

ಸಾರ್ವಜನಿಕ, ಖಾಸಗಿ ಸಹಭಾಗಿತ್ವದಲ್ಲಿ (PPP)

ಬೆಂಗಳೂರು–ಮೈಸೂರು ಹೆದ್ದಾರಿ ಅಭಿವೃದ್ಧಿ ಸಾರ್ವಜನಿಕ, ಖಾಸಗಿ ಸಹಭಾಗಿತ್ವದಲ್ಲಿ ಮಾಡಿದ ಅಭಿವೃದ್ಧಿ. ಇದು ಸಂಪೂರ್ಣವಾಗಿ ಹೊಸದಾಗಿ ನಿರ್ಮಾಣಗೊಂಡ ರಸ್ತೆಯೇನೂ ಅಲ್ಲ. ಈಗಾಗಲೇ ಇದ್ದ ರಸ್ತೆಯನ್ನು ಅಗಲೀಕರಿಸಿ, ಕೆಲವು ಪಟ್ಟಣಗಳ ಬಳಿ ಬೈಪಾಸ್ ರಸ್ತೆ ನಿರ್ಮಾಣ ಮಾಡಿ, ಕೆಲವೆಡೆ ಮೇಲ್ಸೇತುವೆ ನಿರ್ಮಾಣ ಮಾಡಿ ಅಭಿವೃದ್ಧಿ ಪಡಿಸಿದ್ದು. ಇದನ್ನು ಸಾರ್ವಜನಿಕರು ಉಚಿತವಾಗಿ ಬಳಸುವಂತೆಯೂ ಇಲ್ಲ. ಸುಂಕ ಕೊಟ್ಟು ರಸ್ತೆ ಬಳಕೆ ಮಾಡಬೇಕು. ಈ ರಸ್ತೆ ಅಭಿವೃದ್ಧಿಯಲ್ಲಿ ಸಾರ್ವಜನಿಕರ ತೆರಿಗೆ ಹಣದ ಪಾಲೂ ಇದೆ. ಸಾರ್ವಜನಿಕರು ಎಂದರೆ ಭಾರತದ ಎಲ್ಲಾ ಧರ್ಮ, ಜಾತಿ, ಭಾಷೆ, ಪ್ರದೇಶದ ಜನರೂ ಸೇರಿರುತ್ತಾರೆ. ಈ ರಸ್ತೆ ನಿರ್ಮಾಣಕ್ಕೆ ಅಗತ್ಯವಾದ ಭೂಮಿ ಕೊಟ್ಟವರಲ್ಲೂ ಈ ಎಲ್ಲರ ಪಾಲೂ ಇದೆ. ಖಾಸಗಿ ಬಂಡವಾಳಗಾರರು ಲಾಭಕ್ಕಾಗಿ ಬಂಡವಾಳ ಹೂಡಿಕೆ ಮಾಡುತ್ತಾರೆ ವಿನಃ, ಸಾರ್ವಜನಿಕರ ಮೇಲಿನ ಪ್ರೀತಿಯಿಂದಲ್ಲ. ಹೀಗೆ ಹೂಡಿಕೆ ಮಾಡುವಾಗಲೂ ಬಳಕೆದಾರರ (ವಾಹನಗಳ ಸಂಚಾರದ ಲೆಕ್ಕ) ಸಂಖ್ಯೆ, ಅದರಿಂದ ಬರುವ ಲಾಭದ ಲೆಕ್ಕಾಚಾರದ ಮೇಲೆ ರಸ್ತೆಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ತಾವು ಹೂಡಿಕೆ ಮಾಡಿದ ಹಣ ಮತ್ತು ಹಲವು ಪಟ್ಟು ಲಾಭವನ್ನು ಟೋಲ್ ಶುಲ್ಕಗಳ ಮೂಲಕ ರಸ್ತೆ ಬಳಕೆ ಮಾಡುವವರಿಂದ ಸಂಗ್ರಹಿಸುತ್ತಾರೆ.

ಹೆದ್ದಾರಿ ನಡುವಿನ ನಗರ, ಪಟ್ಟಣಗಳ ಬಳಿ ಪ್ರವೇಶ ಮತ್ತು ನಿರ್ಗಮನಗಳಿಲ್ಲ!

ಹೆದ್ದಾರಿಗಳಲ್ಲಿ ಸಾಮಾನ್ಯವಾಗಿ 60 ಕಿಮೀ. ದೂರಕ್ಕೆ ಟೋಲ್ ಪ್ಲಾಜಾ ಇರುಬೇಕು ಎಂಬ ನಿಯಮವಿದೆ. ಆದರೆ, 118 ಕಿ.ಮೀ. ಉದ್ದವಿರುವ ಬೆಂಗಳೂರು–ಮೈಸೂರು ರಸ್ತೆಯಲ್ಲಿ ಪ್ರಾರಂಭ ಮತ್ತು ಅಂತ್ಯದಲ್ಲಿ ಮಾತ್ರ ಟೋಲ್ ಪ್ಲಾಜಾಗಳನ್ನು ನಿರ್ಮಿಸಲಾಗಿದೆ. ಸಾಮಾನ್ಯವಾಗಿ ಟೋಲ್ ಸಂಗ್ರಹಿಸುವ ರಾಷ್ಟ್ರೀಯ ಹೆದ್ದಾರಿಗಳ ಹಾದಿಯಲ್ಲಿ ಬರುವ ನಗರ ಪಟ್ಟಣಗಳಿಂದ ಹೆದ್ದಾರಿಗೆ ಸೇರಿಕೊಳ್ಳುವ ಮತ್ತು ಹೆದ್ದಾರಿಯಿಂದ ಹೊರಗೆ ಹೋಗುವ ಅವಕಾಶ ಇದ್ದೇ ಇರುತ್ತವೆ. ಎರಡು ಟೋಲ್ ಪ್ಲಾಜಾಗಳ ನಡುವೆ ಸಂಚರಿಸುವ ಪ್ರಯಾಣಿಕರು ಇಂತಹ ರಸ್ತೆಗಳನ್ನು ಉಚಿತವಾಗಿ ಬಳಕೆ ಮಾಡಿಕೊಳ್ಳಬಹುದು. ಕೆಲವು ರಸ್ತೆಗಳಲ್ಲಿ ಟೋಲ್ ಪ್ಲಾಜಾ ಸಮೀಪದ ಸ್ಥಳೀಯ ವಾಹನಗಳಿಗೆ ಟೋಲ್ ಸುಂಕದ ವಿನಾಯಿತಿಯೂ ಇದೆ. ಬೆಂಗಳೂರು–ಮೈಸೂರು ರಸ್ತೆಯಲ್ಲಿ ಇಂತಹ ಅವಕಾಶವೇ ಇಲ್ಲದಂತೆ ಮಾಡಲಾಗಿದೆ. ಹೆದ್ದಾರಿಯ ಒಂದು ತುದಿಯಲ್ಲಿ ಟೋಲ್ ಶುಲ್ಕ ಕಟ್ಟಿ ರಸ್ತೆ ಪ್ರವೇಶ ಮಾಡಿದರೆ, ಮತ್ತೊಂದು ತುದಿಯಲ್ಲಿ ಹೊರಗೆ ಬರಬೇಕು. ನಡುವಿನ ಯಾವ ಪ್ರಯಾಣಿಕರಿಗೂ ರಸ್ತೆ ಪ್ರವೇಶಿಸಲು ಅವಕಾಶವಿಲ್ಲ. ಬೆಂಗಳೂರು ಅಥವಾ ಮೈಸೂರಿನಿಂದ ಮಂಡ್ಯ, ಮದ್ದೂರು, ಚನ್ನಪಟ್ಟಣ, ರಾಮನಗರ ಈ ಊರುಗಳಿಗೆ ಹೋಗುವವರು ಹೆದ್ದಾರಿ ಬಳಕೆ ಮಾಡಲು ಅವಕಾಶವಿಲ್ಲ. ಹಳೆಯ ರಸ್ತೆ ವಿಸ್ತಾರಗೊಂಡು ಹೆದ್ದಾರಿಯಾಗಿ ಮಾರ್ಪಟ್ಟು ಕೆಲವು ಗ್ರಾಮಗಳ ನಡುವೆ ಹಾದುಹೋಗಿದೆ. ಇಂತಹ ಊರಿನ ಜನರು ಹೆದ್ದಾರಿಯ ಒಂದು ಬದಿಯಲ್ಲಿರುವವರು ಮತ್ತೊಂದು ಬದಿಯಲ್ಲಿರುವ ಊರಿಗೆ ಅಥವಾ ತಮ್ಮದೇ ಜಮೀನಿಗೆ ಹೋಗಲು ಕಿಮೀ ದೂರದಲ್ಲಿ ಇರುವ ಕೆಳಸೇತುವೆ ಮೂಲಕ ಸುತ್ತಿ ಬರಬೇಕು. ರಸ್ತೆಯ ಎರಡೂ ಬದಿಗಳಲ್ಲಿ ಎತ್ತರದ ಬೇಲಿ ಅಳವಡಿಸಲಾಗಿದೆ. ಅಂದರೆ, ಹೆದ್ದಾರಿ ನಿರ್ಮಾಣ ಸ್ಥಳೀಯ ಜನರ ಸೌಲಭ್ಯಕ್ಕಾಗಿ ಮಾಡಿದ್ದಲ್ಲ, ಬೆಂಗಳೂರು, ಮೈಸೂರು ನಡುವೆ ಸಂಚರಿಸುವ ವಾಹನಗಳಿಗೆ ಮಾತ್ರ ಅನುಕೂಲ ಕಲ್ಪಿಸಲು ನಿರ್ಮಿಸಲಾಗಿದೆ. ಶುಲ್ಕ ವಸೂಲಿ ಮಾಡಿ ಲಾಭ ಗಳಿಸಲು ಬಂಡವಾಳಗಾರರ ಲಾಭಕ್ಕಾಗಿ ಮಾಡಿದ್ದು ಎಂಬುದು ಸ್ಪಷ್ಟ. ಇದು ಸಿರಿವಂತರಿಗಾಗಿ ಮತ್ತು ಬಂಡವಾಳಗಾಗರರ ಲಾಭದ ದೃಷ್ಟಿಯಿಂದ ಅಭಿವೃದ್ಧಿ ಮಾಡಲಾಗಿದೆ.



ಟೋಲ್ ಸಂಗ್ರಹದ ವಿರುದ್ಧ ಜನರ ಆಕ್ರೋಶ

ಸರ್ವಿಸ್ ರಸ್ತೆಗಳು ಇನ್ನೂ ಪೂರ್ಣಗೊಂಡಿಲ್ಲ. ಅವುಗಳು ವಾಹನಗಳ ಸಂಚಾರಕ್ಕೆ ಇನ್ನೂ ಯೋಗ್ಯವಾಗಿಲ್ಲ. ಆದರೂ, ಮಾರ್ಚ್ 14ರಂದೇ ಟೋಲ್ ಸಂಗ್ರಹ ಪ್ರಾರಂಭಿಸಲಾಗಿದೆ. ಇದು ಪ್ರಯಾಣಿಕರ ಆಕ್ರೋಶಕ್ಕೆ ಕಾರಣವಾಗಿದೆ. ಜನರ ಆಕ್ರೋಶವನ್ನು ಮೊದಲೇ ನಿರೀಕ್ಷಿಸಿದ್ದ ಸರ್ಕಾರ ಟೋಲ್ ಪ್ಲಾಜಾ ಬಳಿ ದೊಡ್ಡ ಸಂಖ್ಯೆಯ ಪೊಲೀಸರನ್ನು ನಿಯೋಜಿಸಿದೆ. ಇದುವರೆಗೂ ಉಚಿತವಾಗಿ ರಸ್ತೆ ಬಳಕೆ ಮಾಡುತ್ತಿದ್ದ ಈ ಭಾಗದ ಪ್ರಯಾಣಿಕರಿಗೆ ಟೋಲ್ ಶುಲ್ಕ ಎಂಬುದು ಪ್ರಭುತ್ವದ ಹೊಸದೊಂದು ಶೋಷಣೆಯಂತೆ ಕಂಡಿದೆ.

ಟೋಲ್ ಪ್ಲಾಜಾಗಳ ಬಳಿ ವಾಹನ ಮಾಲೀಕರು ಟೋಲ್ ಸಂಗ್ರಹ ಮಾಡುವ ನೌಕರರ ಮೇಲೆ ಮತ್ತು ಸರ್ಕಾರದ ವಿರುದ್ಧ ತಮ್ಮ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಕೆಲವು ಕನ್ನಡಪರ ಸಂಘಟನೆಗಳ ಕಾರ್ಯಕರ್ತರು, ಕಾಂಗ್ರೆಸ್, ಜೆಡಿಎಸ್ ಸೇರಿದಂತೆ ಕೆಲವು ರಾಜಕೀಯ ಪಕ್ಷಗಳ ಕಾರ್ಯಕರ್ತರು ಟೋಲ್ ಪ್ಲಾಜಾಗಳ ಬಳಿ ಪ್ರತಿಭಟನೆ ಮಾಡಿದ್ದಾರೆ. ಇದಲ್ಲದೆ, ಫಾಸ್ಟ್ಯಾಗ್ ಅಳವಡಿಸಿಕೊಳ್ಳದ ವಾಹನಗಳಿಂದ ದುಪ್ಪಟ್ಟು ಶುಲ್ಕ 270 ರೂ. ವಸೂಲಿ ಮಾಡಲಾಗುತ್ತಿದೆ. ಸದ್ಯಕ್ಕೆ ರಾಮನಗರ, ಮಂಡ್ಯ ಸೇರಿದಂತೆ ಕೆಲವೆಡೆ ನಿರ್ಗಮನ ಗಳನ್ನು ಇನ್ನೂ ಮುಚ್ಚಿಲ್ಲವಾದ್ದರಿಂದ ಈ ಪಟ್ಟಣಗಳಿಗೆ ಹೋಗುವ ವಾಹನಗಳು ಹೆದ್ದಾರಿ ಬಳಸುತ್ತಿದ್ದಾರೆ. ಇಂತಹ ವಾಹನಗಳಿಂದಲೂ ಹೆದ್ದಾರಿಯ ಪೂರ್ಣ ಪ್ರಮಾಣದ ಶುಲ್ಕ 135 ರೂ. ವಸೂಲಿ ಮಾಡಲಾಗುತ್ತಿದೆ. ಇದು ಪ್ರಯಾಣಿಕರನ್ನು ಮತ್ತಷ್ಟು ಕೆರಳಿಸಿದೆ. "ನಾವು ಸರ್ಕಾರಕ್ಕೆ ತೆರಿಗೆ ಕಟ್ಟುತ್ತಿದ್ದೇವೆ. ರಸ್ತೆಗೂ ಶುಲ್ಕ ಏಕೆ ಕೊಡಬೇಕು?" ಎಂದು ಕಾರು ಚಾಲಕರೊಬ್ಬರು ಏರುಧ್ವನಿಯಲ್ಲಿ ಕೇಳಿದ್ದರಲ್ಲಿ ಸಾಕಷ್ಟು ಅರ್ಥಗಳಿವೆ. ಹೆದ್ದಾರಿ ಸುರಕ್ಷಿತವಲ್ಲ ಎಂಬುದಕ್ಕೆ ಚನ್ನಪಟ್ಟಣದ ಬಳಿ ಕೆಟ್ಟು ನಿಂತ ಕಾರಿನಲ್ಲಿದ್ದ ಮಹಿಳೆ ಮತ್ತು ಸಹ ಪ್ರಯಾಣಿಕರನ್ನು ದರೋಡೆಕೋರರು ದರೋಡೆ ಮಾಡಿ ಒಡವೆ ಮತ್ತು ಹಣವನ್ನು ದೋಚಿರುವುದು ಒಂದು ಉದಾಹರಣೆಯಾಗಿದೆ. ಹೆದ್ದಾರಿಯ ನಡುವೆ ಮಲ ಮೂತ್ರ ವಿಸರ್ಜನೆಗೆ, ಕಾಫಿ ತಿಂಡಿಗೆ ಯಾವುದೇ ಮೂಲಸೌಕರ್ಯಗಳ ವ್ಯವಸ್ಥೆ ಇಲ್ಲ, ಪೆಟ್ರೋಲ್ ಬಂಕುಗಳು ಇಲ್ಲ. ಈ ಕಾರಣದಿಂದಾಗಿ ಹೆದ್ದಾರಿಯ ಪ್ರಯಾಣಿಕರು ತಮಗಾದ ಸಂಕಷ್ಟಗಳ ಅನುಭವಗಳನ್ನು ಹಂಚಿಕೊಳ್ಳುತ್ತಿದ್ದಾರೆ.

ಟಿಕೆಟ್ ಗಾಗಿ ಅಂತರ್ ಯುದ್ಧಗಳು.... ಪುಟ 3ರಿಂದ

ಮಾತು ಆತ ಲಿಂಗಾಯತರ ವಿರೋಧಿ ಎನ್ನುವುದು ಬಿ.ಎಸ್.ವೈ. ಒಳಗೊಂಡು, ವೀರಶೈವ ಲಿಂಗಾಯತ ಸಂಘಟನೆಗಳ ಖಂಡನೆಗೆ ಒಳಗಾಗಿರುವುದನ್ನೂ ಕಾಣುತ್ತೇವೆ. ಆಸಕ್ತಿಕರ ವಿಷಯವೆಂದರೆ ಶಾಸಕ, ಬಿಜೆಪಿ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿಯವರ ಅನವರತ ಆತ್ಮೀಯನಾಗಿದ್ದಲಿಂಗಾಯತ ನಾಯಕ ತಮ್ಮಯ್ಯ ನವರು ಬಿಜೆಪಿ ತೊರೆದು ಕಾಂಗ್ರೆಸ್ ಪಕ್ಷ ಸೇರಿರುವುದು! ಕ್ಷೇತ್ರದಲ್ಲಿ ರವಿಯವರ ವಿರುದ್ಧ ಅತೃಪ್ತಿ ಅಲೆ ಎದ್ದಿರುವುದು. ಲಿಂಗಾಯತರ ಬೆಂಬಲ ಕಳೆದುಕೊಳ್ಳುವ ಸ್ಪಷ್ಟ ಸೂಚನೆ ದೊರೆತಿರುವ ರವಿ ಕಂಗಾಲಾದಂತೆ ಕಾಣುತ್ತಿದ್ದಾರೆ. ಮಂಡ್ಯದಲ್ಲಿ ಬಿರುಗಾಳಿ ಬೀಸಲು ಬೀಸಣಿಕೆ ಹಿಡಿದು ಮೋದಿ, ಶಾ ಗಳು ಓಡಾಡುತ್ತಿರುವಾಗಲೇ ಕಾಂಗ್ರೆಸ್ ಜೆಡಿ ಎಸ್ ಮೈತ್ರಿ ಸರಕಾರದ ಪತನದಲ್ಲಿ ಬಹುಮುಖ್ಯ ಪಾತ್ರ ವಹಿಸಿದ್ದ ಮದ್ದೂರು ಉದ್ಯಮಿ ಕದಲೂರು ಉದಯ್ ಗೌಡ ಬಿಜೆಪಿ ತೊರೆದು ಕಾಂಗ್ರೆಸ್ ಗೆ ಬಂದಿದ್ದಾರೆ. ದಕ್ಷಿಣ ಕರ್ನಾಟಕದಲ್ಲಿ ಪ್ರಾಬಲ್ಯ ಗಳಿಸಲು ಬೇರೆ ಪಕ್ಷಗಳಿಗೆ ಆಪರೇಷನ್ ಕಮಲ ಮಾಡಬೇಕೆಂದಿರುವ ಬಿಜೆಪಿಯ ಮೇಲೆ ಆಪರೇಷನ್ ಕೈ ಮಾಡುವ ಸುದ್ದಿಗಳೂ ಬರುತ್ತಿವೆ! ಇದರ ವಿಶೇಷವೆಂದರೆ ಕಾಂಗ್ರೆಸ್ ತೊರೆದು ಹೋಗಿದ್ದ ಹಲವು 'ಬಾಂಬೆ ಬಾಯ್' ಗಳನ್ನು ಮತ್ತೇ ಕಾಂಗ್ರೆಸ್ ಗೆ ವಾಪಾಸು ತರುವುದು!

* * *

ಕಾಂಗ್ರೆಸ್ ನಾಯಕ ಎ.ಮಂಜು(ವಾಲೆ ಮಂಜು) ಕಾಂಗ್ರೆಸ್ ತೊರೆದು ಜೆ.ಡಿ(ಎಸ್) ಗೆ ಹೋದದ್ದು, ಜೆ.ಡಿ(ಎಸ್) ತೊರೆದು ಕಾಂಗ್ರೆಸ್ ಗೆ ಹೋಗಲು ಶಾಸಕ ಶಿವಲಿಂಗೇಗೌಡ ಹೆಜ್ಜೆ ಹಾಕುತ್ತಿರುವುದು, ಹಾಗೇ ಎಸ್.ಆರ್ ಶ್ರೀನಿವಾಸ(ವಾಸು), ಮಧು ಬಂಗಾರಪ್ಪ ಕಾಂಗ್ರೆಸ್ ಸೇರುವುದು ರನ್ನಿಂಗ್ ನ್ಯೂಸ್ ಗಳು.

ಅನೇಕ ಕ್ಷೇತ್ರಗಳಲ್ಲಿ ಟಿಕೇಟ್ ಆಕಾಂಕ್ಷಿಗಳು ಬಹಿರಂಗ ಬಡಿದಾಟಕ್ಕೆ ಇಳಿದಿರುವುದೂ ಕಡಿಮೆ ಯೇನಲ್ಲ. ಮೂಡಿಗೆರೆ ಶಾಸಕ ಎಂ.ಪಿ.ಕುಮಾರಸ್ವಾಮಿಯವರಿಗೆ ಬಿಜೆಪಿ ಟಿಕೇಟ್ ಕೈ ತಪ್ಪುವ ಭೀತಿಯಿಂದ ಬಹಿರಂಗ ಬಂಡಾಯ ಎದ್ದಿದ್ದಾರೆ. ಕಳೆದ ಕೆಲವು ದಿನಗಳ ಹಿಂದೆ ವನ್ಯಮೃಗಗಳ ಧಾಳಿ ನಡೆದ ಹಳ್ಳಿಗೆ ಹೋದಾಗ ಅವರ ಮೇಲೆ ನಡೆದ ಹಲ್ಲೆಯ ಹಿಂದೆ ತನ್ನ ಪಕ್ಷದವರೇ ಆದ ವಿರೋಧಿ ಬಣ ಇರುವುದನ್ನು ಶಂಕಿಸಿದ್ದಾರೆ. ಇನ್ನು ಕೊರಟಗೆರೆ ಕ್ಷೇತ್ರದ ಇಬ್ಬರು ಟಿಕೇಟ್ ಆಕಾಂಕ್ಷಿಗಳ ನಡುವೆ (ಬಿ.ಹೆಚ್.ಅನಿಲ್ ಕುಮಾರ್, ಡಾ.ಲಕ್ಷ್ಮಿಕಾಂತ್) ನಡು ದಾರಿಯಲ್ಲೇ ಬೆಂಬಲಿಗರೊಂದಿಗೆ ಧಿಕ್ಕಾರಗಳು ಮೊಳಗಿ, ಕೈ ಕೈ ಮಿಲಾಯಿಸಿ ಬಲ ಪ್ರದರ್ಶನ ನಡೆಸಿದ್ದಾರೆ. ಒಂದು ಕ್ಷೇತ್ರದಲ್ಲಂತೂ ಇಂತಹ ಪ್ರಸಂಗದಿಂದ ಬೇಸತ್ತ ಯಡಿಯೂರಪ್ಪನವರು ಸಂಕಲ್ಪ ಯಾತ್ರೆ ಬರ್ಖಾಸ್ತು ಮಾಡಿ ವಾಪಾಸಾಗಿದ್ದಾರೆ. ಸಿ.ಟಿ. ರವಿ ಧಿಕ್ಕಾರದ ಘೋಷಣೆಗಳನ್ನು ಉಂಡಿದ್ದಾರೆ.

* * *

ಇನ್ನು ಅಪ್ಪ ಮಕ್ಕಳ ಪಕ್ಷ ಎಂದು ಕರೆಸಿಕೊಳ್ಳುತ್ತಿರುವ ಜೆ.ಡಿ(ಎಸ್) ಪಕ್ಷ ಪಂಚರತ್ನ ಯಾತ್ರೆಯ ಬಳಿಕ ತನ್ನ ಸ್ಥಿತಿಯನ್ನು ಸುಧಾರಿಸಿಕೊಂಡಿದೆ ಎನ್ನುವ ಸಿಹಿ ವಾರ್ತೆ ಬರುತ್ತಿರುವಾಗಲೇ ಸಂಸಾರದೊಳಗಿನ ಸಂಗತಿಯೊಂದು ದಳಪತಿಗಳಲ್ಲಿ ಕಸಿವಿಸಿ ಸೃಷ್ಟಿಸುತ್ತಿದೆ. ಜೆಡಿ ಎಸ್ ಅಪ್ಪಮಕ್ಕಳ ಪಕ್ಷ ಎನ್ನುವ ಅದರ ಐಡೆಂಟಿಟಿ ಪುನಃ ಸೊಸೆಯವರೆಗೆ ವಿಸ್ತರಿಸ ಬಯಸಿರುವುದೇ ಹೊಸ ಸಂಘರ್ಷಕ್ಕೆ ಕಾರಣ. ಹಾಸನ ಕ್ಷೇತ್ರದ ಟಿಕೇಟ್ ನ್ನು ಕುಮಾರಸ್ವಾಮಿಯವರು ಸಾಮಾನ್ಯ ಕಾರ್ಯಕರ್ತನೊಬ್ಬರಿಗೆ ಕೊಡಬೇಕು ಎಂದಿದ್ದರಂತೆ. ಆದರೆ ಆ ಟಿಕೆಟ್ ತನಗೇ ನೀಡಬೇಕು ಎಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ನವರ ಪತ್ನಿ ಭವಾನಿಯವರು ತನಗೇ ಸಿಗಬೇಕು ಎಂದು ಪಟ್ಟು ಹಿಡಿದಿರುವುದು ಸಂಸಾರದಲ್ಲಿ ಬಿಕ್ಕಟ್ಟು ಸೃಷ್ಟಿಸಿದೆ. ಈ ಕಿತ್ತಾಟ ಕಂಡ ಆಕಾಂಕ್ಷಿಯೊಬ್ಬ ಆ ಪಕ್ಷ ತೊರೆದು ಹೊರ ನಡೆವ ಸುದ್ದಿಯೂ ಇದೆ.

* * *

ಸಂಡೂರು ಕ್ಷೇತ್ರದಲ್ಲಿ ಸ್ಪರ್ದಿಸಲು ಸಿದ್ಧತೆ ಆರಂಭಿಸಿದ್ದ ಸಚಿವ ಶ್ರೀರಾಮುಲು ಬಳ್ಳಾರಿ ಗ್ರಾಮಾಂತರ ಕ್ಷೇತ್ರದತ್ತ ಮುಖ ಮಾಡಿದ್ದಾರೆ. ಇದಕ್ಕೆ ಕಾರಣ ಅವರು ಮಾಡಿಸಿಕೊಂಡ ಸರ್ವೇ! ರಾಮುಲುಗೆ ಸಂಡೂರು ಸುಖದಾಯಕ ಅಲ್ಲ ಎಂದು ಹೇಳಿದೆಯಂತೆ!

* * *

ಹಾಗೇ ಮೂರನೆಯ ಬಾರಿ ಶಾಸಕರಾಗಿರುವ ಹೋಟೆಲ್ ಉದ್ಯಮಿ ಎಸ್.ಎನ್. ಸುಬ್ಬಾರೆಡ್ಡಿಯವರು ಮತ್ತೇ ಅಭ್ಯರ್ಥಿಯಾಗಲು ಸಿದ್ಧವಾಗುತ್ತಿರುವಾಗ ಮತ್ತೊಬ್ಬ ಟಿಕೇಟ್ ಆಕಾಂಕ್ಷಿ ಮಾಜಿ ಶಾಸಕ ಸಂಪಂಗಿಯವರು ಟಿಕೇಟ್ ಸಿಗದಿದ್ದರೆ ಸ್ವತಂತ್ರ ಬಂಡಾಯ ಅಭ್ಯರ್ಥಿಯಾಗುವುದು ಖಚಿತ ಎನ್ನಲಾಗುತ್ತಿದೆ. ಬಹುಶಃ ಬೇಡಿಕೆಗಳ 'ಮೌಲ್ಯಯುತ ಮಾತು ಕತೆಗಳ ಬಳಿಕ ಅದೆಲ್ಲಾ ಸರಿ ಹೋಗಬಹುದು ಎನ್ನಲಾಗುತ್ತಿದೆ. ಹೀಗೆ ಅನೇಕರಿಗೆ ಈ ಚುನಾವಣೆ ಮೌಲ್ಯವರ್ಧನೆ, ವರ್ಚಸ್ಸಿನ ಅಭಿವೃದ್ಧಿ, ಸಮಾಜ ಸೇವೆಗೆ ಹಾದಿ ಮಾಡಿಕೊಡಬಹುದಾಗಿದೆ.

ಈ ಎಲ್ಲಾ ಸಂಗತಿಗಳು ಇಂದಿನ ರಾಜಕಾರಣ ಸಾಗುತ್ತಿರುವ ದಾರಿಯ ಸ್ಪಷ್ಟ ಸೂಚಕಗಳಾಗಿವೆ. ಇವುಗಳ ನಡುವೆ ಜನರ ವಿವೇಕ ಹೇಗಿರುತ್ತೇ? ಕೋಮುವಾದದಿಂದ ಮುಕ್ತವಾಗಬೇಕಾಗಿರುವ ಕರ್ನಾಟಕ ಭ್ರಷ್ಟಾಚಾರ, ಅನೈತಿಕ ರಾಜಕಾರಣ ಮತ್ತು ಸಂದರ್ಭ ಸಾಧಕತನದಿಂದಲೂ ಮುಕ್ತವಾಗಬೇಕಿದೆ.

"ಕ್ಷಮಾದಾನದ ಉಪಕಾರವು ಭವಿಷ್ಯದಲ್ಲಿ ನನ್ನನ್ನು ರಾಜಕೀಯವಾಗಿ ಉಪಯುಕ್ತನನ್ನಾಗಿ........ ಪುಟ 2 ರಿಂದ

ಮಾಡಿದಕೂಡಲೇ ಅದರ ಪರವಾಗಿ ನಿಲ್ಲುತ್ತೇನೆ. ಆಗಿನ ಸುಧಾರಣೆಗಳಿಂದ ಮತ್ತು ಈಗಿನ ಈ ಘೋಷಣೆಯಿಂದ ನನ್ನ ಅಭಿಪ್ರಾಯಗಳನ್ನು ದೃಢೀಕರಿಸುತ್ತಿದ್ದೇನೆ ಮತ್ತು ನಿಯಮಬದ್ಧವಾದ ಹಾಗೂ ಸಾಂವಿಧಾನಿಕವಾದ ಬೆಳವಣಿಗೆಯ ಪರವಾಗಿ ಮತ್ತು ಅದರ ಸಿದ್ಧತೆಯ ಪರವಾಗಿ ನಿಲ್ಲಲು ಇತ್ತೀಚೆಗೆ ನಾನು ಸಾರ್ವಜನಿಕವಾಗಿ ನನ್ನ ನಂಬಿಕೆಯನ್ನು ಘೋಷಿಸಿದ್ದೇನೆ. ಉತ್ತರದಿಂದ ಏಶಿಯಾದ ಅಲೆಮಾರಿ ಮತಾಂಧರು ನಮ್ಮ ದೇಶವನ್ನು ಬೆದರಿಸುತ್ತಿರುವ ಅಪಾಯವು ಮತ್ತು ಈ ಹಿಂದೆಕೂಡ ಅವರು ಶತ್ರುಗಳಾಗಿ ಬಂದಾಗ ಭಾರತಕ್ಕೆ ಶಾಪವಾಗಿದ್ದವರು ಮತ್ತು ಈಗ ನಮ್ಮ ಮಿತ್ರರಾಗಿ ಬರ ಬಯಸುವುದಾಗಿ ಹೇಳಿರುವಾಗಲೂ ಭವಿಷ್ಯದಲ್ಲಿ ಕೂಡ ಶತ್ರುಗಳಾಗುವ ಸಾಧ್ಯತೆ ಇರುವುದರಿಂದ, ಭಾರತವನ್ನು ಪ್ರೀತಿಸುವ ಪ್ರತಿಯೊಬ್ಬ ಜಾಣನೂ ಹೃತ್ಪೂರ್ವಕವಾಗಿ ಮತ್ತು ನಿಷ್ಠೆಯಿಂದ, ಭಾರತದ ಹಿತದೃಷ್ಟಿಯಿಂದಲೇ ಬ್ರಿಟಿಷ್ ಜನರೊಂದಿಗೆ ಸಹಕರಿಸಬೇಕಾಗುತ್ತದೆ ಎಂಬುದು ನನಗೆ ಮನವರಿಕೆಯಾಗಿದೆ,

ಆದ್ದರಿಂದಲೇ ಯುದ್ಧ ಪ್ರಾರಂಭವಾದಾಗ ಮತ್ತು ಜರ್ಮನ್–ಟರ್ಕಿ–ಆಫ್ಘನ್ನರು ಭಾರತದ ಮೇಲೆ ದಂಡೆತ್ತಿ ಬರುವುದು ಸನ್ನಿಹಿತವಾದಾಗ 1914ರಲ್ಲಿ ನಾನು ನನ್ನನ್ನು ಒಬ್ಬ ಸ್ವಯಂಸೇವಕನನ್ನಾಗಿ ಅರ್ಪಿಸಿಕೊಂಡೆ. ನೀವು ನಂಬುತ್ತೀರೋ ಬಿಡುತ್ತೀರೋ, ಸಾಂವಿಧಾನಿಕ ಹಾದಿಯನ್ನು ತುಳಿಯಲು ನನ್ನ ಮನಃಪೂರ್ವಕವಾದ ಇಚ್ಛೆಯನ್ನು ನಾನು ಪ್ರಾಮಾಣಿಕವಾಗಿ ವ್ಯಕ್ತಪಡಿಸುತ್ತೇನೆ ಮತ್ತು ಬ್ರಿಟಿಷ್ ಪ್ರಭುತ್ವಕ್ಕೆ ಪ್ರೀತಿ ಹಾಗೂ ಗೌರವದ ಮತ್ತು ಪರಸ್ಪರ ಸಹಾಯದ ಹಸ್ತವನ್ನು ಅರ್ಪಿಸಲು ಅತ್ಯಂತ ವಿನಯಪೂರ್ವಕವಾಗಿ ಪ್ರಯತ್ನಿಸುತ್ತೇನೆ. ಈ ಘೋಷಣೆಯಲ್ಲಿ ಮುನ್ಸೂಚನೆ ನೀಡಿದಂತೆ ಅಂತಹ ಒಂದು ಸಾಮ್ರಾಜ್ಯವು ನನ್ನ ಹೃದಯದ ನಿಷ್ಠೆಯನ್ನು ಗೆದ್ದಿದೆ. ಏಕೆಂದರೆ ಸತ್ಯವಾಗಿಯೂ ಯಾವ ಜನಾಂಗವನ್ನೂ ಅಥವಾ ಮತ ಸಿದ್ಧಾಂತವನ್ನೂ ಅಥವಾ ಜನರನ್ನೂ ಅವರು ಭಾರತೀಯರಲ್ಲ ಎಂಬ ಕಾರಣಕ್ಕೆ ಮಾತ್ರವೇ ನಾನು ದ್ವೇಷಿಸುವುದಿಲ್ಲ!

(ಬಿ) ಆದರೆ ಸರ್ಕಾರವು ನನ್ನಿಂದ ಇನ್ನೂ ಹೆಚ್ಚಿನ ಸುರಕ್ಷತೆಯ ಭರವಸೆಯನ್ನು ಬಯಸುವುದಾದರೆ, ಸರ್ಕಾರವು ಸೂಚಿಸಬಹುದಾದ ನಿರ್ದಿಷ್ಟ ಹಾಗೂ ತರ್ಕಸಮ್ಮತವಾದ ಅವಧಿಗೆ ನಾನು ಮತ್ತು ನನ್ನ ಸೋದರ ಇಬ್ಬರೂ ರಾಜಕೀಯದಲ್ಲಿ ಭಾಗವಹಿಸುವುದಿಲ್ಲ ಎಂದು ಪ್ರತಿಜ್ಞೆ ಮಾಡಲು ಅಥವಾ ವಾಗ್ದಾನ ನೀಡಲು ಸಂಪೂರ್ಣವಾಗಿ ಸ್ವಸಂತೋಷದಿಂದ ಒಪ್ಪುತ್ತೇವೆ. ಏಕೆಂದರೆ ಅಂತಹ ಒಂದು ಪ್ರತಿಜ್ಞೆ ಇಲ್ಲದೆಯೂ ನನ್ನ ಅನಾರೋಗ್ಯ ಮತ್ತು ನನಗೆ ನಾನೇ ತೊರೆದುಕೊಂಡಿದ್ದ ಮನೆಯ ಪ್ರೀತ್ಯಾದರಗಳು ನನ್ನನ್ನು ಮುಂಬರುವ ವರ್ಷಗಳಲ್ಲಿ ಒಂದು ನೆಮ್ಮದಿಯ ಹಾಗೂ ನಿವೃತ್ತಜೀವನ ನಡೆಸುವ ಬಯಕೆಯನ್ನು ಬೇಡುತ್ತದೆ, ಸಕ್ರಿಯ ರಾಜಕೀಯದಲ್ಲಿ ಕೈಯಾಡಿಸಲು ಯಾವುದೂ ಈಗ ನನ್ನನ್ನು ಪ್ರೇರೇಪಿಸಲಾರದು.

(ಸಿ) ಇದು ಅಥವಾ ಯಾವುದೇ ಪ್ರತಿಜ್ಞೆ, ಉದಾಹರಣೆಗೆ ನಮ್ಮ ಬಿಡುಗಡೆಯ ನಂತರ ಒಂದು ನಿರ್ದಿಷ್ಟ ಪ್ರದೇಶದಲ್ಲಿ ಉಳಿಯುವುದು ಅಥವಾ ಒಂದು ನಿರ್ದಿಷ್ಟ ಅವಧಿಯವರೆಗೆ ನಮ್ಮ ಚಲನವಲನಗಳನ್ನು ಪೋಲಿಸರಿಗೆ ವರದಿ ಮಾಡುತ್ತಿರುವುದು, ಪ್ರಭುತ್ವದ ಸುರಕ್ಷತೆಯನ್ನು ನಿಜವಾಗಿಯೂ ಖಾತರಿಪಡಿಸುವಂತಹ ಯಾವುದೇ ತರ್ಕಸಮ್ಮತವಾದ ಷರತ್ತುಗಳನ್ನು ನಾನು ಮತ್ತು ನನ್ನ ಸೋದರ ಸಂತೋಷದಿಂದ ಒಪ್ಪಿಕೊಳ್ಳುತ್ತೇವೆ. ಅಂತಿಮವಾಗಿ, ಪ್ರಭತ್ವವನ್ನು ಒಳಗೊಂಡಿರುವ ಪ್ರಚಂಡ ಬಹುಮತದ ಅದೇ ಜನರನ್ನು ಯಾವ ಪ್ರಭುತವವನ್ನು ನಮ್ಮಿಂದ ಸುರಕ್ಷಿತವಾಗಿಡಬೇಕೆಂದಿದೆಯೋ, ಆ ಪ್ರಭುತ್ವದ ಭಾಗವೇ ಆಗಿರುವ ಬಹುಪಾಲು ಜನರು, ಆದರಣೀಯ ಹಾಗೂ ಅನುಭವಿಯಾಗಿರುವ ಸೌಮ್ಯ ಸ್ವಭಾವದ ಮುಖಂಡರಾದ ಸುರೇಂದ್ರನಾಥರಿಂದ ಹಿಡಿದು ಬೀದಿಯಲ್ಲಿರುವ ಕಟ್ಟಕಡೆಯ ಮನುಷ್ಯ, ಪತ್ರಿಕಾರಂಗ ಮತ್ತು ವೇದಿಕೆ, ಹಿಂದೂಗಳು ಮತ್ತು ಮಹಮ್ಮದೀಯರವರೆಗೆ – ಪಂಜಾಬಿನಿಂದ ಮದ್ರಾಸಿನವರೆಗೆ–ಎಲ್ಲರೂ ನಮ್ಮ ತಕ್ಷಣದ ಹಾಗೂ ಪೂರ್ಣ ಬಿಡುಗಡೆಗಾಗಿ ಸ್ಪಷ್ಟವಾಗಿ ಹಾಗೂ ಸತತವಾಗಿ ಕೇಳುತ್ತಿದ್ದಾರೆ, ಅದು ತಮ್ಮ ಸುರಕ್ಷತೆಗೆ ಅನುಗುಣವಾಗಿದೆ ಎಂದು ಘೋಷಿಸುತ್ತಿದ್ದಾರೆ. ಅದಕ್ಕಿಂತ ಹೆಚ್ಚಾಗಿ, ಯಾವ 'ಕಹಿ ಮನೋಭಾವ'ವನ್ನು ತೊಡೆದುಹಾಕಬೇಕೆಂಬ ಉದ್ದೇಶವನ್ನು(ಸರಕಾರದ–ಅನು) ಘೋಷಣೆಯು ಹೊಂದಿದೆಯೋ ಆ ಒಂದು ಅಂಶವನ್ನೇ ಅದು ತೆಗೆದುಹಾಕುತ್ತದೆ ಎಂದು ಘೋಷಿಸುತ್ತಿದ್ದಾರೆ.

4. ಆದಕಾರಣ ನಾವಿಬ್ಬರು ಮತ್ತು ಇನ್ನೂ ಅಲ್ಲಿ ಉಳಿದಿರುವವರಿಗೆ ಉದಾರ ಹೃದಯದ ಕ್ಷಮೆಯನ್ನು ನೀಡದಿರುವ ತನಕ, ಆ ಘೋಷಣೆಯ ಮುಖ್ಯ ಉದ್ದೇಶವು ಈಡೇರಲಾರದು ಮತ್ತು ಕಹಿ ಮನೋಭಾವವನ್ನು ತೆಗೆದುಹಾಕಲಾಗದು ಎಂದು ನಾನು ಸಾರ್ವಜನಿಕರ ತಿಳುವಳಿಕೆಗೆ ಎಚ್ಚರಿಕೆ ನೀಡುತ್ತಿದ್ದೇನೆ.

5. ಅಷ್ಟೇ ಅಲ್ಲದೆ, ನಮ್ಮ ಪ್ರಕರಣದಲ್ಲಿ ಶಿಕ್ಷೆಯ ಉದ್ದೇಶಗಳು ನೆರವೇರಿಸಲ್ಪಟ್ಟಿವೆ. ಏಕೆಂದರೆ (ಎ) ನಾವು ಜೈಲಿನಲ್ಲಿ 10 ರಿಂದ 11 ವರ್ಷಗಳನ್ನು ಕಳೆದಿದ್ದೇವೆ, ಆದರೆ ಜೀವಾವಧಿ ಶಿಕ್ಷೆ ಪಡೆದಿದ್ದ ಸನ್ಯಾಲ್ ಅವರನ್ನು 4 ವರ್ಷಕ್ಕೇ ಬಿಡುಗಡೆ ಮಾಡಲಾಗಿದೆ ಮತ್ತು ದೊಂಬಿ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಯಾದವರನ್ನು ಒಂದು ವರ್ಷಕ್ಕೆ ಮೊದಲೇ ಬಿಡುಗಡೆ ಮಾಡಲಾಗಿದೆ; (ಬಿ) ಭಾರತದಲ್ಲಿ ಮತ್ತು ಇಲ್ಲಿ (ಅಂಡಮಾನಿನಲ್ಲಿ) ನಮಗೆ ಕೊಟ್ಟ ಕಷ್ಟದ ಕೆಲಸಗಳನ್ನು, ಗಿರಣಿಗಳು, ಎಣ್ಣೆಗಿರಣಿ ಮತ್ತು ಪ್ರತಿಯೊಂದನ್ನೂ ನಾವು ಮಾಡಿದ್ದೇವೆ; (ಸಿ) ಜೈಲಿನಲ್ಲಿ ನಮ್ಮ ನಡವಳಿಕೆಗಳು ಈಗಾಗಲೇ ಬಿಡುಗಡೆಯಾದವರಿಗಿಂತ ಯಾವುದೇ ರೀತಿಯಲ್ಲೂ ಹೆಚ್ಚು ಆಕ್ಷೇಪಣಾರ್ಹವಾಗಿಲ್ಲ; ಪೋರ್ಟ್ ಬ್ಲೇರ್‌ನಲ್ಲಿ ಕೂಡ ಅವರುಗಂಭೀರ ಸಂಚು ಮಾಡಿದ ಅನುಮಾನವಿತ್ತು ಮತ್ತು ಮತ್ತೆ ಅವರನ್ನು ಜೈಲಿಗೆ ಹಾಕಲಾಗಿತ್ತು. ಅದಕ್ಕೆ ಪ್ರತಿಯಾಗಿ ನಾವಿಬ್ಬರು ಇವತ್ತಿನವರೆಗೂ ಅತಿ ಕಟ್ಟುನಿಟ್ಟಿನ ಶಿಸ್ತು ಹಾಗೂ ಸಂಯಮವನ್ನು ಪಾಲಿಸಿದ್ದೇವೆ ಮತ್ತು ಅದೂ ಅಲ್ಲದೇ ಕಳೆದ ಆರು ವರ್ಷಗಳ ಅವಧಿಗೂ ಮೀರಿ ನಮ್ಮ ವಿರುದ್ಧ ಸಾಮಾನ್ಯ ಶಿಸ್ತಿನ ವಿಷಯದಲ್ಲಿ ಕೂಡ ಒಂದೇ ಒಂದು ಪ್ರಕರಣ ಇಲ್ಲ.

6. ಕೊನೆಯಲ್ಲಿ, ಅಂಡಮಾನಿನಿಂದ ಬಿಡುಗಡೆಯಾದವರನ್ನೂ ಒಳಗೊಂಡಂತೆ ನೂರಾರು ಕೈದಿಗಳನ್ನು ಬಿಡುಗಡೆ ಮಾಡಿರುವುದಕ್ಕೆ ಮತ್ತು ನನ್ನ 1914 ಮತ್ತು 1918ರ ಅರ್ಜಿಯನ್ನು ಭಾಗಶಃ ಮಂಜೂರು ಮಾಡಿರುವುದಕ್ಕೂ ನನ್ನ ಕೃತಜ್ಞತೆಯನ್ನು ವ್ಯಕ್ತಪಡಿಸಲು ಬೇಡಿಕೊಳ್ಳುತ್ತೇನೆ. ಆದ್ದರಿಂದ ನಾನು ಮತ್ತು ನನ್ನ ಸೋದರನನ್ನೂ ಒಳಗೊಂಡಂತೆ ಉಳಿದಿರುವ ಎಲ್ಲಾ ಕೈದಿಗಳನ್ನೂ, ಏಕೆಂದರೆ ಅವರೂ ಕೂಡ ಅದೇ ಆಧಾರದಲ್ಲಿರುವುದರಿಂದ ತಾವು ಘನತೆವೆತ್ತವರು ಬಿಡುಗಡೆ ಮಾಡುತ್ತೀರೆಂದು ವಿಶ್ವಾಸವಿಡುವುದು ವಿಪರೀತವಾಗಲಾರದು. ವಿಶೇಷವಾಗಿ, ಮಹಾರಾಷ್ಟ್ರದಲ್ಲಿನ ರಾಜಕೀಯ ಪರಿಸ್ಥಿತಿಯು ಕಳೆದ ಹಲವಾರು ವರ್ಷಗಳಿಂದ ಯಾವುದೇ ಉಗ್ರವಾದ ಗಲಭೆಯ ಘಟನೆಗಳಿಂದ ಅಸಾಧಾರಣ ರೀತಿಯಲ್ಲಿ ಮುಕ್ತವಾಗಿದೆ. ಆದರೆ, ಇಲ್ಲಿ ಸಲ್ಲಿಸಲು ಬೇಡಿಕೊಳ್ಳುವುದೇನೆಂದರೆ ಈಗಾಗಲೇ ಬಿಡುಗಡೆಯಾದವರ ಅಥವಾ ಇನ್ಯಾರದೋ ವರ್ತನೆಯನ್ನು ನಮ್ಮ ಬಿಡುಗಡೆಗೆ ಷರತ್ತನ್ನಾಗಿ ಮಾಡಬೇಡಿ ಎಂದು ಕೋರುತ್ತೇನೆ: ಏಕೆಂದರೆ ನಮಗೆ ಕ್ಷಮೆ ನಿರಾಕರಿಸುವುದು ಮತ್ತು ಇನ್ಯಾರದೋ ತಪ್ಪಿಗಾಗಿ ನಮಗೆ ಶಿಕ್ಷೆ ನೀಡುವುದು ವಿವೇಚನಾರಹಿತವಾಗುತ್ತದೆ.

7. ಈ ಎಲ್ಲದರ ಆಧಾರದಲ್ಲಿ, ಮತ್ತು ಪ್ರಸ್ತುತ ಹಾಗೂ ವಾಗ್ದಾನಗಳ ಜತೆಗೂಡಿದ ಸುಧಾರಣೆಗಳ ವಾಸ್ತವ ಹಾಗೂ ಉತ್ತರದಿಂದ ಟರ್ಕಿ–ಆಫ್ಘನ್ ಮತಾಂಧರ ಸಮಾನ ಅಪಾಯಗಳ ಹಿನ್ನೆಲೆಯಲ್ಲಿ ನಮ್ಮೆರಡೂ ದೇಶಗಳ ಹಿತಾಸಕ್ತಿಗಳಿಗಾಗಿ ನಿಷ್ಠಾವಂತ ಸಹಕಾರವನ್ನು ನಾನು ಪ್ರಾಮಾಣಿಕವಾಗಿ ಪ್ರತಿಪಾದಿಸಲು ಮತ್ತು ವಿವೇಕಯುತ ಪ್ರತಿಜ್ಞೆಗೈಯಲು ನಾನು ಸಿದ್ಧನಾಗಿದ್ದೇನೆಂದು ನನ್ನಿಂದ ಕೇಳಿದ ಮೇಲೆ ಸರ್ಕಾರವು ನನ್ನನ್ನು ಬಿಡುಗಡೆ ಮಾಡಬಹುದು ಮತ್ತು ನನ್ನ ವೈಯಕ್ತಿಕ ಕೃತಜ್ಞತೆಯನ್ನು ಗಳಿಸಬಹುದು ಎಂದು ನಂಬುತ್ತೇನೆ. ಬಹಳ ಬೇಗ ಬತ್ತಿಹೋದ ನನ್ನ ಆರಂಭದ ಬದುಕಿನ ಪ್ರತಿಭಾಪೂರ್ಣ ನಿರೀಕ್ಷೆಗಳು ನನಗೆ ವಿಷಾದದ ಯಾತನಾಮಯ ಮೂಲಗಳಾಗಿರುವಾಗ ಬಿಡುಗಡೆಯು ನನಗೆ ಹೊಸ ಜನ್ಮವನ್ನು ನೀಡುತ್ತದೆ ಹಾಗೂ ನನ್ನ ಹೃದಯವನ್ನು ಸಂವೇದನಾಶೀಲವಾಗಿ ಹಾಗೂ ವಿನಯಪೂರ್ವಕವಾಗಿ ತಟ್ಟುತ್ತದೆ, ಈ ಉಪಕಾರವು ಭವಿಷ್ಯದಲ್ಲಿ ನನ್ನನ್ನು ಗಾಢವಾಗಿ ವೈಯಕ್ತಿಕವಾಗಿ ಒಲಿಸಿಕೊಳ್ಳುತ್ತದೆ ಮತ್ತು ರಾಜಕೀಯವಾಗಿ ಉಪಯುಕ್ತನನ್ನಾಗಿ ಮಾಡುತ್ತದೆ. ಏಕೆಂದರೆ, ಭುಜಶಕ್ತಿಯು ಸೋಲುವಲ್ಲಿ ಹೃದಯ ವೈಶಾಲ್ಯವು ಗೆಲ್ಲುತ್ತದೆ.

ಚೀಫ್ ಕಮಿಷನರ್ ಅವರು ತಮ್ಮ ಅವಧಿಯ ಪೂರ್ಣ ನಾನು ಅವರಿಗೆ ತೋರಿದ ವೈಯಕ್ತಿಕ ಗೌರವವನ್ನು ನೆನಪು ಮಾಡಿಕೊಂಡು ಮತ್ತು ಅವರ ಇಡೀ ಸೇವಾ ಅವಧಿಯಲ್ಲಿ ನಾನು ತೀರ ನಿರಾಸೆಯನ್ನು ಎದುರಿಸಬೇಕಾದಾಗಲೂ ಅದನ್ನು ದ್ವೇಷವೆಂದು ಬಗೆಯದೆ, ಕೊನೆಯ ಕೃಪೆ ತೋರಿ ನನ್ನ ಹತಾಶೆಗೆ ಇದೊಂದು ಅತ್ಯಂತ ನಿರಪಾಯದ ದ್ವಾರವಾಗಿ ಪರಿಣಮಿಸಲು ಈ ನನ್ನ ಅರ್ಜಿಯನ್ನು ತಮ್ಮ ಶಿಫಾರಸಿನೊಂದಿಗೆ ಘನತೆವೆತ್ತ ಭಾರತದ ವೈಸ್‌ರಾಯ್ ಅವರಿಗೆ ಕಳಿಸಿಕೊಡುವ ಕೃಪೆ ತೋರಬೇಕೆಂದು ಕೋರುತ್ತೇನೆ.

ನಾನು ನಿಮ್ಮವನಾಗಿರಲು ಬೇಡುತ್ತೇನೆ,
ಸ್ವಾಮಿ, ತಮ್ಮ ಅತ್ಯಂತ ವಿಧೇಯ ಸೇವಕ
(ಸಹಿ) ವಿ.ಡಿ. ಸಾವರ್ಕರ್,
ಅಪರಾಧಿ ನಂ.32778

ಇ.ಡಿ.: ಪ್ರತಿಪಕ್ಷದ ವಿರುದ್ಧ ಹೊಸ ಅಸ್ತ್ರ ದುರುಪಯೋಗದ ಪರಾಕಾಷ್ಠೆ

ಪ್ರಕಾಶ್ ಕಾರತ್

ಮೋದಿ ಸರಕಾರ ಪ್ರತಿಪಕ್ಷದ ವಿರುದ್ಧ ಹೊಸ ದಾಳಿ ಆರಂಭಿಸಿರುವುದರಲ್ಲಿ ಕೇಂದ್ರೀಯ ಸಂಸ್ಥೆಗಳ ಚಟುವಟಿಕೆಗಳ ಮಹಾಪೂರವೇ ಕಾಣಿಸುತ್ತಿದೆ. ಕೇಂದ್ರೀಯ ತನಿಖಾ ದಳ (ಸಿಬಿಐ) ಮತ್ತು ಅನುಷ್ಠಾನ ನಿರ್ದೇಶನಾಲಯ (ಇ.ಡಿ.) ಇವೇ ಆ ಕೇಂದ್ರೀಯ ಸಂಸ್ಥೆಗಳು. ಕಳೆದ ಎರಡು ವಾರಗಳಲ್ಲಿ ಸಿಬಿಐ, ದೆಹಲಿಯ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾರನ್ನು ಪ್ರಶ್ನಿಸಲೆಂದು ಕರೆಸಿಕೊಂಡು ಬಂಧಿಸಿದೆ. ಆವಾಗಿನಿಂದ, ಅವರು ಜೈಲಿನಲ್ಲಿರುವಾಗಲೇ ಇ.ಡಿ. ಅವರನ್ನು ಬಂಧಿಸಿದೆ. ಸಿಬಿಐ, ಪಾಟ್ನಾದಲ್ಲಿ ಆರ್‌ಜೆಡಿ ನಾಯಕಿ ಹಾಗೂ ಲಾಲೂ ಪ್ರಸಾದ್ ಯಾದವ್‌ರ ಪತ್ನಿ ರಾಬ್ಡಿ ದೇವಿಯನ್ನೂ ಪ್ರಶ್ನಿಸಿದೆ. ಅದರ ಬೆನ್ನಲ್ಲೇ ದೆಹಲಿಯಲ್ಲಿ ಲಾಲೂ ಪ್ರಸಾದ್ ಯಾದವ್‌ರನ್ನು ಪ್ರಶ್ನಿಸಿದೆ. ಒಂದು ದಶಕಕ್ಕಿಂತಲೂ ಹಿಂದೆ ನಡೆದಿದೆ ಎನ್ನಲಾದ ಉದ್ಯೋಗಕ್ಕಾಗಿ ಭೂಮಿ ಹಗರಣದಲ್ಲಿ ಈ ವಿಚಾರಣೆ ನಡೆದಿದೆ. ಸಿಬಿಐ ಕ್ರಮದ ನಂತರ ಇ.ಡಿ. ಕೂಡ ಕಣಕ್ಕಿಳಿದು ದೆಹಲಿ ಸೇರಿದಂತೆ 24 ಸ್ಥಳಗಳಲ್ಲಿ ತೇಜಸ್ವಿ ಯಾದವ್ ಮತ್ತು ಕುಟುಂಬದ ಇತರ ಸದಸ್ಯರು ಮತ್ತು ಸಹಚರರ ಮೇಲೆ ದಾಳಿ ನಡೆಸಿದೆ. ಇದು ಕಾರ್ಯಾಚರಣೆಯ ವಿಧಾನವಾಗಿದೆ (ಮೋಡಸ್ ಆಪರೆಂಡಿ): ಸಿಬಿಐ ತನಿಖಾ ವರದಿ ಸಲ್ಲಿಸುತ್ತದೆ. ಅದರ ಆಧಾರದಲ್ಲಿ ಇ.ಡಿ. ಕಾರ್ಯಾಚರಣೆಗಿಳಿದು ಹಣಕಾಸು ದುರುಪಯೋಗ ತಡೆ ಕಾನೂನು (ಪಿಎಂಎಲ್‌ಎ) ಅನ್ವಯ ಕ್ರಮಕ್ಕೆ ಮುಂದಾಗುತ್ತದೆ. ಪಿಎಂಎಲ್‌ಎ ನಿಯಮಗಳು ಕರಾಳವಾಗಿವೆ. ಬಂಧಿಸಲು, ಶೋಧಿಸಲು ಮತ್ತು ಜೈಲಿನಲ್ಲಿರುವ ವ್ಯಕ್ತಿಗಳ ಆಸ್ತಿ ಮುಟ್ಟುಗೋಲು ಹಾಕಲು ಇ.ಡಿ.ಗೆ ಅದು ವ್ಯಾಪಕ ಅಧಿಕಾರ ನೀಡುತ್ತದೆ. ಬಂಧಿತರು ಜಾಮೀನು ಪಡೆಯುವುದೂ ದುಸ್ತರವಾಗಿದೆ.

ಮೋದಿ ಸರಕಾರವು ಕೇಂದ್ರೀಯ ಸಂಸ್ಥೆಗಳನ್ನು, ಅದರಲ್ಲೂ ವಿಶೇಷವಾಗಿ ಇ.ಡಿ.ಯನ್ನು ಪ್ರತಿಪಕ್ಷದ ವಿರುದ್ಧ ಸಾಧನವಾಗಿ ಪರಿವರ್ತಿಸಿದೆ. ಇ.ಡಿ. ಮತ್ತು ಸಿಬಿಐಗಳನ್ನು ಸಾಧನವಾಗಿ ಬಳಸಿಕೊಳ್ಳುವುದು ರಾಜಕೀಯ ಪ್ರೇರಿತವಾಗಿದೆ. ಅದು ಎರಡು ಉದ್ದೇಶಗಳನ್ನು ಈಡೇರಿಸುತ್ತದೆ. ಒಂದೆಡೆ, ಯಾವುದೇ ವಿಚಾರಣೆ ಅಥವಾ ಶಿಕ್ಷೆಯಿಲ್ಲದೆ ದೀರ್ಘ ಸಮಯದಿಂದ ಜೈಲಿನಲ್ಲಿರುವ ಪ್ರಮುಖ ನಾಯಕರನ್ನು ಟಾರ್ಗೆಟ್ ಮಾಡಿ ಪ್ರತಿಪಕ್ಷವನ್ನು ದಮನಿಸಲು ಅದನ್ನು ಬಳಸಲಾಗುತ್ತಿದೆ. ಈ ಪ್ರಕ್ರಿಯೆಯೇ ಒಂದು ಶಿಕ್ಷೆಯಾಗುತ್ತದೆ. ಇನ್ನೊಂದೆಡೆ, ಸಿಬಿಐ/ಇಡಿ ಕ್ರಮದ ಬೆದರಿಕೆಯೊಡ್ಡಿ ಆಯ್ದ ನಾಯಕರು ಬಿಜೆಪಿ ಸೇರುವಂತೆ ಮಾಡಿ ಪ್ರತಿಪಕ್ಷವನ್ನು ಒಡೆಯುವುದು ಇನ್ನೊಂದು ಉದ್ದೇಶವಾಗಿದೆ.

ಆಮ್ ಆದ್ಮಿ ಪಕ್ಷವನ್ನು (ಆಪ್) ದೆಹಲಿಯಲ್ಲಿ ರಾಜಕೀಯವಾಗಿ ಸೋಲಿಸಲು ಬಿಜೆಪಿಗೆ ಕಷ್ಟವಾಗಿದೆ. 2022ರ ಡಿಸೆಂಬರ್‌ನಲ್ಲಿ ದೆಹಲಿ ಮುನಿಸಿಪಲ್ ಕಾರ್ಪೊರೇಶನ್‌ಗೆ ನಡೆದ ಚುನಾವಣೆಯಲ್ಲಿ ಆಪ್ ಗೆಲುವು ಇತ್ತೀಚಿನ ಉದಾಹರಣೆಯಾಗಿದೆ. ಆಪ್ ಸರಕಾರದ ಆರೋಗ್ಯ ಮಂತ್ರಿ ಸತ್ಯೇಂದ್ರ ಜೈನ್‌ರನ್ನು 2022ರ ಮೇನಲ್ಲಿ ಬಂಧಿಸಲಾಗಿದ್ದು ಒಂಬತ್ತು ತಿಂಗಳ ನಂತರವೂ ಅವರು ಸೆರೆಮನೆಯಲ್ಲಿದ್ದಾರೆ. ಇದೀಗ ಎರಡನೇ ಸಚಿವ ಹಾಗೂ ಆಪ್‌ನ ಪ್ರಮುಖ ನಾಯಕ ಮನೀಶ್ ಸಿಸೋಡಿಯಾರನ್ನು ತಥಾಕಥಿತ ಮದ್ಯ ಹಗರಣದಲ್ಲಿ ಸೆರೆಮನೆಗೆ ತಳ್ಳಲಾಗಿದೆ. ಸಿಬಿಐ ಮಾಡಿದ ಬಂಧನಕ್ಕೆ ಪೂರಕವಾಗಿ ಇ.ಡಿ. ಕೇಸ್ ದಾಖಲಿಸಿದ್ದು ಅವರಿಗೆ ಜಾಮೀನು ಸಿಗುವುದೂ ಕಷ್ಟವಾಗಿದೆ.

ತೆಲಂಗಾಣದಲ್ಲಿ ಈ ವರ್ಷಾಂತ್ಯದಲ್ಲಿ ವಿಧಾನಸಭೆ ಚುನಾವಣೆ ನಡೆಯಲಿದೆ. ಈ ರಾಜ್ಯದಲ್ಲಿ ಭಾರಿ ಸಾಧನೆ ಮಾಡಲು ಬಿಜೆಪಿ ಹರಸಾಹಸ ಮಾಡುತ್ತಿದೆ. ಭಾರತ ರಾಷ್ಟ್ರ ಸಮಿತಿ (ಬಿಆರ್‌ಎಸ್) ನಾಯಕ ಹಾಗೂ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್‌ರ ಪುತ್ರಿ ಕೆ. ಕವಿತಾರನ್ನು ದೆಹಲಿಯ ಅಬಕಾರಿ ಹಗರಣದ ಸಂಬಂಧ ವಿಚಾರಣೆಗಾಗಿ ಇ.ಡಿ. ಕರೆಸಿರುವುದು, ಚುನಾವಣಾ ಲಾಭಕ್ಕಾಗಿ ಕೇಂದ್ರೀಯ ಸಂಸ್ಥೆಗಳನ್ನು ಬಿಜೆಪಿ ಯಾವ ರೀತಿಯಲ್ಲಿ ಬಳಸಿಕೊಳ್ಳುತ್ತಿದೆ ಎನ್ನುವುದಕ್ಕೆ ಸ್ಪಷ್ಟ ಉದಾಹರಣೆಯಾಗಿದೆ.

ಬಿಹಾರದಲ್ಲಿ, ಲಾಲೂ ಪ್ರಸಾದ್ ಯಾದವ್ ಮತ್ತು ಅವರ ಕುಟುಂಬ ಸದಸ್ಯರ ವಿರುದ್ಧ ಹಳೇ ಕೇಸೊಂದಕ್ಕೆ ಮರುಜೀವ ಕೊಟ್ಟಿರುವುದಕ್ಕೂ ರಾಜ್ಯದ ರಾಜಕೀಯ ವಿದ್ಯಮಾನಗಳಿಗೂ ನಂಟಿರುವುದನ್ನು ತೋರಿಸುತ್ತದೆ. ಮುಖ್ಯಮಂತ್ರಿ ನಿತೀಶ್ ಕುಮಾರ್ ಮತ್ತು ಜೆಡಿ(ಯು), ಮಹಾಘಟಬಂಧನ್ ಸೇರಿರುವುದರಿಂದ ಬಿಜೆಪಿ ಪ್ರತ್ಯೇಕಗೊಂಡಿತು. ಮಹಾಘಟಬಂಧನ್ ಮೈತ್ರಿಯನ್ನು ಅಸ್ಥಿರಗೊಳಿಸಲು ಭ್ರಷ್ಟಾಚಾರದ ವಿಚಾರ ಮುಂದಿಟ್ಟುಕೊಂಡು ಕೇಂದ್ರೀಯ ಸಂಸ್ಥೆಗಳನ್ನು ಬಳಸುವುದು ಬಿಜೆಪಿಯ ಉದ್ದೇಶವಾಗಿದೆ. ವಿವಿಧ ಪ್ರತಿಪಕ್ಷಗಳ ನಾಯಕರಿಗೆ ಆಮಿಷವೊಡ್ಡಿ, ಒತ್ತಡ ಹೇರಿ ಅವರು ಪಕ್ಷಾಂತರ ಮಾಡಿ ಬಿಜೆಪಿಗೆ ಸೇರುವಂತೆ ಮಾಡಿ, ರಾಜಕೀಯ ಲಾಭ ಗಳಿಸುವುದು ಕೂಡ ಕೇಂದ್ರೀಯ ಸಂಸ್ಥೆಗಳನ್ನು ಬಳಸುವ ಹಿಂದಿನ ಇನ್ನೊಂದು ಉದ್ದೇಶವಾಗಿದೆ. ಅಸ್ಸಾಂನ ಹಾಲಿ ಮುಖ್ಯಮಂತ್ರಿ ಹಿಮಂತ ಬಿಶ್ವ ಶರ್ಮಾ ಇದಕ್ಕೆ ಪ್ರಮುಖ ಉದಾಹರಣೆಯಾಗಿದ್ದಾರೆ. ಶರ್ಮಾ ಕಾಂಗ್ರೆಸ್‌ನಲ್ಲಿದ್ದಾಗ ಶಾರದಾ ಹಗರಣದಲ್ಲಿ ಸಿಬಿಐನ ತನಿಖೆಗೆ ಒಳಗಾಗಿದ್ದರು. ಬಿಜೆಪಿಗೆ ಸೇರ್ಪಡೆಯಾದ ನಂತರ ಅವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ.

ಅದೇ ರೀತಿ, ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ತೊರೆದು ಬಿಜೆಪಿಗೆ ಹಾರಿದ ಸುವೇಂದು ಅಧಿಕಾರಿ ಮತ್ತು ಮಹಾರಾಷ್ಟ್ರದಲ್ಲಿ ನಾರಾಯಣ ರಾಣೆ ಅವರ ಉದಾಹರಣೆಗಳಿವೆ. ಮಹಾರಾಷ್ಟ್ರದಲ್ಲಿ ಶಿವ ಸೇನೆಯಲ್ಲಿ ಒಡಕುಂಟಾಗಿ ಮಹಾ ವಿಕಾಸ್ ಆಘಾಡಿ (ಎಂವಿಎ) ಸರಕಾರ ಪತನವಾಗಿದ್ದಕ್ಕೆ ಕೂಡ ಇ.ಡಿ. ನಡೆಸಿದ ವ್ಯವಸ್ಥಿತ ಕೆಲಸಕ್ಕೂ ಭಾಗಶಃ ಪಾಲಿದೆ. ಶಿವ ಸೇನೆಯ ಪ್ರತಾಪ್ ಸರನಾಯಕ್, ಯಾಮಿನಿ ಜಾಧವ್‌ರಂಥ ಶಿವ ಸೇನೆ ಶಾಸಕರು ಮತ್ತು ಭಾವನಾ ಗಾವಳಿಯಂಥ ಸಂಸತ್ ಸದಸ್ಯರಿಗೆ ಏಕನಾಥ ಶಿಂಧೆ ಬಣಕ್ಕೆ ಸೇರುವಂತೆ ಒತ್ತಡ ಹೇರಲಾಯಿತು. ಅವರುಗಳ ವಿರುದ್ಧ ಇ.ಡಿ. ಕೇಸ್‌ಗಳನ್ನು ದಾಖಲಿಸಿ ಆಸ್ತಿಗಳನ್ನು ಮುಟ್ಟುಗೋಲು ಹಾಕಿ ಈ ರೀತಿ ಮಾಡಲಾಯಿತು.



ಸತೀಶ್ ಆಚಾರ್ಯ

ಕರ್ನಾಟಕದ ಉದಾಹರಣೆ

ಕರ್ನಾಟಕದ ಇತ್ತೀಚಿನ ಭ್ರಷ್ಟಾಚಾರ ಪ್ರಕರಣವೊಂದು ಕೇಂದ್ರೀಯ ತನಿಖಾ ಸಂಸ್ಥೆಗಳ ಪಕ್ಷಪಾತಿ ದುರುಪಯೋಗ ಮತ್ತು ಅವುಗಳ ಏಕಮುಖ ಸ್ವರೂಪವನ್ನು ಕಣ್ಣಿಗೆ ರಾಚುವಂತೆ ಬಟಾಬಯಲುಗೊಳಿಸಿದೆ. ಕರ್ನಾಟಕದಲ್ಲಿ ಬಿಜೆಪಿ ಸರಕಾರದಡಿ ಆಳುವ ಬಿಜೆಪಿಯ ಶಾಸಕನ ಪುತ್ರ ಪ್ರಶಾಂತ್ ಮಾಡಾಳ್‌ನನ್ನು ಲಂಚ ಪಡೆಯುತ್ತಿದ್ದಾಗ ಲೋಕಾಯುಕ್ತ ಪೊಲೀಸರು ರೆಡ್‌ಹ್ಯಾಂಡ್ ಆಗಿ ಬಂಧಿಸಿದ್ದಾರೆ. ಆತನ ಕಚೇರಿ ಮತ್ತು ಮನೆಯಿಂದ ಒಟ್ಟು 6.73 ಕೋಟಿ ರೂಪಾಯಿಯನ್ನು ವಶಪಡಿಸಿಕೊಳ್ಳಲಾಗಿದೆ. ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅಧ್ಯಕ್ಷರಾಗಿದ್ದ ನಿಗಮದಲ್ಲಿ ಸಂಬಂಧಪಟ್ಟ ಕೆಲಸ ಗಳನ್ನು ಮಾಡಿಕೊಡಲೆಂದು ಈ ಲಂಚಗಳನ್ನು ಪಡೆಯಲಾಗಿತ್ತು. ಆಶ್ಚರ್ಯದ ಸಂಗತಿಯೆಂದರೆ ಶಾಸಕನಿಗೆ 24 ಗಂಟೆಯೊಳಗೆ ಕರ್ನಾಟಕ ಹೈಕೋರ್ಟ್ ಜಾಮೀನು ಮಂಜೂರು ಮಾಡಿದೆ ಹಾಗೂ ಶಾಸಕನ ವಿರುದ್ಧ ಯಾವುದೇ ಕ್ರಮವನ್ನು ಕೈಗೊಳ್ಳಲಾಗಿಲ್ಲ. ಒಂದು ವೇಳೆ ಯಾವುದಾದರೂ ಪ್ರತಿಪಕ್ಷದ ನಾಯಕರಾಗಿದ್ದಿದ್ದರೆ ಸಿಬಿಐ ಮತ್ತು ಇ.ಡಿ. ತಕ್ಷಣವೇ ಕಾರ್ಯ ಪ್ರವೃತ್ತವಾಗುತ್ತಿದ್ದವು.

ಪರಸ್ಪರರ ವಿರುದ್ಧ ಕೇಂದ್ರೀಯ ಸಂಸ್ಥೆಗಳನ್ನು ಬಳಸುವಂತೆ ಬಿಜೆಪಿ ಸರಕಾರವನ್ನು ಆಗ್ರಹಿಸಲು ಪ್ರತಿಯೊಂದು ಪಕ್ಷವೂ ಉತ್ಸುಕವಾಗಿದೆ. ಪ್ರತಿಪಕ್ಷದಲ್ಲಿರುವ ಪಕ್ಷಗಳು ಪರಸ್ಪರ ವಿರುದ್ಧವಾದ ರಾಜಕೀಯ ಮತ್ತು ಹಿತಗಳನ್ನು ಹೊಂದಿರುವುದು ಸಹಜವೇ ಆಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪರಸ್ಪರರ ವಿರುದ್ಧ ಸೆಣಸಲು ಅವುಗಳು ಸ್ವತಂತ್ರವಾಗಿವೆ. ಆದರೆ, ಮೋದಿ ಸರಕಾರದ ಸರ್ವಾಧಿಕಾರಿ–ಫ್ಯಾಸಿಸ್ಟ್ ಆಕ್ರಮಣ ನಡೆಯುತ್ತಿರುವಾಗ ಅವುಗಳು ಕನಿಷ್ಠ ಪಕ್ಷ ತಮ್ಮ ಕ್ಷುಲ್ಲಕ ರಾಜಕೀಯವನ್ನು ಬದಿಗಿಟ್ಟು ಪ್ರಜಾಪ್ರಭುತ್ವ ಮತ್ತು ಪ್ರತಿಪಕ್ಷಗಳ ಹಕ್ಕುಗಳ ರಕ್ಷಣೆಗೆ ಮುಂದಾಗಬೇಕೆಂದು ನಿರೀಕ್ಷಿಸಬೇಕಾಗಿದೆ. ಇದಕ್ಕಿಂತ ಬೇರೆಯಾದ ಯಾವುದೇ ನಿಲುವು ಸ್ವಯಂ ಸೋಲಾಗುತ್ತದೆ.

ರಾಜಕಾರಣಿಗಳ ವಿರುದ್ಧ ಇ.ಡಿ. ದಾಖಲಿಸಿಕೊಂಡಿರುವ ಶೇಕಡ 95ರಷ್ಟು ಪ್ರಕರಣಗಳು ಪ್ರತಿಪಕ್ಷ ನಾಯಕರು ಮತ್ತು ಚುನಾಯಿತ ಜನಪ್ರತಿನಿಧಿಗಳ ವಿರುದ್ಧವಾಗಿವೆ. ಉಳಿದ 5 ಶೇಕಡ ಪ್ರಕರಣಗಳನ್ನಾದರೂ ದಕ್ಷತೆಯಿಂದ ನಿರ್ವಹಿಸಲಾಗಿದೆಯೇ ಎನ್ನುವುದನ್ನು ಪರಿಶೀಲಿಸಬೇಕಾಗಿದೆ.

ಇ.ಡಿ.ಯು ಸರ್ವಾಧಿಕಾರಿ ಆಡಳಿತದ ಒಂದು ವಿಶಿಷ್ಟ ಸಾಧನವಾಗಿದೆ. 2020ರಲ್ಲಿ ಪಿಎಂಎಲ್‌ಎಗೆ ಮಾಡಿದ ತಿದ್ದುಪಡಿಗಳು ಬಂಧನ, ಶೋಧ, ಆಸ್ತಿಪಾಸ್ತಿ ಮುಟ್ಟುಗೋಲಿಗೆ ವ್ಯಾಪಕ ಅಧಿಕಾರಗಳನ್ನು ಒದಗಿಸಿವೆ. ದುರದೃಷ್ಟವಶಾತ್, ಜಸ್ಟಿಸ್ ಎ.ಎಂ. ಖನ್ವಿಲ್ಕರ್ ನೇತೃತ್ವದ ಸುಪ್ರೀಂ ಕೋರ್ಟ್ ಪೀಠವು 2022ರ ಜುಲೈನಲಿ ಈ ತಿದ್ದುಪಡಿಗಳನ್ನು ಎತ್ತಿ ಹಿಡಿದಿದೆ. ಎಫ್‌ಐಆರ್‌ಗೆ ಸಮಾನವಾದ ಎನ್‌ಫೋರ್ಸ್‌ಮೆಂಟ್ ಕೇಸ್ ಇನ್‌ಫರ್ಮೇಶನ್ ರಿಪೋರ್ಟ್ (ಇಸಿಐಆರ್) ಅನ್ನು ಪ್ರತಿಯೊಂದು ಪ್ರಕರಣದಲ್ಲಿ ಸಂಬಂಧಪಟ್ಟ ವ್ಯಕ್ತಿಗೆ ಕಡ್ಡಾಯವಾಗಿ ನೀಡಬೇಕಾಗಿಲ್ಲ ಎನ್ನುವುದು ಈ ತಿದ್ದುಪಡಿಯಾಗಿದೆ. ಅದರಿಂದ ತೃಪ್ತರಾಗದೇ ಕಳೆದ ವಾರವಷ್ಟೇ ಮಾರ್ಚ್ 7ರಂದು ಗಜೆಟ್ ಅಧಿಸೂಚನೆಯೊಂದನ್ನು ಹೊರಡಿಸಲಾಗಿದೆ. ಹಣಕಾಸು ಸಚಿವಾಲಯದಡಿಯ ಕಂದಾಯ ಇಲಾಖೆ ಹೊರಡಿಸಿರುವ ಅಧಿಸೂಚನೆ ಪ್ರಕಾರ ರಾಜಕೀಯವಾಗಿ ಎಕ್ಸ್‌ಪೋಸ್ ಆದ ವ್ಯಕ್ತಿಗಳು (ಪಿಇಪಿ) ಮತ್ತು ಎನ್‌ಜಿಒಗಳನ್ನು ಪಿಎಂಎಲ್‌ಎ ಕಾನೂನಿನ ವ್ಯಾಪ್ತಿಗೆ ತರಬಹುದಾಗಿದೆ. ಹಿರಿಯ ರಾಜಕಾರಣಿಗಳು, ಸರಕಾರಿ, ನ್ಯಾಯಾಂಗ ಅಥವಾ ಮಿಲಿಟರಿ ಅಧಿಕಾರಿಗಳ ವಿಚಾರದಲ್ಲಿ ಹೇಳುವುದಾದರೆ ಅಂಥ ವ್ಯಕ್ತಿಗಳು ಮತ್ತು ಸಂಸ್ಥೆಗಳ ಹಣಕಾಸು ಇತಿಹಾಸವನ್ನು ಇ.ಡಿ. ಪಡೆದುಕೊಳ್ಳಬಹುದಾಗಿದೆ. ಪ್ರತಿಪಕ್ಷ ರಾಜಕಾರಣಿಗಳು ಮತ್ತು ಸರಕಾರೇತರ ಸಂಸ್ಥೆಗಳ ನಾಯಕರನ್ನು ಇನ್ನಷ್ಟು ಟಾರ್ಗೆಟ್ ಮಾಡುವುದಕ್ಕೆ ಬೆದರಿಕೆ ಹಾಕುವಂತಿದೆ ಇದು. ಕೇಂದ್ರೀಯ ಸಂಸ್ಥೆಗಳ ದುರುಪಯೋಗದಿಂದ ಆಗುವ ಅಪಾಯದ ಬಗ್ಗೆ ಜನರಲ್ಲಿ ಅರಿವು ಮೂಡುತ್ತಿದೆಯಾದರೂ ಕೆಲವು ಪಕ್ಷಗಳು ಈ ಸಂಬಂಧ ಕೈಗೊಂಡ ನಿಲುವುಗಳು ಒಗ್ಗಟ್ಟು ಹಾಗೂ ಪ್ರಬಲ ಕಾರ್ಯಾಚರಣೆ ನಡೆಸುವುದರಿಂದ ಗಮನವನ್ನು ಬೇರೆಡೆ ಸೆಳೆಯುತ್ತವೆ. ಆಪ್ ಮುಖಂಡ ಸಿಸೋಡಿಯಾರನ್ನು ಸಿಬಿಐ ಬಂಧಿಸಿದಾಗ ಕಾಂಗ್ರೆಸ್ ಪಕ್ಷ, ವಿಶೇಷವಾಗಿ ಅದರ ದೆಹಲಿ ಘಟಕವು ಅದನ್ನು ಸ್ವಾಗತಿಸಿದ್ದು ಮಾತ್ರವಲ್ಲದೆ ಸಿಎಂ ಅರವಿಂದ್ ಕೇಜ್ರಿವಾಲ್ ವಿರುದ್ಧ ಕ್ರಮಕೈಗೊಳ್ಳುವಂತೆಯೂ ಆಗ್ರಹಿಸಿತು. ಆಪ್ ಸರಕಾರ ಒಂದು ಫೀಡ್ ಬ್ಯಾಕ್ ಘಟಕ (ಎಫ್‌ಬಿಯು) ಸ್ಥಾಪಿಸಿರುವ ಹಿನ್ನೆಲೆಯಲ್ಲಿ ಕಾಂಗ್ರೆಸ್ ನಾಯಕರು ಲೆಫ್ಟಿನೆಂಟ್ ಗವರ್ನರ್‌ಗೆ ಪತ್ರ ಬರೆದು, ಸಿಸೋಡಿಯಾರನ್ನು ಭ್ರಷ್ಟಾಚಾರ ಕಾನೂನು ಅನ್ವಯ ತನಿಖೆಗೆ ಒಳಪಡಿಸಲು ಸಿಬಿಐಗೆ ಅನುಮತಿ ನೀಡಿದರಷ್ಟೇ ಸಾಲದು; ಆಪ್ ನಾಯಕರನ್ನು ದೇಶದ್ರೋಹಕ್ಕಾಗಿ ಪ್ರಾಸಿಕ್ಯೂಟ್ ಮಾಡಬೇಕು ಮತ್ತು ಕರಾಳವಾದ ಕಾನೂನುಬಾಹಿರ ಚಟುವಟಿಕೆ ತಡೆ ಕಾನೂನನ್ನು (ಯುಎಪಿಎ) ಕೂಡ ಅವರ ವಿರುದ್ಧ ಬಳಸಬೇಕು ಎಂದು ಹೇಳಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿರುವ ಆಪ್ ಮುಖಂಡರು, ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಹತ್ತು ವರ್ಷದ ಹಿಂದೆ ಎಫ್‌ಐಆರ್ ದಾಖಲಿಸಿದ್ದರೂ ರಾಹುಲ್ ಗಾಂಧಿಯನ್ನು ಬಂಧಿಸಿಲ್ಲವೇಕೆ ಎಂದು ಪ್ರಶ್ನಿಸಿದೆ. ಪರಸ್ಪರರ ವಿರುದ್ಧ ಕೇಂದ್ರೀಯ ಸಂಸ್ಥೆಗಳನ್ನು ಬಳಸುವಂತೆ ಬಿಜೆಪಿ ಸರಕಾರವನ್ನು ಆಗ್ರಹಿಸಲು ಪ್ರತಿಯೊಂದು ಪಕ್ಷವೂ ಉತ್ಸುಕವಾಗಿದೆ. ಪ್ರತಿಪಕ್ಷದಲ್ಲಿರುವ ಪಕ್ಷಗಳು ಪರಸ್ಪರ ವಿರುದ್ಧವಾದ ರಾಜಕೀಯ ಮತ್ತು ಹಿತಗಳನ್ನು ಹೊಂದಿರುವುದು ಸಹಜವೇ ಆಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪರಸ್ಪರರ ವಿರುದ್ಧ ಸೆಣಸಲು ಅವುಗಳು ಸ್ವತಂತ್ರವಾಗಿವೆ. ಆದರೆ, ಮೋದಿ ಸರಕಾರದ ಸರ್ವಾಧಿಕಾರಿ–ಫ್ಯಾಸಿಸ್ಟ್ ಆಕ್ರಮಣ ನಡೆಯುತ್ತಿರುವಾಗ ಅವುಗಳು ಕನಿಷ್ಠ ಪಕ್ಷ ತಮ್ಮ ಕ್ಷುಲ್ಲಕ ರಾಜಕೀಯವನ್ನು ಬದಿಗಿಟ್ಟು ಪ್ರಜಾಪ್ರಭುತ್ವ ಮತ್ತು ಪ್ರತಿಪಕ್ಷಗಳ ಹಕ್ಕುಗಳ ರಕ್ಷಣೆಗೆ ಮುಂದಾಗಬೇಕೆಂದು ನಿರೀಕ್ಷಿಸಬೇಕಾಗಿದೆ. ಇದಕ್ಕಿಂತ ಬೇರೆಯಾದ ಯಾವುದೇ ನಿಲುವು ಸ್ವಯಂ ಸೋಲಾಗುತ್ತದೆ. ಏನಿದ್ದರೂ ಇಡೀ ಪ್ರತಿಪಕ್ಷವು ಸಾಮಾನ್ಯ ಅಪಾಯವನ್ನು ಎದುರಿಸುತ್ತಿರುವುದರಿಂದ ಸಂಸತ್ತಿನ ಬಜೆಟ್ ಅಧಿವೇಶನದ ಪುನರಾರಂಭದ ವೇಳೆ ಬಹುತೇಕ ಪ್ರತಿಪಕ್ಷಗಳು ಒಟ್ಟಿಗೆ ಬಂದಿವೆ. ಟಾರ್ಗೆಟ್ ಮಾಡುವುದು ಹಾಗೂ ಕಿರುಕುಳ ಕೊಡುವುದಕ್ಕೆ ಅಂತ್ಯ ಹಾಡುವಂತೆ ಮತ್ತು ಅದಾನಿ–ಹಿಂಡನ್‌ಬರ್ಗ್ ಹಗರಣದಲ್ಲಿ ತನಿಖೆ ನಡೆಸುವಂತೆ ಆಗ್ರಹಿಸಿ 18 ಪ್ರತಿಪಕ್ಷಗಳ ಸಂಸದರು ಅನುಷ್ಠಾನ ನಿರ್ದೇಶನಾಲಯ ಕಚೇರಿಗೆ ಮೆರವಣಿಗೆ ಹೋಗಲು ಪ್ರಯತ್ನಿಸಿದ್ದಾರೆ. ಅನೇಕ ವಿಚಾರಗಳಲ್ಲಿ ಭಿನ್ನಾಭಿಪ್ರಾಯಗಳಿರುವ ಕಾಂಗ್ರೆಸ್, ಆಪ್ ಮತ್ತು ಬಿಆರ್‌ಎಸ್‌ನಂಥ ಪಕ್ಷಗಳು ಜಂಟಿ ಪ್ರತಿಭಟನೆಯ ಭಾಗವಾಗಿದ್ದುದು ಒಳ್ಳೆಯ ಲಕ್ಷಣವಾಗಿದೆ. ಪ್ರತಿಪಕ್ಷಗಳ ಈ ಒಗ್ಗಟ್ಟಿನ ಜೊತೆಗೆ, ಪಿಎಂಎಲ್‌ಎದ ಕರಾಳ ನಿಯಮಗಳ ಪರಿಶೀಲನೆಗಾಗಿ ಸುಪ್ರೀಂ ಕೋರ್ಟ್‌ಅನ್ನು ತುರ್ತಾಗಿ ಸಂಪರ್ಕಿಸಬೇಕಾಗಿದೆ. ಈ ಕಾನೂನುಬಾಹಿರ ಹಾಗೂ ಏಕಪಕ್ಷೀಯವಾದ ಈ ನಿಯಮಗಳನ್ನು ಇ.ಡಿ. ದುರುಪಯೋಗ ಪಡಿಸಿಕೊಳ್ಳುವುದನ್ನು ತಡೆಯಲು ಇದು ಅಗತ್ಯವಾಗಿದೆ.

ಅನು: ವಿಶ್ವ

ಅಮೆರಿಕನ್ ಬ್ಯಾಂಕ್ ಗಳ ಕುಸಿತ ಮಹಾ ಆರ್ಥಿಕ ಕುಸಿತದ ಮುನ್ಸೂಚನೆಯೇ?

ಕಳೆದ ಕೆಲವು ದಿನಗಳಲ್ಲಿ ಮೂರು ಅಮೆರಿಕದ ಬ್ಯಾಂಕ್ ಗಳು ದಿವಾಳಿಯಾಗಿವೆ. ಇನ್ನೊಂದು ಅಮೆರಿಕನ್ ಮತ್ತು ಸ್ವಿಸ್ ಬ್ಯಾಂಕ್ ದಿವಾಳಿಯ ಅಂಚಿನಲ್ಲಿದೆ. ಹಲವು ಅಮೆರಿಕನ್, ಯುರೋಪಿಯನ್ ಬ್ಯಾಂಕ್ ಗಳ ಸರಣಿ ವೈಫಲ್ಯಕ್ಕೆ ಕಾರಣವೇನು? 2008ರ ಲೆಹಮನ್ ಬ್ರದರ್ಸ್ ದಿವಾಳಿ 2008ರ ಮಹಾ ಆರ್ಥಿಕ ಕುಸಿತದ ಮುನ್ಸೂಚನೆಯಾಗಿದ್ದಂತೆ, ಇದೂ ಬರಲಿರುವ ಮಹಾ ಆರ್ಥಿಕ ಕುಸಿತದ ಮುನ್ಸೂಚನೆಯೇ?

ಸಿ.ಸಿದ್ದಯ್ಯ–ವಸಂತರಾಜ ಎನ್.ಕೆ.

ಕಳೆದ ಕೆಲವು ದಿನಗಳಲ್ಲಿ ಮೂರು ಅಮೆರಿಕದ ಬ್ಯಾಂಕ್ ಗಳು ದಿವಾಳಿಯಾಗಿವೆ. ಅವುಗಳಲ್ಲಿ ಎರಡು ಅಮೆರಿಕಾದ ಇತಿಹಾಸದಲ್ಲಿ ಅತಿದೊಡ್ಡ ಬ್ಯಾಂಕ್ ವೈಫಲ್ಯಗಳ ಪಟ್ಟಿಯಲ್ಲಿ ಎರಡನೇ ಮತ್ತು ಮೂರನೇ ಸ್ಥಾನದಲ್ಲಿವೆ. ಅಷ್ಟು ದೊಡ್ಡ ಬ್ಯಾಂಕುಗಳವು. ಎರಡನೆಯ ಅತಿ ದೊಡ್ಡ ದಿವಾಳಿಯಾದ ಬ್ಯಾಂಕು, ಸಿಲಿಕಾನ್ ವ್ಯಾಲಿ ಬ್ಯಾಂಕಿನ ಆಸ್ತಿ $209 ಶತಕೋಟಿ ಮೌಲ್ಯದ್ದಾಗಿದೆ. ಇದು ಭಾರತದ ರೂಪಾಯಿ ಮೌಲ್ಯದಲ್ಲಿ 17.12 ಲಕ್ಷ ಕೋಟಿ. ಇನ್ನೊಂದು ಅಮೆರಿಕನ್ ಬ್ಯಾಂಕ್ ಫಸ್ಟ್ ರಿಪಬ್ಲಿಕನ್ ಬ್ಯಾಂಕ್ ಸಹ ಅದೇ ರೀತಿಯಲ್ಲಿ ದಿವಾಳಿಗೆ ಹತ್ತಿರ ಬಂದಿದ್ದು, ಅಮೆರಿಕದ 11 ಅತಿ ದೊಡ್ಡ ಬ್ಯಾಂಕುಗಳು 30 ಬಿಲಿಯನ್ (ಶತಕೋಟಿ) ಡಾಲರಿನಷ್ಟು ಠೇವಣಿ ಇಡುವ ಮೂಲಕ ದಿವಾಳಿ ಆಗುವುದನ್ನು ತಪ್ಪಿಸಿವೆ.

ಬ್ಯಾಂಕ್ ಗಳ ಸರಣಿ ವೈಫಲ್ಯ

ಅಮೆರಿಕದ ಮೂರು ಬ್ಯಾಂಕುಗಳು ಮಾತ್ರವಲ್ಲ, ಜಾಗತಿಕವಾಗಿ ಎರಡನೆಯ ಅತಿದೊಡ್ಡ ಹೂಡಿಕೆ ಬ್ಯಾಂಕ್, ಸ್ವಿಟ್ಸರ್ ಲ್ಯಾಂಡಿನ ಪ್ರಸಿದ್ಧ ಬ್ಯಾಂಕ್ ಕ್ರೆಡಿಟ್ ಸೂಸಿ ದಿವಾಳಿಯ ಹತ್ತಿರ ಬಂದಿತ್ತು. ಸ್ವಿಸ್ ಕೇಂದ್ರೀಯ ಬ್ಯಾಂಕ್ 54 ಬಿಲಿಯನ್ (ಶತಕೋಟಿ) ಡಾಲರಿನಷ್ಟು ಸಾಲ ಕೊಡುವ ಮೂಲಕ ಅದರ ದಿವಾಳಿ ತಪ್ಪಿಸಿದೆ. ಆದರೆ ಇದು ತಾತ್ಕಾಲಿಕ. ಈ ಎರಡು ಬ್ಯಾಂಕುಗಳ ಶೇರುಗಳ ಮಾರಾಟದ ತೇಜಿ ಇನ್ನೂ ಕಡಿಮೆಯಾಗದೆ, ಅದರ ಬೆಲೆ ಇನ್ನೂ ಕುಸಿಯುತ್ತಿದೆ. ಮಾತ್ರವಲ್ಲ, ಎಲ್ಲ ಬ್ಯಾಂಕುಗಳ ಶೇರುಬೆಲೆ ಮತ್ತು ಒಟ್ಟಾರೆ ಶೇರು ಮಾರುಕಟ್ಟೆ ಕುಸಿಯಲು ಕಾರಣವಾಗಿವೆ. ಈ ಎರಡು ಬ್ಯಾಂಕುಗಳು ತಮ್ಮ ಠೇವಣಿದಾರರು, ಇತರ ದೊಡ್ಡ ಗ್ರಾಹಕರು ಮತ್ತು ಶೇರುದಾರರ ವಿಶ್ವಾಸ ಉಳಿಸಲು ನಡೆಸುತ್ತಿರುವ ಸರ್ಕಸ್ ಇದುವರೆಗೆ ಫಲ ಕೊಟ್ಟಿಲ್ಲ. ಅಂತಿಮವಾಗಿ ಈ ಎರಡೂ ಬ್ಯಾಂಕುಗಳು ದಿವಾಳಿಯಾಗುವ ಅಪಾಯ ಇನ್ನೂ ಇದೆ,

ಮಾತ್ರವಲ್ಲ, ಮೂರು ಬ್ಯಾಂಕುಗಳ ದಿವಾಳಿ ನಂತರ ಅಮೆರಿಕನ್ ಸರಕಾರ ಮತ್ತು ದೊಡ್ಡ ಬ್ಯಾಂಕುಗಳ ತರಾತುರಿಯ ಕಾರ್ಯಾಚರಣೆ ನೋಡಿದರೆ, ಇನ್ನೂ ಹಲವು ಬ್ಯಾಂಕುಗಳು ಈ ಹಾದಿಯಲ್ಲಿವೆ ಅಂತ ಕಾಣುತ್ತದೆ. ಬ್ಯಾಂಕಿಂಗ್ ವ್ಯವಸ್ಥೆಯಲ್ಲೇ ವಿಶ್ವಾಸ ಹೋಗಿ ಎಲ್ಲ ಬ್ಯಾಂಕುಗಳ ಗ್ರಾಹಕರು ಆತಂಕದಿಂದ ತಮ್ಮ ಠೇವಣಿ ಹಿಂದೆಗೆಯಲು ಆರಂಭಿಸಬಹುದು ಎಂಬ ಅಪಾಯ ತರಾತುರಿಯ ಕಾರ್ಯಾಚರಣೆಗೆ ಕಾರಣವಾಗಿದೆ. ಹಾಗಾಗಿಯೇ ಅಧ್ಯಕ್ಷ ಬಿಡೆನ್ ರಾಷ್ಟ್ರವನ್ನುದ್ದೇಶಿಸಿ ಮಾತನಾಡಿ ಆತಂಕ್ಕೆ ಕಾರಣವಿಲ್ಲವೆಂದರು. ಫೆಡೆರಲ್ ರಿಸರ್ವ್ ಅಧಿಕಾರಿಗಳು, ದೊಡ್ಡ ಬ್ಯಾಂಕುಗಳ ಮುಖ್ಯಸ್ಥರು ಸಹ "ಆತಂಕಕ್ಕೆ ಕಾರಣವಿಲ್ಲ, ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಏನೂ ಸಮಸ್ಯೆಗಳಿಲ್ಲ" ವೆಂದು ಪದೇ ಪದೇ ಹೇಳುತ್ತಿರುವುದೇ, ಏನೋ ಸಮಸ್ಯೆಯಿದೆ ಎಂಬ ಅನುಮಾನಕ್ಕೆಡೆ ಕೊಡುವಂತಿದೆ. ಜಾಗತಿಕ ಬ್ಯಾಂಕಿಂಗ್ ವ್ಯವಸ್ಥೆ ಹಲವು ಬ್ಯಾಂಕುಗಳು ನಿಕಟವಾಗಿ ಪರಸ್ಪರ ಹೆಣೆದುಕೊಂಡಿರುವ ಅವಲಂಬಿಸಿರುವ ಜಾಲವಾದ್ದರಿಂದ ಒಂದು ಕಡೆ ಸಮಸ್ಯೆ, ಬಿಕ್ಕಟ್ಟು ಇಡಿ ಜಾಲದಲ್ಲಿ ಹರಡುವ ಸಾಧ್ಯತೆ ಹೆಚ್ಚು. ಇದನ್ನು 2008ರಲ್ಲಿ ನಾವು ನೋಡಿದ್ದೇವೆ.

ಸಿಲಿಕನ್ ವ್ಯಾಲಿ ಬ್ಯಾಂಕ್ ಹೇಗೆ ದಿವಾಳಿಯಾಯಿತು?

ಎರಡು ಅಮೆರಿಕನ್ ಬ್ಯಾಂಕುಗಳ ಕುಸಿತಕ್ಕೆ ಅಲ್ಲಿನ ಸರಕಾರ ಬಡ್ಡಿದರಗಳನ್ನು ಹೆಚ್ಚಿಸಿದ್ದು ಮುಖ್ಯ ಕಾರಣವೆಂಬುದು ಸ್ಪಷ್ಟ. ಈ ಸಿಲಿಕಾನ್ ವ್ಯಾಲಿ ಬ್ಯಾಂಕ್ ಎನ್ನುವುದು, ನವೋದ್ಯಮ (ಸ್ಟಾರ್ಟ್ ಅಪ್), ಬಿಗ್ ಟೆಕ್ ಮತ್ತು ಸಾಹಸೋದ್ಯಮ ಬಂಡವಾಳ ಹೂಡಿಕೆ (ವೆಂಚರ್ ಕ್ಯಾಪಿಟಲ್) ಕಂಪನಿಗಳ ನಿಧಿ (ಉದಾ: ತಂತ್ರಜ್ಞಾನ ಕಂಪನಿಗಳು), ಅವುಗಳ ಉದ್ಯೋಗಿಗಳ ಉಳಿತಾಯದ ದೊಡ್ಡ ಪ್ರಮಾಣದ ಹಣವನ್ನು ವ್ಯವಹರಿಸುತ್ತದೆ. ಹೂಡಿಕೆದಾರರ ನಿಧಿಗಳ ಸುರಕ್ಷಿತತೆಯ ದೃಷ್ಟಿಯಿಂದ ದೀರ್ಘಾವಧಿಯ ಹೂಡಿಕೆ (ಸರ್ಕಾರಿ ಬಾಂಡುಗಳು) ಪತ್ರಗಳಲ್ಲಿ ಈ ಬ್ಯಾಂಕ್ ಹೂಡಿಕೆ ಮಾಡಿದೆ. ಸರ್ಕಾರಿ ಬಾಂಡುಗಳಲ್ಲಿ ಹೂಡಿಕೆ ಮಾಡಲಾಗಿದೆ ವಿನಃ ಹೆಚ್ಚಿನ ರಿಸ್ಕ್ ಇರುವ ಷೇರು ಮಾರುಕಟ್ಟೆಯಲ್ಲಿ ಅಥವಾ ಇತರ ರಿಸ್ಕ್ ಇರುವ ವಿಧಾನಗಳಲ್ಲಿ ಅಲ್ಲ. ಷೇರು ಮಾರುಕಟ್ಟೆ ಅಥವಾ ಇತರ ಹೆಚ್ಚಿನ ರಿಸ್ಕ್ ಇರುವ ಹೊಸ ಹೂಡಿಕೆ ವಿಧಾನಗಳು ಮಾತ್ರ ಅಪಾಯಕಾರಿ ಎಂದೇನಿಲ್ಲ. ಎಂಬುದನ್ನು ಗಮನಿಸಬೇಕು.



> **ಇಂತಹ ದೊಡ್ಡ ಬ್ಯಾಂಕುಗಳ ವೈಫಲ್ಯವು ಅಮೆರಿಕದ ಹಣಕಾಸು ವಲಯದಲ್ಲಿ ಬಿಕ್ಕಟ್ಟುಗಳಿವೆ ಎಂಬುದನ್ನು ಸೂಚಿಸುತ್ತದೆ. 2008 ರ ಬಿಕ್ಕಟ್ಟಿನ ನಂತರ, 2008–12 ರ ಅವಧಿಯಲ್ಲಿ 465 ಬ್ಯಾಂಕುಗಳು ದಿವಾಳಿಯಾದವು. ಬ್ಯಾಂಕುಗಳು ದಿವಾಳಿಯಾಗಲು ಹಣಕಾಸು ಶಿಸ್ತಿನ, ಮೇಲುಸ್ತುವಾರಿಯ ನಿರ್ಬಂಧಗಳ ಅಭಾವ, ಅಪಾಯಕಾರಿ ಹೂಡಿಕೆಗಳು ಇತ್ಯಾದಿ ಹಲವು ಕಾರಣಗಳು ಇವೆ. ಆದರೆ 90ರ ದಶಕದಿಂದೀಚೆಗೆ ಬ್ಯಾಂಕುಗಳು ಹೆಚ್ಚೆಚ್ಚಾಗಿ ಈ ಹಲವು ತಪ್ಪುಗಳನ್ನು ಮಾಡುತ್ತಿವೆ. ನವ–ಉದಾರವಾದಿ ವ್ಯವಸ್ಥೆಯಲ್ಲಿ ಬ್ಯಾಂಕುಗಳೂ, ಹಣಕಾಸು ಸಂಸ್ಥೆಗಳೂ ಹೆಚ್ಚಿನ ಲಾಭ ಮಾಡುವ ಮತ್ತು ಅದನ್ನು ಮಾಡದಿದ್ದರೆ ಪೈಪೋಟಿಯಲ್ಲಿ ಸೋಲುವ ಅಪಾಯಗಳು ತೀವ್ರವಾಗಿವೆಂಬುದು ಇದಕ್ಕೆ ಕಾರಣ.**

ಹಣದುಬ್ಬರವನ್ನು ನಿಯಂತ್ರಿಸುವ ಸಲುವಾಗಿ, ಫೆಡರಲ್ ರಿಸರ್ವ್, ಅಮೆರಿಕದ ರಿಸರ್ವ್ ಬ್ಯಾಂಕ್, ಮಾರ್ಚ್ 17, 2022 ರಿಂದ ಫೆಬ್ರವರಿ 1, 2023 ರವರೆಗೆ ಬಡ್ಡಿದರವನ್ನು 0.25 ಶೇಕಡಾದಿಂದ 4.75 ಶೇಕಡಾಕ್ಕೆ ಎಂಟು ಬಾರಿ ಹೆಚ್ಚಿಸಿದೆ. ಸಿಲಿಕಾನ್ ವ್ಯಾಲಿ ಬ್ಯಾಂಕಿನ ಹೂಡಿಕೆಗಳು ದೀರ್ಘಾವಧಿಯ ಸರ್ಕಾರಿ ಬಾಂಡ್ ಗಳಲ್ಲಿರುವುದರಿಂದ ಅವು ಕಡಿಮೆ ಬಡ್ಡಿದರಗಳನ್ನು ಗಳಿಸುತ್ತವೆ. ಮಾರುಕಟ್ಟೆಯಲ್ಲಿ ಬಾಂಡ್ ಗಳನ್ನು ಮಾರಾಟ ಮಾಡಬಹುದಾದರೂ, ಅವು ಕಡಿಮೆ ಬಡ್ಡಿ ದರದ ಬಾಂಡ್ ಗಳಾಗಿರುವುದರಿಂದ ಅವುಗಳ ಬೆಲೆಗಳು ಕುಸಿದಿವೆ. ಫೆಡರಲ್ ರಿಸರ್ವ್ ಬಡ್ಡಿದರಗಳನ್ನು ಹೆಚ್ಚಿಸಿದ ದಿನಾಂಕದಿಂದ ಗ್ರಾಹಕರಿಗೆ ಹೆಚ್ಚುವರಿ ಬಡ್ಡಿಯನ್ನು ಪಾವತಿಸಬೇಕು. ಆದರೆ ಇಟ್ಟುಕೊಂಡಿರುವ ಸರ್ಕಾರಿ ಬಾಂಡ್ ಗಳನ್ನು ಉಳಿಸಿಕೊಂಡರೂ, ಮಾರಾಟ ಮಾಡಿದರೂ ನಷ್ಟವಾಗುತ್ತದೆ ಎಂಬ ಬಿಕ್ಕಟ್ಟಿಗೆ ಆ ಬ್ಯಾಂಕ್ ತಳ್ಳಲ್ಪಟ್ಟಿತು.

ಬ್ಯಾಂಕ್ ತನ್ನ ನಷ್ಟವನ್ನು ನಿಭಾಯಿಸಲು 21 ಶತಕೋಟಿ ಡಾಲರ್ ಮೌಲ್ಯದ ಸರ್ಕಾರಿ ಬಾಂಡ್ ಗಳನ್ನು ಮಾರಾಟ ಮಾಡಲು ನಿರ್ಧರಿಸಿತು ಮತ್ತು ತುರ್ತಾಗಿ $2.25 ಶತಕೋಟಿ ಮೌಲ್ಯದ ಬಾಂಡ್ ಗಳನ್ನು ಮಾರಾಟ ಮಾಡುವುದಾಗಿ ಮಾರ್ಚ್ 8 ರಂದು ಘೋಷಿಸಿತು, ಇದರಿಂದಾಗಿ ಗ್ರಾಹಕರು ತಮ್ಮ ಹಣವನ್ನು ಆತುರಾತುರವಾಗಿ ಹಿಂಪಡೆಯಲು ಮುಂದಾದರು. ಗ್ರಾಹಕರು ಒಂದೇ ದಿನದಲ್ಲಿ 42 ಬಿಲಿಯನ್ ಡಾಲರ್ (ಸುಮಾರು 3.44 ಲಕ್ಷ ಕೋಟಿ ರೂ.) ಹಿಂತೆಗೆದುಕೊಂಡ ನಂತರ ಬ್ಯಾಂಕ್ ತೀವ್ರ ಬಿಕ್ಕಟ್ಟನ್ನು ಎದುರಿಸಿತು. ಮಾರ್ಚ್ 10 ರಂದು, ಕ್ಯಾಲಿಫೋರ್ನಿಯಾ ಡಿಪಾರ್ಟ್ಮೆಂಟ್ ಆಫ್ ಫೈನಾನ್ಶಿಯಲ್ ಪ್ರೊಟೆಕ್ಷನ್ ಈ ಬ್ಯಾಂಕಿನ ಆಡಳಿತವನ್ನು ವಹಿಸಿಕೊಂಡಿತು ಮತ್ತು ಅದನ್ನು ಫೆಡರಲ್ ಡೆಪಾಸಿಟ್ ಇನ್ಶ್ಯೂರೆನ್ಸ್ ಕಾರ್ಪೊರೇಶನ್ (FDIC) ಗೆ ಹಸ್ತಾಂತರಿಸಿತು.

ಬ್ಯಾಂಕುಗಳ ಸರಣಿ ದಿವಾಳಿಗೆ ಕಾರಣವೇನು?

ಇದಕ್ಕೂ ಎರಡು ದಿನಗಳ ಹಿಂದೆ, ಮಾರ್ಚ್ 8 ರಂದು ಸಿಲ್ವರ್ ಗೇಟ್ ಬ್ಯಾಂಕ್ ನಿರಂತರವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗದ ಸ್ಥಿತಿಯಲ್ಲಿದೆ ಎಂದು ಘೋಷಿಸಿತು. ನಂತರ ಬ್ಯಾಂಕ್ ಗ್ರಾಹಕರು ತಮ್ಮ ಠೇವಣಿಗಳನ್ನು ಹಿಂಪಡೆಯಲು ಮುಗಿಬಿದ್ದರು. ಕೆಟ್ಟ ಸಾಲಗಳ ನಷ್ಟದಿಂದಾಗಿ ಈ ಬಿಕ್ಕಟ್ಟು ಉಂಟಾಗಿದೆ ಎಂಬ ಕಾರಣವನ್ನು ಸಿಲ್ವರ್ ಗೇಟ್ ಬ್ಯಾಂಕಿನ ಆಡಳಿತವು ಕೊಟ್ಟಿದೆ. ಬಡ್ಡಿದರಗಳ ದಿಢೀರ್ ಏರಿಕೆಯು ಸಾಲದ ನಷ್ಟದಲ್ಲಿ ಪಾತ್ರ ವಹಿಸುತ್ತದೆ ಎಂದು ಹೇಳುವ ಅಗತ್ಯವಿಲ್ಲ. ಈ ಬ್ಯಾಂಕ್ ಸಹ, ಕ್ರಿಪ್ಟೋ ಕರೆನ್ಸಿಗಳ ಹೂಡಿಕೆ ಮತ್ತು ವಹಿವಾಟಿನ ಮೇಲೆ ತನ್ನ ಗಮನ ಕೇಂದ್ರೀಕರಿಸಿ ಕ್ರಿಪ್ಟೋ ಕರೆನ್ಸಿಗಳನ್ನು ಸರಿಯಾದ ಸಮಯದಲ್ಲಿ ಡಾಲರ್ ಮತ್ತು ಯೂರೋಗಳಂತಹ ಸರ್ಕಾರಿ ಕರೆನ್ಸಿಗಳಿಗೆ ಪರಿವರ್ತಿಸುವ ಮತ್ತು ವಿನಿಮಯ ಮಾಡುವ ಕೆಲಸ ನಿರ್ವಹಿಸುತ್ತಿದೆ. ಬ್ಯಾಂಕಿನ ದಿವಾಳಿ ನಂತರ, ನ್ಯೂಯಾರ್ಕ್ ಸ್ಟೇಟ್ ಡಿಪಾರ್ಟ್ಮೆಂಟ್ ಆಫ್ ಫೈನಾನ್ಶಿಯಲ್ ಪ್ರೊಟೆಕ್ಷನ್ ಮಾರ್ಚ್ 12 ರಂದು ಕ್ರಿಪ್ಟೋ ಮಾರುಕಟ್ಟೆ–ಕೇಂದ್ರಿತ ಸಿಗ್ನೇಚರ್ ಬ್ಯಾಂಕ್ ಅನ್ನು ಮುಚ್ಚಿತು. ಈ ಸಿಗ್ನೇಚರ್ ಬ್ಯಾಂಕ್ 10 ಲಕ್ಷ ಕೋಟಿ ರೂ. ಗಿಂತ ಸ್ವಲ್ಪ ಕಡಿಮೆ ಆಸ್ತಿ ಹೊಂದಿದೆ. ಇದು US ಇತಿಹಾಸದಲ್ಲಿ ಮೂರನೇ ಅತಿ ದೊಡ್ಡ ಬ್ಯಾಂಕ್ ವೈಫಲ್ಯ. ಈ ಎರಡು ಬ್ಯಾಂಕುಗಳ ವೈಫಲ್ಯಕ್ಕೆ ಇತರ ಕೆಲವು ಕಾರಣಗಳಿದ್ದರೂ, ಬಡ್ಡಿದರ ಏರಿಕೆಯ ಪರಿಣಾಮಗಳು ಪ್ರಧಾನ ಕಾರಣಗಳು.



ಇಂತಹ ದೊಡ್ಡ ಬ್ಯಾಂಕುಗಳ ವೈಫಲ್ಯವು ಅಮೆರಿಕದ ಹಣಕಾಸು ವಲಯದಲ್ಲಿ ಬಿಕ್ಕಟ್ಟುಗಳಿವೆ ಎಂಬುದನ್ನು ಸೂಚಿಸುತ್ತದೆ. 2008 ರ ಬಿಕ್ಕಟ್ಟಿನ ನಂತರ, 2008–12 ರ ಅವಧಿಯಲ್ಲಿ 465 ಬ್ಯಾಂಕುಗಳು ದಿವಾಳಿಯಾದವು. ಬ್ಯಾಂಕುಗಳು ದಿವಾಳಿಯಾಗಲು ಹಣಕಾಸು ಶಿಸ್ತಿನ, ಮೇಲುಸ್ತುವಾರಿಯ ನಿರ್ಬಂಧಗಳ ಅಭಾವ, ಅಪಾಯಕಾರಿ ಹೂಡಿಕೆಗಳು ಇತ್ಯಾದಿ ಹಲವು ಕಾರಣಗಳು ಇವೆ. ಆದರೆ 90ರ ದಶಕದಿಂದೀಚೆಗೆ ಬ್ಯಾಂಕುಗಳು ಹೆಚ್ಚೆಚ್ಚಾಗಿ ಈ ಹಲವು ತಪ್ಪುಗಳನ್ನು ಮಾಡುತ್ತಿವೆ. ನವ–ಉದಾರವಾದಿ ವ್ಯವಸ್ಥೆಯಲ್ಲಿ ಬ್ಯಾಂಕುಗಳೂ, ಹಣಕಾಸು ಸಂಸ್ಥೆಗಳೂ ಹೆಚ್ಚಿನ ಲಾಭ ಮಾಡುವ ಮತ್ತು ಅದನ್ನು ಮಾಡದಿದ್ದರೆ ಪೈಪೋಟಿಯಲ್ಲಿ ಸೋಲುವ ಅಪಾಯಗಳು ತೀವ್ರವಾಗಿವೆಂಬುದು ಇದಕ್ಕೆ ಕಾರಣ.

ಹಣಕಾಸು ಶಿಸ್ತು ಉಲ್ಲಂಘಿಸುವ, ಅಪಾಯಕಾರಿ ಹೂಡಿಕೆಗಳಲ್ಲಿ ಹಣ ತೊಡಗಿಸಿದರೆ ಹೆಚ್ಚಿನ ಲಾಭ ಬರುವ ಸಾಧ್ಯತೆಯಿರುತ್ತದೆ. ಇವು ಹೆಚ್ಚಾಗಿ ಲಾಭ ತಂದು, ಇದನ್ನೇ ಎಲ್ಲ ಬ್ಯಾಂಕುಗಳು ಮಾಡಲು (ಕುಸಿತದ ಅಪಾಯವಿದ್ದರೂ) ಒತ್ತಡ ಬರುತ್ತದೆ. ಅಮೆರಿಕನ್ ಸರಕಾರ ಸಹ ಬ್ಯಾಂಕುಗಳು, ಹಣಕಾಸು ಸಂಸ್ಥೆಗಳ ಮೇಲಿದ್ದ ಹಲವು ನಿರ್ಬಂಧಗಳನ್ನು ತೆಗೆದು ಹಾಕಿ ಇದಕ್ಕೆ ಇನ್ನಷ್ಟು ಕುಮ್ಮಕ್ಕು ಕೊಟ್ಟಿವೆ. ಉದಾಹರಣೆಗೆ ಹಿಂದೆ ಬ್ಯಾಂಕುಗಳು ತಮ್ಮ ಠೇವಣಿದಾರರ ದುಡ್ಡು ವಾಪಾಸು ಕೊಡುವಷ್ಟು ಕನಿಷ್ಠ ಮೀಸಲು ನಿಧಿಯನ್ನು ನಗದು ರೂಪದಲ್ಲಿ (ಒಟ್ಟು ವಹಿವಾಟಿನ ಶೇ.20–25 ಇತ್ಯಾದಿ) ಇಟ್ಟುಕೊಂಡಿರಬೇಕೆಂಬ ನಿಯಮವಿತ್ತು. ಕೊವಿದ್ ಕಾಲದಲ್ಲಿ ಅದರ ನೆಪ ಹೇಳಿ ಈ ನಿರ್ಬಂಧವನ್ನು ತೆಗೆಯಲಾಯಿತು. ಸಿಲಿಕಾನ್ ವ್ಯಾಲಿ ಬ್ಯಾಂಕ್ ಕೇವಲ ಶೇಕಡಾ 5 ನಗದು ಹೊಂದಿತ್ತು. ಬ್ಯಾಂಕ್ ಅಫ್ ಅಮೆರಿಕ, ಜೆಪಿ ಮೋರ್ಗನ್ ನಂತಹ ದೊಡ್ಡ ಸಂಸ್ಥೆಗಳೂ ಕೇವಲ ಶೇ.2 ನಗದು ಹೊಂದಿವೆಯಂತೆ.

ಬ್ಯಾಂಕ್ ರಕ್ಷಣಾ ಕ್ರಮಗಳ ಟೀಕೆ

ಸಿಲಿಕಾನ್ ವ್ಯಾಲಿ ಬ್ಯಾಂಕ್ ದಿವಾಳಿಗೆ ಬಿಡೆನ್ ಸರಕಾರದ ಪ್ರತಿಕ್ರಿಯೆ ತೀವ್ರ ಟೀಕೆಗೆ ಒಳಗಾಗಿದೆ. ಅಮೆರಿಕನ್ ಕಾನೂನು ಪ್ರಕಾರ 2.5 ಲಕ್ಷ ಡಾಲರುಗಳಿಗಿಂತ ಕಡಿಮೆ ಇರುವ ಠೇವಣಿಗಳಿಗೆ ಮಾತ್ರ ಸರಕಾರ ಗ್ಯಾರಂಟಿ ಕೊಡುತ್ತದೆ. ಸಿಲಿಕಾನ್ ವ್ಯಾಲಿ ಬ್ಯಾಂಕ್ ನಲ್ಲಿ ಬಹುಪಾಲು ಠೇವಣಿಗಳು 2.5 ಲಕ್ಷ ಡಾಲರುಗಳಿಗಿಂತ ಹೆಚ್ಚಿದ್ದವು. ಆದರೂ ಸರಕಾರ ಕಾನೂನನ್ನೂ ಮೀರಿ ಎಲ್ಲ ಠೇವಣಿಗಳಿಗೂ ಪೂರ್ಣ ಗ್ಯಾರಂಟಿ ಘೋಷಿಸಿತು. ಇದಕ್ಕೆ ಬೇಕಾದ 151.6 ಬಿಲಿಯನ್ ಡಾಲರ್ ಮೊತ್ತವನ್ನು ರಾತ್ರೋರಾತ್ರಿ ಮಂಜೂರು ಮಾಡಿತು. ಇಲ್ಲಿನ ಸೂಪರ್ ಲಾಭ ಮಾಡುವ– ಸ್ಟಾರ್ಟ್ ಅಪ್, ಬಿಗ್ ಟೆಕ್ ಮತ್ತು ವೆಂಚರ್ ಕ್ಯಾಪಿಟಲ್ ಕಂಪನಿ ಒಡೆಯರು, ಉನ್ನತ ಉದ್ಯೋಗಿಗಳಾಗಿರುವ–ಠೇವಣಿದಾರರನ್ನು ರಕ್ಷಿಸುವುದು, ಅದಕ್ಕೆ ಇಷ್ಟು ದೊಡ್ಡ ಮೊತ್ತದ ಹಣ ಮಂಜೂರು ಮಾಡುವುದು

ಪುಟ 10 ಕ್ಕೆ



ಮೋದಿಯವರ ಬೇಟಿ ಮತ್ತು ಅದಕ್ಕೆ ಹೊಂದಿಕೊಂಡ ಹಲವು ಬೆಳವಣಿಗೆಗೆಗಳು ನಿಜಕ್ಕೂ ಬಿಜೆಪಿಗೆ ಲಾಭ ತರುವುದೇ? ಸಂಸದೆ ಸುಮಲತಾ ಬಿಜೆಪಿಗೆ ಬಹಿರಂಗವಾಗಿ ಬೆಂಬಲಿಸಿರುವುದು ಮಂಡ್ಯದ ರಾಜಕಾರಣದಲ್ಲಿ ಏನು ಬದಲಾವಣೆ ತರಬಲ್ಲದು? ಇವುಗಳ ವಿಶ್ಲೇಷಣೆ ಇಲ್ಲಿ.

ಮೋದಿ ಮಂಡ್ಯ ಭೇಟಿ: ಬಂದಾ ಪುಟ್ಟ!... ಹೋದಾ ಪುಟ್ಟ!...

ಟಿ.ಎಲ್. ಕೃಷ್ಣೇಗೌಡ

ಮಾರ್ಚ್ 12 ನೇ ತಾರೀಖು ಮಂಡ್ಯ ಜಿಲ್ಲೆಗೆ ಪ್ರಧಾನ ಮಂತ್ರಿಗಳು, ಬಿಜೆಪಿ ನಾಯಕರೂ ಆದ ನರೇಂದ್ರ ದಾಮೋದರ್‌ದಾಸ್ ಮೋದಿ ಬೇಟಿ ಕೊಟ್ಟಿದ್ದರು. ಮೋದಿಯವರನ್ನು ಸ್ವಾಗತಿಸಲು ಮಂಡ್ಯದ ಹೆಬ್ಬಾಗಿಲಲ್ಲಿ ಸಂಘ ಪರಿವಾರ ಸಂಚು ಮಾಡಿ ಹಾಕಿಸಿದ್ದ ಉರೀಗೌಡ–ದೊಡ್ಡ ನಂಜೇಗೌಡ ಮಹಾದ್ವಾರವನ್ನು ತೆರವುಗೊಳಿಸಲು ಮಂಡ್ಯದ ಜನರು ಯಶಸ್ವಿಯಾಗಿದ್ದರು. ಅದರಲ್ಲಿ ಸಿಪಿಐ(ಎಂ) ಪಕ್ಷದ ಜಿಲ್ಲಾ ಸಮಿತಿ ವಹಿಸಿದ ಪಾತ್ರ ಎಲ್ಲರ ಮೆಚ್ಚುಗೆಗೂ ಪಾತ್ರವಾಯಿತು, ಸಂಘಿಗಳ ಕೆಂಗಣ್ಣಿಗೂ ಗುರಿಯಾಯಿತು.

ಮಧ್ಯಾಹ್ನ ಎದ್ದು ನಿಂತವರು ಮಧ್ಯರಾತ್ರಿ ಸತ್ತು ಬಿದ್ದರು!!

ಮಂಡ್ಯ ಜಿಲ್ಲೆಯನ್ನು ಬಲಿ ಪಡೆಯದೆ ಹಳೇ ಮೈಸೂರು ಪ್ರಾಂತ್ಯವನ್ನು ಹಿಡಿಯಬೇಕೆನ್ನುವ ಬಿಜೆಪಿಯ ರಾಜಕೀಯ ದಾಹ ಇಂಗುವುದಿಲ್ಲ. ಹಾಗಾಗಿ ಬಿಜೆಪಿ ಎಂಬ ಬ್ರಾಹ್ಮಣ್ಯ ಮತ್ತು ಬಂಡವಾಳದ ವಿಷ ಮಿಶ್ರಣ ಪಕ್ಷ ಏನೆಲ್ಲಾ ಕುತಂತ್ರಗಳನ್ನು, ಪ್ರಯತ್ನಗಳನ್ನು ನಡೆಸುತ್ತಿದೆ ಎಂಬುದನ್ನು ನೋಡುತ್ತಿದ್ದೇವೆ. ಹಲವು ವರ್ಷಗಳ ವಿಫಲ ಪ್ರಯತ್ನಗಳ ನಂತರದ ಮತ್ತೊಂದು ಅಸ್ತ್ರ ಉರೀಗೌಡ ಮತ್ತು ದೊಡ್ಡ ನಂಜೇಗೌಡ ಎಂಬ ಎರಡು ಪಾತ್ರಗಳ ಸೃಷ್ಟಿ ಮತ್ತು ಅದಕ್ಕೆ ನೀಡುತ್ತಿರುವ ವಿಷಕಾರಿ ಪ್ರಚಾರ. ಉರೀಗೌಡ ಮತ್ತು ದೊಡ್ಡ ನಂಜೇಗೌಡ ಎಂಬ ಸಂಘ ಪರಿವಾರದ ಭೌದ್ಧಿಕ ಅಗ್ರಹಾರದ ಸೃಷ್ಟಿಯಲ್ಲಿ ಎರಡು ಉದ್ದೇಶಗಳನ್ನು ಹೊಂದಲಾಗಿದೆ. ಮೊದಲನೆಯದು, ಸಂಘ ಪರಿವಾರದ ಚಿಲ್ಲರೆ ರಾಜಕಾರಣಕ್ಕೆ ಎಂದೂ ಒಲಿಯದ ಹಳೇ ಮೈಸೂರು ಭಾಗದ ಶೂದ್ರ ಒಕ್ಕಲಿಗರನ್ನು ಬ್ರಿಟೀಷರ ಏಜೆಂಟರು ಎಂದು ಬಿಂಬಿಸಿ ಅವಮಾನಿಸುವುದು. ಎರಡನೆಯದು, ಉರೀಗೌಡ ನಂಜೇಗೌಡ ಹೆಸರಿನಲ್ಲಿ ಒಕ್ಕಲಿಗೆ ಮೋಸ ಮಾಡಲು ಸಾಧ್ಯವಾದರೆ ಮುಸಲ್ಮಾನನಾಗಿದ್ದ ಟಿಪ್ಪುವನ್ನು ಕೊಂದರು ಎಂದು ಬಿಂಬಿಸಿ ಅವರಿಗೆ ನಕಲಿ ವೀರತ್ವ ದಯಪಾಲಿಸಿ ಈಗಿನ ಒಕ್ಕಲಿಗರನ್ನು ಮುಸಲ್ಮಾನರ ವಿರುದ್ಧ ಎತ್ತಿಕಟ್ಟುವುದು. ಅಂದರೆ ಬಿಜೆಪಿಯ ಅಧಿಕಾರದ ಬಲಿಪೀಠಕ್ಕೆ ಒಕ್ಕಲಿಗರನ್ನು ಬಲಿ ನೀಡಲು ಸಂಘ ಪರಿವಾರ ಹುಟ್ಟಿಸಿದ ಕೂಸುಗಳೇ ಈ ಉರೀಗೌಡ ಮತ್ತು ದೊಡ್ಡ ನಂಜೇಗೌಡ. ಇದನ್ನು ರಂಗಾಯಣದ ನಿರ್ದೇಶಕ, ಸಂಘಿ ಕಾಲಾಳು ಅಡ್ಡಂಡ ಕಾರ್ಯಪ್ಪ ಹೇಳಿರುವಂತೆ "ಮಂಡ್ಯದ ಒಕ್ಕಲಿಗರನ್ನು ಹಿಂದೂ ಎಂದು ಧರ್ಮದ ಹೆಸರಿನಲ್ಲಿ ಮಾತನಾಡಿಸಿದರೆ ಅವರು ಫೀಲ್ ಆಗುವುದಿಲ್ಲ. ಅವರ ಹೆಗಲ ಮೇಲೆ ಕೈ ಹಾಕಿ ಏನ್ಲಾ ಗೌಡ ಎಂದರೆ ಒಕ್ಕಲಿಗರು ಫೀಲ್ ಆಗುತ್ತಾರೆ, ಎಮೋಷನ್ ಆಗುತ್ತಾರೆ". ಈ ರೀತಿ ಜಾತಿಯ ಅಸ್ಮಿತೆಯನ್ನು ಮುನ್ನೆಲೆಗೆ ತಂದು ಒಕ್ಕಲಿಗರನ್ನು "ಮಂಗ" ಮಾಡುವುದೇ ಸಂಘಿಗಳ ಉದ್ದೇಶ, ಅದಕ್ಕಾಗಿ ಎದ್ದು ಬಂದವರು ಈ ಉರೀಗೌಡ ಮತ್ತು ದೊಡ್ಡ ನಂಜೇಗೌಡ ರು. ಸಂಘ ಪರಿವಾರ ಹುಟ್ಟಿಸಿದ ಇವರನ್ನು ಸರ್ಕಾರಿ ದುಡ್ಡಿನಲ್ಲಿ ಬೆಳೆಸುತ್ತಿರುವವರು ಮೈಸೂರು ರಂಗಾಯಣದ ನಿರ್ದೇಶಕ ಅಡ್ಡಂಡ ಕಾರ್ಯಪ್ಪ.

2017 ರಲ್ಲಿ ಯಾವುದೋ ಒಂದು ವೆಬ್ ಪೋರ್ಟಲ್‌ನಲ್ಲಿ ಇಣುಕಿದ ಉರೀಗೌಡ ಮತ್ತು ದೊಡ್ಡ ನಂಜೇಗೌಡ ಎಂಬ ಪಾತ್ರದಾರಿಗಳ ಮೂಲಕ ಕ್ರಿ.ಶ.1799 ರಲ್ಲೇ ಟಿಪ್ಪುವನ್ನು ಕೊಲ್ಲಿಸಿದ ಹಾಸ್ಯಾಸ್ಪದ ಮತ್ತು ಅವಿವೇಕಿ ಕತೆ ಹೊಸೆದ ಸಂಘ ಪರಿವಾರ ಅದರ ಮೂಲಕವೇ ಮಂಡ್ಯ ಗೆಲ್ಲಲು ಆ ಮೂಲಕ ಒಕ್ಕಲಿಗರ ಪ್ರಾಬಲ್ಯದ ಹಳೇ ಮೈಸೂರು ಗೆಲ್ಲಲು ಹೊರಟಿದೆ. ಹಾಗಾಗಿ ಪ್ರಧಾನಿಯೊಬ್ಬರ ಬೇಟಿಯ ಸಂದರ್ಭದಲ್ಲಿ ಉರೀಗೌಡ ಮತ್ತು ದೊಡ್ಡ ನಂಜೇಗೌಡ ಎಂಬ ಪಾತ್ರಗಳನ್ನು ಜೋರಾಗಿ ಬಿಂಬಿಸಲು ಸಂಘ ಪರಿವಾರ ಸಂಚು ಹೆಣೆದಿತ್ತು. ಪ್ರಧಾನಿಯೊಬ್ಬರ ಬೇಟಿಯ ಘನತೆಯ ಬಗ್ಗೆ ಒಂದಿಷ್ಟೂ ಅರಿವಿರದ ಬಿಜೆಪಿ ಮತ್ತು ಸಂಘ ಪರಿವಾರ ಸುಳ್ಳು ಸೃಷ್ಟಿಸಿ ಅದಕ್ಕೆ ಅಧಿಕೃತತೆ ದಯಪಾಲಿಸಲು ತಯಾರಿ ನಡೆಸಿತ್ತು. ಆದರೆ ಮಂಡ್ಯ ಜನರ ವಿವೇಕ ಮತ್ತು ಸಿ.ಪಿ.ಐ.(ಎಂ) ಪಕ್ಷದ ಸಕಾಲಿಕ ಮಧ್ಯಪ್ರವೇಶ ಉರೀಗೌಡ ಮತ್ತು ದೊಡ್ಡ ನಂಜೇಗೌಡ ಎಂಬ ಮಹಾದ್ವಾರವನ್ನು ದಫನು ಮಾಡಿ ಮೋದಿಯವರಿಗೂ, ಸಂಘ ಪರಿವಾರಕ್ಕೂ ಮುಖಭಂಗ ಉಂಟು ಮಾಡಿದರು. ಮಧ್ಯಾಹ್ನ ಎದ್ದು ನಿಂತವರು ಮಧ್ಯರಾತ್ರಿ ಸತ್ತು ಬಿದ್ದರು!!

ಬಿಜೆಪಿ ಸೇರುವ ಸುಮಲತಾ ಅವರ ನಿಲುವಿಗೆ ಜಿಲ್ಲೆಯ ಜನರು ಆಕ್ರೋಶ ವ್ಯಕ್ತಪಡಿಸಿದರು. ಮಾತ್ರವಲ್ಲ, ರಂಗ ಮಂದಿರವೊಂದರಲ್ಲಿ ಹಾಕಿದ್ದ ಸುಮಲತಾ ಅವರ ಫೋಟೋವನ್ನು ಕಿತ್ತೆಸೆದು ಆಕ್ರೋಶ ವ್ಯಕ್ತಪಡಿಸಿದರು. ಬಿಜೆಪಿಯನ್ನು ನಂಬಿದ ಸುಮಲತಾ ಮತ್ತು ಸುಮಲತಾ ಅವರನ್ನು ನಂಬಿದ ಬಿಜೆಪಿ ಎರಡೂ ದಡ ಸೇರುವ ಸಾಧ್ಯತೆಯಿಲ್ಲ.

ಮೂರು ತಿಂಗಳಲ್ಲಿ ಎರಡನೇ ಮುಖಭಂಗ

ಕಳೆದ ಡಿಸೆಂಬರ್ ತಿಂಗಳಿನಲ್ಲಿ ಕೇಂದ್ರ ಸರ್ಕಾರದ ಗೃಹ ಸಚಿವ ಅಮಿತ್ ಷಾ ಮಂಡ್ಯಕ್ಕೆ ಆಗಮಿಸಿದ್ದರು. ಅದಕ್ಕೂ ಮೊದಲು ಹಲವಾರು ದಿನಗಳಿಂದ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಕರ್ನಾಟಕ ರಾಜ್ಯ ರೈತ ಸಂಘದ ನೇತೃತ್ವದಲ್ಲಿ ರೈತರು ಧರಣಿ ನಡೆಸುತ್ತಿದ್ದರು. ರೈತರ ಧರಣಿ ಸ್ಥಳಕ್ಕೂ ಅಮಿಶ್ ಷಾ ಭಾಷಣ ಮಾಡುವ ಜಾಗಕ್ಕೂ ಕೇವಲ 100 ಮೀಟರ್ ಅಂತರ. ಅಮಿತ್ ಷಾ ರೋಡ್ ಶೋ ಕೂಡ ಮೈಸೂರು ಬೆಂಗಳೂರು ಹೆದ್ದಾರಿಯಲ್ಲಿ ರೈತರ ಧರಣಿಯ ಮುಂದೆಯೂ ಹಾದು ಹೋಗಬೇಕಾದ ಇಕ್ಕಟ್ಟಿನ ಪರಿಸ್ಥಿತಿ. ಆದ್ದರಿಂದ ಬಿಜೆಪಿ ಮತ್ತು ಜಿಲ್ಲಾಡಳಿತ ಸಂಚು ಮಾಡಿ ಅಮಿತ್ ಷಾ ಬರುವ ಹಿಂದಿನ ದಿನ ಬೆಳಿಗ್ಗೆ ರೈತರ ಧರಣಿ ಟೆಂಟ್ ಮೇಲೆ ದಾಳಿ ನಡೆಸಿ ಟೆಂಟನ್ನು ಕಿತ್ತು ಹಾಕಿ ಧರಣಿ ನಿರತ ರೈತರನ್ನು ಬಂಧಿಸಿ ದೌರ್ಜನ್ಯ ಮೆರೆದಿದ್ದರು.

ವಿಷಯ ತಿಳಿದ ತಕ್ಷಣವೇ ರಾಜ್ಯ ರೈತ ಸಂಘದ ಬಡಗಲಪುರ ನಾಗೇಂದ್ರ, ಕೂಲಿಕಾರರ ಸಂಘದ ಪುಟ್ಟಮಾದು, ಸಿಪಿಐಎಂನ ಟಿ.ಎಲ್. ಕೃಷ್ಣೇಗೌಡ ಮುಂತಾದವರು ಜಿಲ್ಲಾಡಳಿತದ ಕಛೇರಿ ಮುಂದೆ ಹೋರಾಟ ನಡೆಸಿ ನಮ್ಮ ಪ್ರಜಾಸತ್ತಾತ್ಮಕ ಹಕ್ಕನ್ನು ಕಿತ್ತುಕೊಂಡರೆ ಯಾವುದೇ ಕಾರಣಕ್ಕೂ ಸುಮ್ಮನಿರುವುದಿಲ್ಲ, ಅಮಿತ್ ಷಾ ಕೂಡಾ ನಮ್ಮ ಪ್ರತಿಭಟನೆಯನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆ ಕೊಟ್ಟರು. ಪರಿಸ್ಥಿತಿಯ ಗಂಭೀರತೆಯನ್ನು ಅರಿತ ಜಿಲ್ಲಾಡಳಿತ ರಾತ್ರಿ ಹತ್ತುಗಂಟೆಗೆ ಅದೇ ಸ್ಥಳದಲ್ಲಿ ಟೆಂಟ್ ಮರು ನಿರ್ಮಾಣ ಮಾಡಿ ರೈತರ ಧರಣಿಗೆ ಅನುವು ಮಾಡಿಕೊಟ್ಟರು. ಕೊನೆಗೆ ಅಮಿತ್ ಷಾ ರೋಡ್ ಶೋ ರದ್ದುಪಡಿಸಿ, ಹತ್ತಿರದ ಕಾಲೇಜು ಮೈದಾನದಲ್ಲಿ ಹೆಲಿಕಾಪ್ಟರ್ ಇಳಿಸಿ ಭಾಷಣ ಮಾಡಿ ಹೋದರು. ಅಮಿತ್ ಷಾ ಭಾಷಣಕ್ಕೆ ಹೋಗುವ ಎಲ್ಲಾ ಜನರು ರೈತರ ಪ್ರತಿಭಟನೆಯನ್ನು ಹಾದು ಹೋಗುತ್ತಾ, ಹೋರಾಟಗಾರರ ಮಾತುಗಳಿಗೆ ಕಿವಿಯಾಗಿದ್ದರು.

ಮೋದಿಯವರ ಭೇಟಿಯಿಂದ ಬಿಜೆಪಿ ನಿರೀಕ್ಷಿಸಿದ ಯಾವ ಪವಾಡವೂ ನಡೆಯಲಿಲ್ಲ. ಆದರೆ ಬಿಜೆಪಿ ಕಾರ್ಯಕರ್ತರಲ್ಲಿ ಒಂದಷ್ಟು ಉತ್ಸಾಹ, ಹುರುಪು ಉಂಟಾಗಿರುವುದನ್ನು ಮುಂದಿನ ದಿನಗಳಲ್ಲಿ ಇದರ ಅಪಾಯವನ್ನು ಎಲ್ಲಕ್ಕಿಂತ ಹೆಚ್ಚಾಗಿ ಬಿಜೆಪಿ ಬತ್ತಳಿಕೆಯಲ್ಲಿರುವ ಕೋಮುವಾದ ಮತ್ತು ಅಪಾರ ಪ್ರಮಾಣದ ಅಕ್ರಮ ಸಂಪತ್ತು ತರಬಹುದಾದ ಅಪಾಯವನ್ನು ನಿರ್ಲಕ್ಷ್ಯ ಮಾಡುವಂತಿಲ್ಲ.

ಮೋದಿ ಬಂದರು... ಹೋದರು...

ಉದ್ಘಾಟನಾ ದಿನದ ವರೆಗೂ ದಶಪಥ ಹೆದ್ದಾರಿ ಎಂದು ಬಿಜೆಪಿ ಮುಖಂಡರು ಹಾಗೂ ಮಂಡ್ಯ ಮತ್ತು ಮೈಸೂರಿನ ಸಂಸದರು ಸುಳ್ಳು ಹೇಳಿಕೊಂಡು ತಿರುಗಾಡುತ್ತಿದ್ದ ಬೆಂಗಳೂರು ಮತ್ತು ಮೈಸೂರಿನ ನಡುವೆ ನಿರ್ಮಾಣ ಹಂತದಲ್ಲಿರುವ ಆರು ಪಥದ ಎಕ್ಸ್‌ಪ್ರೆಸ್ ಹೆದ್ದಾರಿಯನ್ನು ಉದ್ಘಾಟಿಸಲು ಪ್ರಧಾನ ಮಂತ್ರಿಗಳು ಮಂಡ್ಯಕ್ಕೆ ಬಂದಿದ್ದರು. ಅದು ದಶಪಥ ಅಲ್ಲ ಷಟ್ಪಥ ಎಂದು ಅಧಿಕೃತವಾಗಿ ಗೊತ್ತಾದದ್ದೇ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಆಹ್ವಾನ ಪತ್ರಿಕೆ ನೋಡಿದ ಮೇಲೆ.

ಕೇವಲ ಹೆದ್ದಾರಿ ಉದ್ಘಾಟನೆಯೇ ಉದ್ದೇಶವಾಗಿದ್ದರೆ ಹೆದ್ದಾರಿ ಆರಂಭವಾಗಿ ಅಂತ್ಯವಾಗುವ ಬೆಂಗಳೂರು ಅಥವಾ ಮೈಸೂರಿನಲ್ಲಿ ಉದ್ಘಾಟನೆ ಮಾಡಿ ಹೋಗಬಹುದಿತ್ತು. ಬಿಜೆಪಿಯವರಿಗೆ ರಸ್ತೆ ಉದ್ಘಾಟನೆಗಿಂತ ಪ್ರಧಾನಿ, ಗೃಹ ಸಚಿವರನ್ನು ಬಳಸಿಕೊಂಡು ಮಂಡ್ಯವನ್ನು ಆ ಮೂಲಕ ಹಳೇ ಮೈಸೂರು ಪ್ರಾಂತ್ಯವನ್ನು ವಶಕ್ಕೆ ಪಡೆಯುವ ದಾವಂತ. ಇಂತಹ ದಾವಂತದ ಭಾಗವಾಗಿ ಬಂದಿದ್ದ ಪ್ರಧಾನಿಯವರು ಉದ್ಘಾಟಿಸಿದ್ದು ರಸ್ತೆಯನ್ನೋ ಅಥವಾ ಟೋಲ್ ಸಂಗ್ರಹವನ್ನೋ ಎಂಬ ಅನುಮಾನ ಇನ್ನೂ ಪರಿಹಾರವಾಗಿಲ್ಲ. ಆದರೆ ಈಗಿನ ಸ್ಥಿತಿ ನೋಡಿದರೆ ಪ್ರಧಾನಿಯವರು ಉದ್ಘಾಟಿಸಿದ್ದು ಟೋಲ್ ಸಂಗ್ರಹವನ್ನೇ ಎಂಬುದು ಮನದಟ್ಟಾಗುತ್ತಿದೆ.

ರಸ್ತೆ/ಟೋಲ್ ಉದ್ಘಾಟನೆಗೆ ಸರ್ಕಾರಿ ಖರ್ಚಿನಲ್ಲಿ ಬಂದ ಮೋದಿಯವರು ಬಿಜೆಪಿಯ ಚುನಾವಣಾ ತಯಾರಿ ಸಭೆ ನಡೆಸಿದರು. ಸರ್ಕಾರದ ಖರ್ಚಿನಲ್ಲಿ ಉರೀಗೌಡ ಮತ್ತು ದೊಡ್ಡ ನಂಜೇಗೌಡ ಎಂಬ ನಕಲಿಗಳ ದ್ವಾರವೂ ಸೇರಿದಂತೆ ಎಲ್ಲಾ ಕಡೆ ಕೇಸರಿ ಮತ್ತು ಬಿಜೆಪಿ ಬಾವುಟಗಳನ್ನು ಹಾರಾಡಿಸಿದರು. ಎಲ್ಲಾ ಇಲಾಖೆಗಳಿಂದ ಸುತ್ತೋಲೆ/ಮೆಮೋಗಳನ್ನು ಹೊರಡಿಸಿ, ನಾಲ್ಕು ಸಾವಿರ ಬಸ್‌ಗಳನ್ನು ನಿಯೋಜಿಸಿ ಹಿಂದೆಂದೂ ಕೇಳರಿಯದ ರೀತಿಯಲ್ಲಿ ಸರ್ಕಾರಿ ಯಂತ್ರವನ್ನು ದುರ್ಬಳಕೆ ಮಾಡಿಕೊಂಡು ಭರ್ಜರಿ ಚುನಾವಣಾ ಭಾಷಣಕ್ಕೆ ಮೋದಿಯವರು ತಯಾರಾಗಿ ಬಂದಿದ್ದರು.

ಆದರೆ ಪ್ರಧಾನಿಯವರ ಆಗಮನವೂ ಸೇರಿದಂತೆ ಬಿಜೆಪಿಯವರ ಯಾವ ಪ್ರಯತ್ನಕ್ಕೂ ಮಂಡ್ಯ ಜಿಲ್ಲೆಯ ಜನ ಕ್ಯಾರೆ ಅನ್ನಲಿಲ್ಲ. ಕಳಿಸಿದ್ದ ಬಸ್‌ಗಳಲ್ಲಿ ಹೆಚ್ಚಿನವು ಚಾಲಕ ಮತ್ತು ನಿರ್ವಾಹಕರನ್ನು ಹೊತ್ತು ಹಿಂದಿರುಗಿದವು. ಪ್ರಧಾನಿಯವರ ಕಾರ್ಯಕ್ರಮಕ್ಕೆ ಜನರನ್ನು ಕರೆಯಲು ಹೋದ ಬಿಜೆಪಿ ಕಾರ್ಯಕರ್ತರಿಗೆ, ಪಿ.ಡಿ.ಒ.ಗಳಿಗೆ ಮತ್ತು ಇತರೆ ಅಧಿಕಾರಿಗಳಿಗೆ ಜನರು ತಮ್ಮ ಬದುಕಿನ ಪ್ರಶ್ನೆಗಳನ್ನು, ಗ್ಯಾಸ್ ಬೆಲೆಯೇರಿಕೆ, ಪೆಟ್ರೋಲ್ ಡೀಸೆಲ್ ಬೆಲೆಯೇರಿಕೆ, ಕೂಲಿ ಸಿಗದೆ ಪರಿತಪಿಸುತ್ತಿರುವುದು, ಮುಂತಾಗಿ ಕೇಳುತ್ತಾ ತಮ್ಮ ಆಕ್ರೋಶ ಹೊರಹಾಕುತ್ತಾ ಬಿಜೆಪಿಗೆ ಮಂಗಳಾರತಿ ಮಾಡುತ್ತಿದ್ದುದು ಸಾಮಾಜಿಕ ಮಾಧ್ಯಮಗಳಲ್ಲಿ ಬಿತ್ತರವಾಗುತ್ತಿತ್ತು.

ಮಂಡ್ಯದ ರೋಡ್ ಶೋ ಮುಗಿಸಿ ಗೆಜ್ಜಲಗೆರೆಯ ಬಹಿರಂಗ ಸಭೆಗೆ ಬಂದ ಮೋದಿಯವರಿಗೆ ಇಲ್ಲೂ ಕೂಡ ನಿರಾಶೆ ಕಾದಿತ್ತು. ಮೋದಿಯವರ ಭಾಷಣ ಆರಂಭಕ್ಕೂ ಮುನ್ನವೇ ಕಾಸು ಕೊಟ್ಟು ಕರೆ ತಂದಿದ್ದ ಜನರು ಜಾಗ ಖಾಲಿ ಮಾಡಿದ್ದರು. ಹೇಗೂ ಭರ್ಜರಿ ಭಾಷಣಕ್ಕೆ ತಯಾರಾಗಿ ಬಂದಿದ್ದ ಮೋದಿಯವರು ಖಾಲಿ ಕುರ್ಚಿಗಳನ್ನು ಉದ್ದೇಶಿಸಿ ಭಾಷಣ ಮಾಡಿದರು. ಇಡೀ ಭಾಷಣದಲ್ಲಿ ಇಲ್ಲಿ ಭದ್ರ ನೆಲೆ ಹೊಂದಿರುವ ಜೆ.ಡಿ.ಎಸ್. ಬಗ್ಗೆ ಒಂದು ಮಾತನ್ನೂ ಆಡದ ಮೋದಿಯವರು ಕಾಂಗ್ರೆಸ್ ಪಕ್ಷದ ಬಗೆಗಿನ ಅದೇ ಹಳಸಲು ಮಾತುಗಳನ್ನು ಖಾಲಿ ಕುರ್ಚಿಗಳ ಕಿವಿಗೆ ಮುಟ್ಟಿಸಿದರು. ಒಂದಷ್ಟು ಜನರು ಬಂದರು ಹೋದರು... ಹಾಗೆಯೇ ಮೋದಿಯೂ ಬಂದರು ಮತ್ತು ಹೋದರು... ಒಟ್ಟಾರೆಯಾಗಿ, ಮೋದಿಯವರ ಭೇಟಿಯಿಂದ ಬಿಜೆಪಿ ನಿರೀಕ್ಷಿಸಿದ ಯಾವ ಪವಾಡವೂ ನಡೆಯಲಿಲ್ಲ. ಆದರೆ ಬಿಜೆಪಿ ಕಾರ್ಯಕರ್ತರಲ್ಲಿ ಒಂದಷ್ಟು ಉತ್ಸಾಹ, ಹುರುಪು ಉಂಟಾಗಿರುವುದನ್ನು ಮುಂದಿನ ದಿನಗಳಲ್ಲಿ ಇದರ ಅಪಾಯವನ್ನು ಎಲ್ಲಕ್ಕಿಂತ ಹೆಚ್ಚಾಗಿ ಬಿಜೆಪಿ ಬತ್ತಳಿಕೆಯಲ್ಲಿರುವ

ಪುಟ 10 ಕ್ಕೆ

ಮೋದಿ ಮಂಡ್ಯ ಬೇಟಿ ಬಂದಾ ಪುಟ್ಟ!... ಹೋದಾ ಪುಟ್ಟ!....

ಪುಟ 9 ರಿಂದ

ಕೋಮುವಾದ ಮತ್ತು ಅಪಾರ ಪ್ರಮಾಣದ ಅಕ್ರಮ ಸಂಪತ್ತು ತರಬಹುದಾದ ಅಪಾಯವನ್ನು ನಿರ್ಲಕ್ಷ್ಯ ಮಾಡುವಂತಿಲ್ಲ.

ಇದೆಲ್ಲಕ್ಕೂ ಕಳಸವಿಟ್ಟಂತೆ ಮೋದಿಯವರು ಬಿಜೆಪಿಯ ನಾಗಮಂಗಲದ ಸಂಭಾವ್ಯ ಅಭ್ಯರ್ಥಿ ಫೈಟರ್ ರವಿಯನ್ನು ಬೇಟಿ ಮಾಡಿದ್ದು ಮತ್ತು ಅದು ದೇಶದ ಎಲ್ಲಾ ಮಾಧ್ಯಮಗಳಲ್ಲಿ ಪ್ರಧಾನವಾಗಿ ಬಿತ್ತರವಾಗಿದ್ದು. ಬೆಂಗಳೂರಿನ ಪೊಲೀಸ್ ಠಾಣೆಗಳಲ್ಲಿ ಕ್ರಿಮಿನಲ್ ಕೃತ್ಯಗಳ ಕಾರಣದಿಂದ ರೌಡಿ ಪಟ್ಟಿಯಲ್ಲಿರುವ ರವಿ ಎಂಬಾತನನ್ನು ಪ್ರಧಾನಿಗಳು ಬೇಟಿ ಮಾಡಿ ಕೈಮುಗಿದು ನಿಂತದ್ದು ಇತ್ತೀಚಿನ ರಾಜಕಾರಣದ ಕ್ರೂರ ವ್ಯಂಗ್ಯ. ಬಿಜೆಪಿ ಪಕ್ಷ ಇರುವುದೇ ಹಾಗಾದರೂ ಪ್ರಧಾನಿಯೊಬ್ಬರು ರೌಡಿ ಶೀಟರ್ ಮುಂದೆ ಕೈಮುಗಿದು ನಿಂತದನ್ನು ಮಾನವಂತರು ಯಾರೂ ಒಪ್ಪಲಿಲ್ಲ, ಮಂಡ್ಯದ ಜನವೂ ಒಪ್ಪಲಿಲ್ಲ. ಕೊನೆಗೆ ಬಿಜೆಪಿಯ ಕೆಲವು ಮುಖಂಡರೂ ಒಪ್ಪಲಿಲ್ಲ. ಪ್ರಧಾನಿಯವರನ್ನು ಭೇಟಿ ಮಾಡಲು ಈ ಮೊದಲೇ ಅನುಮೋದಿತ ಪಟ್ಟಿಯನ್ನು ಮೀರಿ ಹೇಗೆ ಭೇಟಿ ಮಾಡಿದ ಎನ್ನುವ ಪ್ರಶ್ನೆ ತೀವ್ರ ಚರ್ಚೆಗೆ ಗ್ರಾಸವಾಗಿದೆ. ಇದರಿಂದ ಬಿಜೆಪಿ ನಷ್ಟಕ್ಕೆ ಒಳಗಾಗುವುದಂತೂ ಸತ್ಯ.

ಸುಮಲತಾ ಬಿಜೆಪಿಗೆ ಬೆಂಬಲ: ಸಂಸದರ ರಾಜಕೀಯ ಶವಪೆಟ್ಟಿಗೆಗೆ ಹೊಡೆದ ಕೊನೆಯ ಮೊಳೆ

ಮೋದಿಯವರ ಮಾರ್ಚ್ 12 ರ ಬೇಟಿಗೂ ಎರಡು ದಿನ ಮೊದಲು ತನ್ನೆಲ್ಲಾ ಬೆಂಬಲವನ್ನು ಬಿಜೆಪಿಗೆ ದಾರೆ ಎರೆಯುವುದಾಗಿ ಮಂಡ್ಯ ಸಂಸದೆ ಸುಮಲತಾ ಘೋಷಿಸಿದರು. ಬಿಜೆಪಿಗೆ ಅಧಿಕೃತವಾಗಿ ಸೇರದಿದ್ದರೂ, ಸಿಪಿಐ(ಎಂ) ಪಕ್ಷ ಕಳೆದ ಸಂಸತ್ ಚುನಾವಣೆಯ ಸಂದರ್ಭದಲ್ಲಿ ಗುರುತಿಸಿದ್ದಂತೆ ಆಕೆ ತಾನು ಸ್ವತಂತ್ರ, ಸ್ವಾಭಿಮಾನಿ ಎಂಬುದೆಲ್ಲ ಬರೀ ಬುರುಡೆ, ಅಮಿತ್ ಷಾ ನಿರ್ದೇಶನದಂತೆ ನಡೆಯುವ ಗುಪ್ತ ಸಂಘಿ ಎಂಬುದನ್ನು ಸಾಬೀತು ಪಡಿಸಿದರು.

ಸುಮಲತಾ ಅವರು ಬಿಜೆಪಿಗೆ ಹೋಗುವ ಮೂಲಕ ತಾತ್ಕಾಲಿಕವಾಗಿ ಬಿಜೆಪಿಗೆ ಒಂದು ಸಣ್ಣ ಲಾಭವಾದರೂ ಸುಮಲತಾ ಅವರ ಚುನಾವಣಾ ರಾಜಕಾರಣದ ಶವ ಪೆಟ್ಟಿಗೆಗೆ ಹೊಡೆದ ಕೊನೆಯ ಮೊಳೆಯೂ ಹೌದು. ಏಕೆಂದರೆ ಮಂಡ್ಯ ಜಿಲ್ಲೆಯಲ್ಲಿ ಬಿಜೆಪಿ ಏನೇ ಪ್ರಯತ್ನಿಸಿದರೂ ಇಲ್ಲಿನ ರಾಜಕಾರಣ ಜೆಡಿಎಸ್ ಮತ್ತು ಕಾಂಗ್ರೆಸ್ ಪಕ್ಷದ ನಡುವೆಯೇ ಧ್ರುವೀಕರಣಗೊಳ್ಳುತ್ತದೆ. ಈಗಲೂ ಹಾಗೆಯೇ ನಡೆಯುತ್ತಿದೆ. ಸುಮಲತಾ ಅವರ ಒಂದಷ್ಟು ಬೆಂಬಲಿಗರು ಸಂಸದರ ನಡೆಯನ್ನು ಬೆಂಬಲಿಸಬಹುದಾದರೂ ಸಂಸದರು ಸಂಸದರಾಗಿದ್ದೇ ಜೆಡಿಎಸ್ ವಿರೋಧಿ ಶಕ್ತಿಗಳ ಕ್ರೋಢೀಕರಣದಿಂದ. ಅದರಲ್ಲೂ ಪಕ್ಷದ ತೀರ್ಮಾನವನ್ನು ಬಹಿರಂಗವಾಗಿ ಉಲ್ಲಂಘಿಸಿ ಸುಮಲತಾ ಅವರಿಗೆ ಬೆಂಬಲ ನೀಡಿದ ಚಲುವರಾಯಸ್ವಾಮಿ ಸೇರಿದಂತೆ ಜಿಲ್ಲೆಯ ಕಾಂಗ್ರೆಸ್ ಮುಖಂಡರ ನಡೆಯಿಂದ.

ಈಗ ಸುಮಲತಾ ಅವರು ತಮ್ಮ ಅವಕಾಶವಾದಿ ನಿಲುವುಗಳಿಂದ ಆಚೆ ಬಂದು ತಮ್ಮ ರಾಜಕೀಯ ನಿಲುವನ್ನು ಬಹಿರಂಗವಾಗಿ ಹೇಳಿದ ನಂತರ ಕಾಂಗ್ರೆಸ್ ತನ್ನ ಕಾರ್ಯಕರ್ತರು ಮತ್ತು ಬೆಂಬಲಿಗರನ್ನು ಕ್ರೋಡೀಕರಿಸುವ ಕೆಲಸ ಮಾಡುತ್ತಿದೆ. ಪರಿಣಾಮವಾಗಿ ಸುಮಲತಾ ಅವರು ಭಾವಿಸಿದ್ದ ಜನ ಬೆಂಬಲದ ಗುಳ್ಳೆ ಒಡೆಯಲಿದೆ. ಇದರಿಂದ ಸಹಜವಾಗಿಯೇ ಸುಮಲತಾ ಅವರ ಹಿಂದಿರುವ ಬೆಂಬಲಿಗರೂ ಕೂಡಾ ತಮ್ಮ ರಾಜಕೀಯ ಭವಿಷ್ಯದ ಬಗ್ಗೆ ಯೋಚಿಸಿದರೆ ಸುಮಲತಾ ಅವರು ರಾಜಕೀಯ ಮಹತ್ವಾಕಾಂಕ್ಷೆ ಕಮರಿ ಹೋಗುತ್ತದೆ.

ಸುಮಲತಾ ಅವರ ಈ ತೀರ್ಮಾನದಿಂದ ಕಾಂಗ್ರೆಸ್ ಮತ್ತು ಜೆಡಿಎಸ್ ಎರಡೂ ಪಕ್ಷಗಳ ಒಂದಷ್ಟು ಲೆಕ್ಕಾಚಾರವೂ ಹೆಚ್ಚೂಕಮ್ಮಿ ಆಗಬಹುದು. ಸುಮಲತಾ ಅವರ ಕಾರಣದಿಂದ ಬಿಜೆಪಿ ಎಲ್ಲಾ ಕಡೆ ಪೈಪೋಟಿ ನೀಡಿದರೆ ಧ್ರುವೀಕರಣದ ಕಾರಣಕ್ಕಾಗಿ ಕಾಂಗ್ರೆಸನ್ನು ಸೋಲಿಸಲು ಜೆಡಿಎಸ್ ಕಡೆಗೆ ಬರುತ್ತಿದ್ದ ಬಿಜೆಪಿಯ ಮತಗಳು ಖೋತಾ ಆಗಿ ಜೆಡಿಎಸ್ ಕಷ್ಟಕ್ಕೆ ಸಿಲುಕಬಹುದು. ಏಕೆಂದರೆ ಇಲ್ಲಿಯವರೆಗಿನ ಅನೇಕ ಚುನಾವಣೆಗಳಲ್ಲಿ ಬಿಜೆಪಿಯ ಮತಗಳು ಜೆಡಿಎಸ್‌ಗೆ ವರ್ಗಾವಣೆಗೊಂಡು ಅದರ ಲಾಭ ಜೆಡಿಎಸ್‌ಗೆ ಆಗಿದೆ. ಮುಖ್ಯವಾಗಿ ಲಿಂಗಾಯತರು, ಗಂಗಾಮತಸ್ಥರು, ಎಡಗೈ ದಲಿತರು ತಮ್ಮ ಮತಗಳನ್ನು ಬಹುತೇಕವಾಗಿ ಕಾಂಗ್ರೆಸ್‌ಗೆ ವಿರುದ್ದವಾಗಿ ನೀಡಿದ್ದಾರೆ.

ಅದೇ ರೀತಿ ಸುಮಲತಾ ಅವರ ಬೆಂಬಲದ ನೆಲೆ ಕಾಂಗ್ರೆಸಿನ ನೆಲೆಯೇ ಆಗಿರುವುದರಿಂದ ಸುಮಲತಾ ಅವರ ಪಕ್ಷಾಂತರ ಕಾಂಗ್ರೆಸ್ಸಿಗೂ ನಕಾರಾತ್ಮಕವಾಗಿ ಪರಿಣಮಿಸಬಹುದು. ದೊಡ್ಡ ಸಂಖ್ಯೆ ಅಲ್ಲದಿದ್ದರೂ ಒಂದೊಂದು ಕ್ಷೇತ್ರದಲ್ಲಿ ಒಂದೆರಡು ಸಾವಿರ ಮತವೂ ಸೋಲು ಗೆಲುವನ್ನು ನಿರ್ಧರಿಸಬಹುದು. ಸುಮಲತಾ ಅವರನ್ನು ನಂಬಿಕೊಂಡು ಬಿಜೆಪಿ ಗೆಲ್ಲುವ ಯಾವ ಸಾಧ್ಯತೆಯೂ ಇಲ್ಲದಿದ್ದರೂ ಜೆಡಿಎಸ್ ಮತ್ತು ಕಾಂಗ್ರೆಸ್ಸಿನ ಮೇಲೆ ಯಾವ ರೀತಿಯ ಪರಿಣಾಮ ಉಂಟಾಗುತ್ತದೆ ಎಂಬುದನ್ನು ಕಾದು ನೋಡಬೇಕು.

ಸಂಸದೆ ಸುಮಲತಾ ಅವರ ಬಿಜೆಪಿ ಸೇರ್ಪಡೆಯನ್ನು ಮಂಡ್ಯ ಜಿಲ್ಲೆಯ ಜನ ಸರಳವಾಗಿ ಸ್ವೀಕರಿಸಲಿಲ್ಲ. ನಟ ಅಂಬರೀಶ್ ಅವರು ತಮ್ಮ ಬದುಕಿನ ಕೊನೆಯ ವರೆಗೂ ಜಾತ್ಯತೀತವಾಗಿ ಇದ್ದದ್ದು ಮತ್ತು ಬಿಜೆಪಿ ಮಂತ್ರಿ ಸ್ಥಾನದ ಆಮಿಷ ಒಡ್ಡಿದಾಗಲೂ ನಿರಾಕರಿಸಿದ್ದು ಜಿಲ್ಲೆಯ ಜನರ ಮನಸ್ಸಿನಲ್ಲಿ ಅಂಬರೀಶ್ ಮೇಲಿನ ಗೌರವವನ್ನು ಹೆಚ್ಚಿಸಿತ್ತು. ಆದ್ದರಿಂದ ಲಾಭಗಳಿಗಾಗಿ ಬಿಜೆಪಿ ಸೇರುವ ಸುಮಲತಾ ಅವರ ನಿಲುವಿಗೆ ಜಿಲ್ಲೆಯ ಜನರು ಆಕ್ರೋಶ ವ್ಯಕ್ತಪಡಿಸಿದರು. ಮಾತ್ರವಲ್ಲ, ರಂಗ ಮಂದಿರವೊಂದರಲ್ಲಿ ಹಾಕಿದ್ದ ಸುಮಲತಾ ಅವರ ಫೋಟೋವನ್ನು ಕಿತ್ತೆಸೆದು ಆಕ್ರೋಶ ವ್ಯಕ್ತಪಡಿಸಿದರು. ಬಿಜೆಪಿಯನ್ನು ನಂಬಿದ ಸುಮಲತಾ ಮತ್ತು ಸುಮಲತಾ ಅವರನ್ನು ನಂಬಿದ ಬಿಜೆಪಿ ಎರಡೂ ದಡ ಸೇರುವ ಸಾಧ್ಯತೆಯಿಲ್ಲ. ಮಂಡ್ಯದಲ್ಲಿ ಬಂದೊದಗಬಹುದಾದ ಈ ಸ್ಥಿತಿ ಹಳೇ ಮೈಸೂರು ಭಾಗದಲ್ಲಿ ಬಿಜೆಪಿಯ ಸ್ಥಿತಿಯನ್ನು ಹದಗೆಡಿಸುವುದರಲ್ಲಿ ಸಂಶಯವಿಲ್ಲ.

ಹಣವಂತರಿಗೆ ಮಣೆ ಹಾಕುತ್ತಿರುವ ಕಾಂಗ್ರೆಸ್; ಭುಗಿಲೇಳುತ್ತಿರುವ ಭಿನ್ನಮತ

ಮಾಜಿ ಸಚಿವ ಚಲುವರಾಯಸ್ವಾಮಿ ನೇತೃತ್ವದ ಮಂಡ್ಯ ಜಿಲ್ಲಾ ಕಾಂಗ್ರೆಸ್ ವಿಧಾನಸಭಾ ಚುನಾವಣೆಯನ್ನು ಜೂಜು ಎಂದು ಭಾವಿಸಿರುವಂತಿದೆ. ಜನತೆಯ ಜ್ವಲಂತ ಸಮಸ್ಯೆಗಳಿಗೆ ಎಂದೂ ಧ್ವನಿಯಾಗದ ಕಾಂಗ್ರೆಸ್ ಮೋದಿ ಬೊಮ್ಮಾಯಿ ಸರ್ಕಾರದ ಯಾವ ನೀತಿಗಳ ವಿರುದ್ಧವೂ ಬೀದಿಗಿಳಿಯಲಿಲ್ಲ. ಹಾಗಾಗಿ ಈಗ ಚುನಾವಣೆ ಗೆಲ್ಲಲು ಹಣವಿರುವ "ಕುದುರೆಗಳು" ಬೇಕು ಎಂಬ ತೀರ್ಮಾನಕ್ಕೆ ಕಾಂಗ್ರೆಸ್ ಬಂದಿದೆ. ಹಾಗಾಗಿ ಮದ್ದೂರಿನಲ್ಲಿ ಕ್ಯಾಸಿನೋ ಮನುಷ್ಯ, ಜೆಡಿಎಸ್ ಕಾಂಗ್ರೆಸ್ ಸರ್ಕಾರವನ್ನು ಬೀಳಿಸಲು ಬಂಡವಾಳ ಹೂಡಿದ ಕದಲೂರು ಉದಯ್, ಮಂಡ್ಯದಲ್ಲಿ ರಿಯಲ್ ಎಸ್ಟೇಟ್ ಉದ್ಯಮಿ ರಾಧಾಕೃಷ್ಣ ಕೀಲಾರ ಮತ್ತು ಕೆ.ಆರ್.ಪೇಟೆಯಲ್ಲಿ ಸಚಿವ "ಬಾಂಬೆ ಬಾಯ್" ನಾರಾಯಣಗೌಡರಿಗೆ ಮಣೆ ಹಾಕಲು ಹೊರಟಿದೆ.

ಈ ನಡೆ ಸಹಜವಾಗಿ ಹಿರಿಯ ಕಾಂಗ್ರೆಸಿಗರಲ್ಲಿ ಅತೃಪ್ತಿ ಸ್ಫೋಟಗೊಳ್ಳುವಂತೆ ಮಾಡಿದೆ. ಕೆ.ಆರ್. ಪೇಟೆಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಿಗೆ ಮೊಟ್ಟೆ ಎಸೆದು ಆಕ್ರೋಶ ವ್ಯಕ್ತಪಡಿಸಿದ್ದರೆ ಮಂಡ್ಯದಲ್ಲಿ ಹಿರಿಯ ಕಾಂಗ್ರೆಸ್ ಮುಖಂಡ ಆತ್ಮಾನಂದ ಅವರ ಮನೆಯಲ್ಲಿ ಸಭೆ ನಡೆಸಿ ರಾಜ್ಯ ಮತ್ತು ಕೇಂದ್ರ ನಾಯಕರನ್ನು ಬೇಟಿ ಮಾಡಿ ಆಕ್ರೋಶ ಹೊರ ಹಾಕಿದ್ದಾರೆ. ಕಾಂಗ್ರೆಸ್ ಪಕ್ಷ ಈ ಘಟನೆಗಳನ್ನು ಹಗುರವಾಗಿ ಪರಿಗಣಿಸಿದರೆ ಅತೃಪ್ತಿಯ ಲಾಭವನ್ನು ಕೋಮುವಾದಿ ಬಿಜೆಪಿ ಬಳಸಿಕೊಳ್ಳತ್ತದೆ.

ತನ್ನನ್ನು ಜಾತ್ಯಾತೀತವಾಗಿ ಉಳಿಸಿಕೊಳ್ಳುವ ಜವಾಬ್ದಾರಿ ರೈತ ಸಂಘದ ಮೇಲಿದೆ

ಮೇಲುಕೋಟೆ ವಿಧಾನಸಭಾ ಕ್ಷೇತ್ರದ ರೈತ ಸಂಘ/ಸರ್ವೋದಯ ಕರ್ನಾಟಕ ಪಕ್ಷದ ಅಭ್ಯರ್ಥಿ ದರ್ಶನ್ ಪುಟ್ಟಣ್ಣಯ್ಯ ಈಗಲೂ ಸುಮಲತಾ ಅವರ ಬೆಂಬಲ ನಮಗಿದೆ ಎನ್ನುವ ರೀತಿಯ ಮಾತುಗಳನ್ನಾಡಿದ್ದಾರೆ. ಹಾಗೆಯೇ ಸುಮಲತಾ ಅವರನ್ನು ಮೇಲುಕೋಟೆ ಕ್ಷೇತ್ರದಿಂದ ವಿಧಾನಸಭೆ ಚುನಾವಣೆಗೆ ನಿಲ್ಲಿಸುವ ಮಾತುಗಳನ್ನು ಬಿಜೆಪಿ ತೇಲಿಬಿಟ್ಟಿದೆ. ಇದರಲ್ಲಿ ಸುಮಲತಾ ಬೆಂಬಲದ ನಿರೀಕ್ಷೆಯಲ್ಲಿ ದರ್ಶನ್ ಅವರು ಬಿಜೆಪಿಯ ಕಡೆ ಬರುವಂತೆ ಮತ್ತು ಸುಮಲತಾ ಹೆಸರನ್ನು ತೇಲಿ ಬಿಡುವ ಮೂಲಕ ದರ್ಶನ್ ಬಿಜೆಪಿಯ ಜೊತೆ ರಾಜಿ ಸಂಧಾನಕ್ಕೆ ಬರುವ ಒತ್ತಡ ನಿರ್ಮಾಣ ಮಾಡುವ ತಂತ್ರ ಹೆಣೆಯಲಾಗುತ್ತಿದೆ. ದರ್ಶನ್ ಪುಟ್ಟಣ್ಣಯ್ಯನವರ ಖಾಸಗಿ ಸ್ನೇಹ ಶ್ರೀರಂಗಪಟ್ಟಣದ ಬಿಜೆಪಿ ಅಭ್ಯರ್ಥಿ ಸಚ್ಚಿದಾನಂದ ಮತ್ತು ನಟ ದರ್ಶನ್ ತೂಗುದೀಪ ಅವರೊಂದಿಗೆ ತೀರಾ ಆತ್ಮೀಯವಾಗಿದೆ. ಇತ್ತೀಚೆಗೆ ಸಾಮಾಜಿಕ ಮಾಧ್ಯಮಗಳಲ್ಲಿ ಆ "ಮಧುರ" ಸ್ನೇಹದ ಫೋಟೋಗಳನ್ನು ದರ್ಶನ್ ಪುಟ್ಟಣ್ಣಯ್ಯ ತಾವೇ ಹಂಚಿಕೊಂಡಿದ್ದಾರೆ. ಈ ಎಲ್ಲದರ ಹಿನ್ನೆಲೆಯಲ್ಲಿ ದರ್ಶನ್ ಪುಟ್ಟಣ್ಣಯ್ಯ ಅವರನ್ನು ಪ್ರಗತಿಪರ ವಿಚಾರಧಾರೆಗಳಿಗೆ ನಿಷ್ಠರಾಗಿ ಉಳಿಸುವ ಮತ್ತು ಆ ಮೂಲಕ ರೈತ ಸಂಘ ಪ್ರತಿಪಾದಿಸಿಕೊಂಡು ಬಂದ ಜಾತ್ಯಾತೀತ ಮೌಲ್ಯಗಳನ್ನು ಮುಂದೊಯ್ಯುವ ಜವಾಬ್ದಾರಿ ರೈತ ಸಂಘದ ನಾಯಕತ್ವದ ಮೇಲಿದೆ.

ಅಮೆರಿಕನ್ ಬ್ಯಾಂಕ್ ಗಳ ಕುಸಿತ ಮಹಾ ಆರ್ಥಿಕ ಕುಸಿತದ ಮುನ್ಸೂಚನೆಯೇ?.......

ಪುಟ 8 ರಿಂದ

ಅಗತ್ಯವಿರಲಿಲ್ಲ. ಇದಕ್ಕಾಗಿ ಜನರ ಹಣವನ್ನು ಖರ್ಚು ಮಾಡಲಾಯಿತು ಎಂಬ ತೀವ್ರ ಟೀಕೆ ಹಿಂದೆ 2008ರಲ್ಲಿ ಬಂದಂತೆ ಈ ಬಾರಿಯೂ ಬಂದಿದೆ. ಈ 'ಬೈಲ್ ಔಟ್' ಗೆ ಜನರ ತೆರಿಗೆ ಹಣ ಬಳಸಲಿಲ್ಲ, ಬ್ಯಾಂಕಿನ ಲಾಭಗಳ ಮೇಲೆ ವಿಧಿಸುವ ತೆರಿಗೆಯಿಂದ ರಚಿತವಾದ ನಿಧಿಯನ್ನು ಬಳಸಲಾಗಿದೆಯೆಂದು ಸರಕಾರ ಸಮಜಾಯಿಷಿ ನೀಡಲು ಪ್ರಯತ್ನಿಸಿತು. ಆದರೆ ಬ್ಯಾಂಕಿನ ಲಾಭಗಳು ಜನರ ಠೇವಣಿ, ವಿವಿಧ ಸೇವಾ ಶುಲ್ಕದಿಂದಲೇ ಬರುವಂಥಧು, ಆದ್ದರಿಂದ ಜನರ ಹಣವನ್ನೇ ಈ ತಿಮಿಂಗಲಗಳಿಗೆ ಕೊಡಲಾಗಿದೆ ಎಂಬ ಭಾವನೆ, ಟೀಕೆ ವ್ಯಾಪಕವಾಗಿದೆ.

ಆದರೆ ತೀವ್ರ ಬೆಲೆ ಏರಿಕೆ ಕಡಿಮೆ ಮಾಡಲು ಅಥವಾ ಅದರ ಪರಿಣಾಮದಿಂದ ಬಹುಪಾಲು ಜನರನ್ನು ರಕ್ಷಿಸಲು ಪರಿಹಾರ ನೀಡಲು ತೀವ್ರ ಒತ್ತಾಯವಿದ್ದರೂ, ಯಾವುದೇ ತುರ್ತು ಕ್ರಮವನ್ನು ಸರಕಾರ ಕೈಗೊಂಡಿಲ್ಲ. ಮನೆ ಬಾಡಿಗೆ/ಸಾಲ ಕಟ್ಟಲಾಗದಿದ್ದವರಿಗೆ ನೆರವು, (ಭಾರತದಲ್ಲಿ ಸಾಲಬಾಧೆಯಿಂದ ರೈತರ ಆತ್ಮಹತ್ಯೆಯಂತೆ ತೀವ್ರ ಪರಿಣಾಮ ಬೀರಿರುವ) ವಿದ್ಯಾರ್ಥಿ ಸಾಲ ಮನ್ನಾ ಮಾಡಲು ಸರಕಾರ ತಯಾರಿಲ್ಲ. ಉದಾಹರಣೆಗೆ ವಿದ್ಯಾರ್ಥಿ ಸಾಲ ಮನ್ನಾ ಮಾಡಲು ವರ್ಷಕ್ಕೆ ಕೇವಲ 13 ಬಿಲಿಯನ್ ಡಾಲರು ಬೇಕಾಗುತ್ತದೆ. ಅದರ ಬದಲು ಈ ಹಿಂದೆ ಇದ್ದ ಮತ್ತು ಕೊವಿದ್ ಕಾಲದಲ್ಲಿ ಆರಂಭಿಸಲಾದ ಹಲವು ಪರಿಹಾರ ಕ್ರಮಗಳನ್ನು ನಿಲ್ಲಿಸಲಾಗಿದೆ.

ಬಡ್ಡಿದರ ಹೆಚ್ಚಳವು ಹಣದುಬ್ಬರಕ್ಕೆ ಉತ್ತರವಲ್ಲ

ಈ ಮೂರು ಬ್ಯಾಂಕ್ ಗಳು ದಿವಾಳಿಯಾದ ಹಿನ್ನೆಲೆಯಲ್ಲಿ ತರಾತುರಿಯಲ್ಲಿ 'ಬ್ಯಾಂಕ್ ಟರ್ಮ್ ಫಂಡಿಂಗ್ ಪ್ರೋಗ್ರಾಂ' (ಬ್ಯಾಂಕುಗಳನ್ನು ರಕ್ಷಿಸಲು ಧನಸಹಾಯ ಯೋಜನೆ) ಎಂಬ ಯೋಜನೆಯನ್ನು ತುರ್ತಾಗಿ ಜಾರಿಗೆ ತರಲಾಗಿದೆ. ಅಂದರೆ, ಒಂದು ವರ್ಷದಲ್ಲಿ ಮರುಪಾವತಿಸಲು ಅಗತ್ಯವಿರುವ ಹಣವನ್ನು ಸಾಲವಾಗಿ ನೀಡುವ ಮೂಲಕ ದಿವಾಳಿಯತ್ತ ಸಾಗುತ್ತಿರುವ ಬ್ಯಾಂಕುಗಳಿಗೆ ಈ ಯೋಜನೆ ತಾತ್ಕಾಲಿಕ ಪರಿಹಾರವಾಗಿದೆ. ಇದು ಕುಸಿತ ತಡೆಯುವ ಬದಲು, ಕುಸಿಯುವ ಬ್ಯಾಂಕುಗಳ ರಕ್ಷಣೆಗೆ ಸರಕಾರ ಧಾವಿಸುವುದರಿಂದ ಇನ್ನಷ್ಟು ಅಪಾಯಕಾರಿ ಕ್ರಮಗಳನ್ನು ಕೈಗೊಳ್ಳಲು ಕುಮ್ಮಕ್ಕು ಕೊಡುವಂತಿದೆ. ಒಂದು ರೀತಿಯಲ್ಲಿ ನೋಡಿದರೆ, ಹಣದುಬ್ಬರವನ್ನು ಎದುರಿಸುವ ಹೆಸರಲ್ಲಿ ಸರ್ಕಾರವೇ ಈ ಬಿಕ್ಕಟ್ಟನ್ನು ಸೃಷ್ಟಿಸಿದೆ.

ಬಡ್ಡಿದರ ಹೆಚ್ಚಳವು ಹಣದುಬ್ಬರಕ್ಕೆ ಉತ್ತರವಲ್ಲ ಎಂಬುದನ್ನು ಅಮೆರಿಕದಲ್ಲಿನ ಇತ್ತೀಚಿನ ಮನೆ ಬಾಡಿಗೆಗಳು ಸಾಬೀತು ಪಡಿಸುತ್ತದೆ. ಬಡ್ಡಿದರಗಳನ್ನು ಹೆಚ್ಚಿಸಿದಾಗ, ಮನೆ ಖರೀದಿ ಮಾಡುವುದು ಕಡಿಮೆಯಾಗುವುದರಿಂದ ಮನೆಗಳ ಬೆಲೆಗಳು ಕುಸಿಯುತ್ತವೆ, ಹೀಗೆನೇ ಇತರ ಬೆಲೆಗಳು ಕುಸಿಯುತ್ತವೆ,. ಆ ಮೂಲಕ ಹಣದುಬ್ಬರ ನಿಯಂತ್ರಣಕ್ಕೆ ಬರುತ್ತದೆ, ಎಂಬ ನಿರೀಕ್ಷೆ ಸರಕಾರದ್ದು. ಆದರೆ ಅದೇ ಅವಧಿಯಲ್ಲಿ ಮನೆ ಬಾಡಿಗೆಗಳು ವೇಗವಾಗಿ ಏರಿವೆ. ಬಡ್ಡಿದರ ಹೆಚ್ಚಳದ ನಂತರ, ಮನೆ ಬಾಡಿಗೆಗಳು ಶೇಕಡಾ 5 ಕ್ಕಿಂತ ಕಡಿಮೆ ಇದ್ದುದು ಈಗ ಅದು ಸುಮಾರು 8 ಶೇಕಡಾಕ್ಕೆ ಏರಿತು. ವಸತಿ ಬಾಡಿಗೆ ಸೂಚ್ಯಂಕವು US ಗ್ರಾಹಕ ಬೆಲೆ ಸೂಚ್ಯಂಕದ 32 ಶೇಕಡಾವನ್ನು ಹೊಂದಿರುವುದರಿಂದ, ಹಣದುಬ್ಬರವು ಏರುತ್ತಲೇ ಇರುತ್ತದೆ.

ಡಾಲರ್ ಯಜಮಾನಿಕೆಗೆ ಸವಾಲು

ಈ ಬ್ಯಾಂಕುಗಳ ಸರಣಿ ವೈಫಲ್ಯಗಳು ಅಮೆರಿಕದ, ಯುರೋಪಿನ ರಾಜಕೀಯ ಮತ್ತು ಹಣಕಾಸು ನೀತಿಗಳ ನೇರಫಲ. ಒಂದು ಕಡೆ ಉಕ್ರೇನ್ ಯುದ್ಧ ಮತ್ತು ಜನತೆಯ ಮೇಲೆ ಬ್ಯೂಮರಾಂಗ್ ಆದ ರಶ್ಯಾದ ಮೇಲಿನ ಆರ್ಥಿಕ ದಿಗ್ಬಂಧನಗಳ ಪರಿಣಾಮವಾಗಿ ಅಮೆರಿಕ ಮತ್ತು ಯುರೋಪಿನ ಜನತೆ ತೀವ್ರ ಬೆಲೆಏರಿಕೆ, ಹಣದುಬ್ಬರ, ಜೀವನಾವಶ್ಯಕ ವಸ್ತುಗಳ ಕೊರತೆ ಎದುರಿಸುತ್ತಿದ್ದಾರೆ. ಇನ್ನೊಂದು ಕಡೆ ಈ ಹಣದುಬ್ಬರವನ್ನು ನಿಯಂತ್ರಿಸಲು ಸಿದ್ಧೌಷಧವೆಂದು ಸರಕಾರಗಳೂ, ಬ್ಯಾಂಕುಗಳೂ ಭಾವಿಸಿರುವ ಬಡ್ಡಿದರ ಏರಿಕೆ ಆ ಕೆಲಸ ಮಾಡುತ್ತಿಲ್ಲ. ಬದಲಾಗಿ ಇಡೀ ಹಣಕಾಸು ವ್ಯವಸ್ಥೆಯನ್ನು ಏರುಪೇರು ಮಾಡುತ್ತಿವೆ. ಈ ಸನ್ನಿವೇಶದಲ್ಲಿ ತೀವ್ರ ಬೆಲೆ ನಿಯಂತ್ರಣ ಕ್ರಮಗಳು ಅಥವಾ ಜನತೆಗೆ ಪರಿಹಾರ ಮತ್ತು ಸೂಪರ್ ಲಾಭ ಮಾಡುವ ವಲಯಗಳ ಮೇಲೆ ಸೂಪರ್ ತೆರಿಗೆ ಮಾತ್ರ ಪರಿಸ್ಥಿತಿಯನ್ನು ಇನ್ನಷ್ಟು ವಿಕೋಪಕ್ಕೆ ಹೋಗದಂತೆ ತಡೆಯಬಲ್ಲವು. ಆದರೆ ಇದನ್ನು ಈ ಸರಕಾರಗಳು ಮಾಡುವ ಸಾಧ್ಯತೆ ತುಂಬಾ ಕಡಿಮೆ.

ಇದರ ಜತೆಗೆ ಡಾಲರ್ ಯಜಮಾನಿಕೆಗೆ, ತೀವ್ರ ಪ್ರಾಬಲ್ಯಕ್ಕೆ ಈಗಾಗಲೇ ಇರುವ ಸವಾಲು, ಉಕ್ರೇನ್ ಯುದ್ಧಾನಂತರದ ಪರಿಸ್ಥಿತಿಯಲ್ಲಿ ತೀವ್ರವಾಗಿ ಹೆಚ್ಚಲಿದೆ. ಈಗಾಗಲೇ ರಶ್ಯಾ, ಚೀನಾ ಮತ್ತು ಮೂರನೆಯ ಜಗತ್ತಿನ ದೇಶಗಳು ಸಾಧ್ಯವಿದ್ದಲೆಲ್ಲ ಡಾಲರ್ ಗೆ ಬದಲಿ ಹುಡುಕಿಕೊಳ್ಳುತ್ತಿದ್ದಾರೆ. ಜಾಗತಿಕ ವ್ಯಾಪಾರಕ್ಕೆ, ಕರೆನ್ಸಿ ವಿನಿಮಯಕ್ಕೆ, ಹೂಡಿಕೆಗೆ ಏಕಮಾತ್ರ ಮಾಧ್ಯಮವಾಗಿರುವ ಡಾಲರ್ ನ ಸ್ಥಾನಕ್ಕೆ ಚ್ಯುತಿ ಬಂದರೆ, ಅಮೆರಿಕ, ಯುರೋಪುಗಳ ಆರ್ಥಿಕ ಬಿಕ್ಕಟ್ಟು ಇನ್ನಷ್ಟು ತೀವ್ರವಾಗಲಿದೆ. ಅದು ಆದರೆ 2008ರಂತಹ ಮಹಾ ಆರ್ಥಿಕ ಕುಸಿತದ ಸಾಧ್ಯತೆ ಖಂಡಿತ ಇದೆ.

ಸಿಪಿಐ(ಎಂ) ರಾಜ್ಯ ಕಛೇರಿ ಮೇಲೆ ದಾಳಿ, ಪಕ್ಷದ 700ಕ್ಕೂ ಹೆಚ್ಚು ಕಛೇರಿಗಳಿಗೆ ಬೆಂಕಿ ಹಚ್ಚಿ ಸುಟ್ಟರು ಅಥವಾ ಹೊಡೆದು ಉರುಳಿಸಿದರು, ಮತ್ತೆ ಕೆಲವು ಕಛೇರಿಗಳನ್ನು ಆಡಳಿತ ಪಕ್ಷದವರು ಬಲವಂತವಾಗಿ ಆಕ್ರಮಿಸಿಕೊಂಡರು. ವಿರೋಧ ಪಕ್ಷಗಳ ಕಾರ್ಯಕರ್ತರು ಮತ್ತು ಬೆಂಬಲಿಗರ ಮನೆಗಳಿಗೆ ಹಾಗೂ ಅಂಗಡಿಗಳಿಗೆ ಬೆಂಕಿ ಹಚ್ಚಿದರು, ಜಮೀನುಗಳಲ್ಲಿ ಬೆಳೆದ ಬೆಳೆ ನಾಶ ಮಾಡಿದರು, ಬೆಳೆಗಳಿಗೆ ಬೆಂಕಿ ಹಚ್ಚಿದರು, 9,000ಕ್ಕೂ ಹೆಚ್ಚು ದಾಳಿ ನಡೆಸಿದರು, ಶಾಸಕರಾಗಿ ಚುನಾಯಿತರಾದ ಸಿಪಿಎಂನ ಶೈಲೇಂದ್ರನಾಥ್ ಅವರ ರಬ್ಬರ್ ತೋಟಕ್ಕೆ ಬೆಂಕಿ ಇಟ್ಟು ಸುಟ್ಟುಹಾಕಿದರು, ಸರ್ಕಾರಿ ನೌಕರರು ಮತ್ತು ಪತ್ರಕರ್ತರ ಮೇಲೆ ಅಮಾನುಷವಾಗಿ ಹಲ್ಲೆ ನಡೆಸಿದರು, ಒಂದೆರಡು ದಿನಗಳಲ್ಲೇ 24 ಕೊಲೆಗಳಾದವು, ಹಲ್ಲೆಗೊಳಗಾದ 3,713 ಪುರುಷರು ಮತ್ತು ಮಹಿಳೆಯರು ತೀವ್ರವಾಗಿ ಗಾಯಗೊಂಡರು,...

ಚುನಾವಣೋತ್ತರ ಹಿಂಸಾಚಾರ: ಉರಿಯುತ್ತಿರುವ ತ್ರಿಪುರ

ಚುನಾವಣಾ ಫಲಿತಾಂಶ ಹೊರಬಂದ ಕ್ಷಣದಿಂದಲೇ ತ್ರಿಪುರಾ ರಾಜ್ಯದಲ್ಲಿ ಬಿಜೆಪಿ ಆಡಳಿತದ ಬೆಂಬಲದೊಂದಿಗೆ ಬಿಜೆಪಿ ಗೂಂಡಾಗಳು ನಡೆಸಿರುವ ಕ್ರೂರ ದಾಳಿಗಳ ಕೆಲವು ಚಿತ್ರಣಗಳಿವು. ಚುನಾವಣಾ ಪಲಿತಾಂಶ ಹೊರಬರುತ್ತಿದ್ದಂತೆ ಬಿಜೆಪಿ ಗೂಂಡಾಗಳು ಸಿಪಿಐ(ಎಂ), ಇತರ ಎಡ ಪಕ್ಷಗಳ ಮತ್ತು ವಿರೋಧ ಪಕ್ಷಗಳ ಕಾರ್ಯಕರ್ತರು ಮತ್ತು ಬೆಂಬಲಿಗರ ಮೇಲೆ ವ್ಯಾಪಕ ದಾಳಿ ನಡೆಸಿದ್ದಾರೆ. ಇಂತಹ ಘಟನೆಗಳು ತ್ರಿಪುರಾದಾದ್ಯಂತ ಪ್ರತಿನಿತ್ಯ ನಡೆಯುತ್ತಿರುವ ಬಗ್ಗೆ ವರದಿಗಳು ಬರುತ್ತಿವೆ.

ಬಿಜೆಪಿ ಮತಗಳು ಮತ್ತು ಸ್ಥಾನಗಳಲ್ಲಿ ಇಳಿಕೆ

ತ್ರಿಪುರಾದಲ್ಲಿ ವಿಧಾನಸಭೆಗೆ ಫೆಬ್ರವರಿ 16 ರಂದು ಮತದಾನ ನಡೆದು ಮಾರ್ಚ್ 2 ರಂದು ಫಲಿತಾಂಶ ಪ್ರಕಟವಾಯಿತು. ಒಟ್ಟು 60 ಸ್ಥಾನಗಳಲ್ಲಿ ಬಿಜೆಪಿ 32ರಲ್ಲಿ ಮತ್ತು ಅದರ ಮಿತ್ರ ಪಕ್ಷ ಒಂದರಲ್ಲಿ ಗೆಲುವು ಸಾಧಿಸಿತು. (ಬಿಜೆಪಿ ಮೈತ್ರಿಕೂಟ ಪಡೆದ ಮತಗಳು ಶೇ. 40.33). ಸಿಪಿಐ(ಎಂ) 11 ಸ್ಥಾನಗಳು (ಶೇ. 24.62 ಮತಗಳು) ಮತ್ತು ಮೈತ್ರಿ ಪಕ್ಷ ಕಾಂಗ್ರೆಸ್ 3 ಸ್ಥಾನಗಳನ್ನು (ಶೇ. 8.56 ಮತಗಳು) ಪಡೆದವು. ಸಿಪಿಐ(ಎಂ)–ಕಾಂಗ್ರೆಸ್ ಮೈತ್ರಿಕೂಟ ಶೇ.35.46 ಮತಗಳನ್ನು ಪಡೆದಿವೆ.



ಹೊಸದಾಗಿ ರಚನೆಯಾದ ತಿಪ್ರಾ ಮೋಥಾ ಶೇ. 19ರಷ್ಟು ಮತಗಳನ್ನು ಪಡೆದು 13 ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ. ಕಳೆದ ವಿಧಾನಸಭಾ ಚುನಾವಣೆಗಿಂತ ಬಿಜೆಪಿಯ ಮತಗಳು ಶೇ. 11ರಷ್ಟು ಕಡಿಮೆಯಾಗಿದೆ. ಮತ್ತು ಅದು ಪಡೆದ ಸ್ಥಾನಗಳಲ್ಲಿ 11 ಸ್ಥಾನಗಳ ಇಳಿಕೆಯಾಗಿದೆ. ಉಪ ಮುಖ್ಯಮಂತ್ರಿ ಜಿಷ್ಣು ದೇವ್ ವರ್ಮಾ ಚುನಾವಣೆಯಲ್ಲಿ ಸೋತಿದ್ದಾರೆ. ಇದರಿಂದ ಕುಪಿತಗೊಂಡ ಬಿಜೆಪಿ ಸದಸ್ಯರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರನ್ನು ಗುರಿಯಾಗಿಸಿಕೊಂಡು ದಾಳಿ ನಡೆಸುತ್ತಿದ್ದಾರೆ.

ಕ್ರಮ ಕೈಗೊಳ್ಳದ ಪೊಲೀಸರು

ಇಷ್ಟೊಂದು ದಾಳಿ ನಡೆದರೂ ರಾಜ್ಯ ಸರ್ಕಾರ, ರಾಜ್ಯದ ಪೊಲೀಸರು ಅಪರಾಧಿಗಳ ವಿರುದ್ಧ ಕಾನೂನು ಕ್ರಮ ತೆಗೆದುಕೊಂಡಿಲ್ಲ. ಯಾರನ್ನೂ ಬಂಧಿಸಲಿಲ್ಲ. ಇದಕ್ಕೆ ಬದಲಾಗಿ, ವಿರೋಧ ಪಕ್ಷದ ನೂರಾರು ಕಾರ್ಯಕರ್ತರು, ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯರಾದ ಮಾಣಿಕ್ ಸರ್ಕಾರ್ ಮತ್ತು ರಾಜ್ಯ ಕಾರ್ಯದರ್ಶಿ ಜಿತೇಂದ್ರ ಚೌಧರಿ ಸೇರಿದಂತೆ ಪಕ್ಷದ ಹಲವು ನಾಯಕರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಲಾಗಿದೆ. ವಿವೇಚನಾ ರಹಿತ ದಾಳಿಗಳು ಸಾಮಾನ್ಯ ಜನರ ಜೀವನೋಪಾಯದ ಮೇಲೆ ಕೆಟ್ಟ ಪರಿಣಾಮ ಬೀರಿದೆ. ಗ್ರಾಮೀಣ ಪ್ರದೇಶದ ಜನರಿಗೆ MGNREGA ಕೆಲಸಗಳನ್ನು ನಿರಾಕರಿಸಲಾಗುತ್ತಿದೆ. ಎಡ ಪಕ್ಷಗಳ ಆಡಳಿತದ ಅವಧಿಯಲ್ಲಿ ಮಂಜೂರಾದ ಯೋಜನೆಗಳು ಮತ್ತು ಪ್ರತಿಯೊಂದು ಸಾಂವಿಧಾನಿಕ ಸಂಸ್ಥೆಗಳು ದಾಳಿಗೆ ಒಳಗಾಗಿವೆ.

ತ್ರಿಪುರಾದಲ್ಲಿ ವ್ಯಾಪಕವಾದ ಕ್ರೌರ್ಯಗಳನ್ನು ನಡೆಸಿ, ಜನರ ನಡುವೆ ದ್ವೇಷ ಬಿತ್ತುವ ಮೂಲಕ ಬಿಜೆಪಿ ಮತ್ತೆ ಗೆದ್ದಿದೆ. ಚುನಾವಣೆಯ ನಂತರವೂ ಸಂಘಪರಿವಾರದ ಪುಂಡರು ಅಮಾನುಷ ಹಲ್ಲೆಗಳನ್ನು ನಡೆಸುತ್ತಿದ್ದಾರೆ. ಚುನಾವಣೆಗೂ ಮುನ್ನ ಬಿಜೆಪಿಯವರು ರಾಜ್ಯದಲ್ಲಿ ಅರಾಜಕತೆ ಸೃಷ್ಟಿಸಿ, ಮತದಾರರಿಗೆ ಬೆದರಿಕೆ ಹಾಕಿ ವಿರೋಧ ಪಕ್ಷಗಳನ್ನು ಚುನಾವಣಾ ಕೆಲಸದಲ್ಲಿ ಪಾಲ್ಗೊಳ್ಳದಂತೆ ಮಾಡಿದ್ದರು. ಮಾಜಿ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಸೇರಿದಂತೆ ಎಡರಂಗದ ನಾಯಕರು ಮತ್ತು ಕಾಂಗ್ರೆಸ್ ನಾಯಕರು ತೀವ್ರ ಬೆದರಿಕೆಯ ನಡುವೆಯೂ ಜನರ ನಡುವೆ ಹೋಗಿ ಚುವಾವಣಾ ಪ್ರಚಾರ ಮಾಡಿದರು.

ಈ ಎಲ್ಲಾ ಹಿಂಸಾಚಾರವನ್ನು ಬಿಜೆಪಿಯವರೇ ಸರ್ಕಾರಿ ಯಂತ್ರದ ಸ ಹಾ ಂ ು ದಿ ಂ ದ ನಡೆಸುತ್ತಿದ್ದಾರೆ. ಬಿಜೆಪಿಯ ರಾಷ್ಟ್ರೀಯ ನಾಯಕರು ಇದನ್ನು ಖಂಡಿಸಲು ಅಥವಾ ತಡೆಯಲು ಮುಂದಾಗದೆ ಈ ಹಿಂಸಾತ್ಮಕ ಉನ್ಮಾದವನ್ನು ಪ್ರಚೋದಿಸುತ್ತಿದ್ದಾರೆ.

ಮೊಟಕುಗೊಂಡ ಪ್ರಜಾಸತ್ತಾತ್ಮಕ ಪ್ರಕ್ರಿಯೆಗಳು ಮತ್ತು ಹಕ್ಕುಗಳು

2018 ರಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಾಗಿನಿಂದ ತ್ರಿಪುರಾ ಹಿಂಸಾಚಾರದ ಕೇಂದ್ರವಾಗಿದೆ. ಸಾಮಾನ್ಯ ಪ್ರಜಾಸತ್ತಾತ್ಮಕ ಪ್ರಕ್ರಿಯೆಗಳು ಮತ್ತು ಹಕ್ಕುಗಳನ್ನು ಮೊಟಕುಗೊಳಿಸಲಾಗಿದೆ. ಮತ್ತೆ ಚುನಾವಣೆಯಲ್ಲಿ ಗೆದ್ದ ನಂತರ ಬಿಜೆಪಿಯ ಅಬ್ಬರ ಹಲವು ಪಟ್ಟು ಹೆಚ್ಚಾಗಿದೆ. ಸಿಪಿಐ(ಎಂ)ನ ಮೂವರು ಸದಸ್ಯರ ನಿಯೋಗವು ಮುಖ್ಯ ಕಾರ್ಯದರ್ಶಿ ಜೆಕೆ ಸಿನ್ಹಾ ಅವರನ್ನು ಭೇಟಿ ಮಾಡಿ ಸಿಪಿಐ(ಎಂ) ಪಕ್ಷದ ಕಾರ್ಯಕರ್ತರು ರಾಜ್ಯಾದ್ಯಂತ ಆಡಳಿತಾರೂಢ ಬಿಜೆಪಿ ಬೆಂಬಲಿತ ಗೂಂಡಾಗಳಿಂದ ಎದುರಿಸುತ್ತಿರುವ ಹಿಂಸಾಚಾರದ ಕುರಿತು ದೂರು ಸಲ್ಲಿಸಿದ್ದಾರೆ. ನಿಯೋಗದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮತ್ತು ಹೊಸದಾಗಿ ಚುನಾಯಿತರಾದ ಶಾಸಕರಾದ ಸಿಪಿಐ(ಎಂ) ರಾಜ್ಯ ಸಮಿತಿ ಕಾರ್ಯದರ್ಶಿ ಜಿತೇಂದ್ರ ಚೌಧರಿ, ಎಡರಂಗದ ಸಂಚಾಲಕ ಮತ್ತು ಮಾಜಿ ಸಂಸದ ನಾರಾಯಣ್ ಕರ್ ಮತ್ತು ಮಾಜಿ ಶಿಕ್ಷಣ ಸಚಿವ ತಪನ್ ಚಕ್ರವರ್ತಿ ಅವರು ಮುಖ್ಯ ಕಾರ್ಯದರ್ಶಿ ಅವರಿಗೆ ಮನವಿ ಸಲ್ಲಿಸಿದ್ದಾರೆ. ಹಿಂಸಾಚಾರವನ್ನು ತಕ್ಷಣ ತಡೆಗಟ್ಟಲು ಮತ್ತು ಸಂತ್ರಸ್ತರ ಕುಟುಂಬಗಳಿಗೆ ಪರಿಹಾರವನ್ನು ಒದಗಿಸಲು ಕ್ರಮಗಳನ್ನು ಕೈಗೊಳ್ಳುವಂತೆ ಅವರು ಒತ್ತಾಯಿಸಿದ್ದಾರೆ. ಅಧಿಕಾರದಲ್ಲಿರುವ ಪಕ್ಷದ ನೇರ ಪ್ರಚೋದನೆ ಮತ್ತು ಏಕಕಾಲದಲ್ಲಿ ಕಾನೂನು ಸುವ್ಯವಸ್ಥೆ ಯಂತ್ರದ ಪಕ್ಷಪಾತದ ಪಾತ್ರದಿಂದಾಗಿ ಈ ಪರಿಸ್ಥಿತಿ ಉದ್ಭವಿಸಿದೆ ಎಂದು ಚೌಧರಿ ಆರೋಪಿಸಿದ್ದಾರೆ.

ಮಹಾರಾಷ್ಟ್ರದ ರೈತರ ಮತ್ತೊಂದು ಲಾಂಗ್ ಮಾರ್ಚ್–ಮತ್ತೊಂದು ಮಹತ್ವದ ವಿಜಯ



ಈರುಳ್ಳಿ ರೈತರಿಗೆ ಸಿಗುವ ಬೆಲೆಗಳಲ್ಲಿ ಭಾರೀ ಕುಸಿತದ ಹಿನ್ನೆಲೆಯಲ್ಲಿ ಮಹಾರಾಷ್ಟ್ರದ ರೈತರು ಈರುಳ್ಳಿಗೆ ಕನಿಷ್ಟ ಬೆಂಬಲ ಬೆಲೆ ಘೋಷಿಸಬೇಕೆಂಬ ಪ್ರಮುಖ ಬೇಡಿಕೆಯ ಜೊತೆಗೆ ತಮ್ಮ ಇತರ ಬೇಡಿಕೆಗಳನ್ನು ಮುಂದಿಟ್ಟು ಮಾರ್ಚ್ 12ರಿಂದ ನಾಶಿಕ್ ನಗರದಿಂದ ರಾಜ್ಯದ ರಾಜಧಾನಿ ಮುಂಬೈಯಲ್ಲಿರುವ ವಿಧಾನಸೌಧದತ್ತ ಇನ್ನೊಂದು ಲಾಂಗ್ ಮಾರ್ಚ್ ಆರಂಭಿಸಿದರು. ಐದು ವರ್ಷಗಳ ಹಿಂದೆ ಸುಮಾರು ಇದೇ ತಿಂಗಳಲ್ಲಿ ಮಹಾರಾಷ್ಟ್ರದ ರೈತರ ಲಾಂಗ್ ಮಾರ್ಚ್ ಮಹತ್ವದ ವಿಜಯ ಗಳಿಸಿ, ನಂತರ ದಿಲ್ಲಿಯಲ್ಲಿ ನಡೆದ ದೀರ್ಘ ಕದನಕ್ಕೆ ಮುನ್ನುಡಿಯಂತಾಗಿತ್ತು. ಈ ಬಾರಿಯೂ ರೈತರು ಇನ್ನೊಂದು ಮಹತ್ವದ ವಿಜಯಗಳಿಸಿದ್ದಾರೆ, ಅದೂ ಮುಂಬೈ ತಲುಪುವ ಮೊದಲೇ.

10,000ಕ್ಕೂ ಹೆಚ್ಚು ರೈತರು ಮಾರ್ಚ್ 12ರಂದು ನಾಶಿಕ್‌ನ ಕೇಂದ್ರ ಪ್ರದೇಶ ಡಿಂಡೋರಿ ಚೌಕದಲ್ಲಿ ಈರುಳ್ಳಿ, ಟೊಮೆಟೊ, ಬದನೆ, ಆಲೂಗೆಡ್ಡೆ ಮತ್ತು ಇತರ ತರಕಾರಿಗಳನ್ನು ರಸ್ತೆಗೆ ಚೆಲ್ಲಿ ತಮ್ಮ ಆಕ್ರೋಶ ವ್ಯಕ್ತಪಡಿಸುವುದರೊಂದಿಗೆ ಈ ಲಾಂಗ್‌ಮಾರ್ಚ್ ಆರಂಭಿಸಿದರು.

ಈರುಳ್ಳಿಗೆ ಕ್ವಿಂಟಾಲಿಗೆ 2000ರೂ. ಕ್ವಿಂಟಾಲಿಗೆ 600ರೂ.ಯಂತೆ ತಕ್ಷಣದ ಸಬ್ಸಿಡಿ ಹಾಗೂ ರಫ್ತು ಧೋರಣೆಗಳಲ್ಲಿ ಬದಲಾವಣೆಯ ಬೇಡಿಕೆ ಮಾತ್ರವಲ್ಲ, ಹತ್ತಿ, ಸೊಯಾಬೀನ್, ತೊಗರಿ, ಹೆಸರು ಕಾಳು, ಹಾಲು ಮತ್ತು ಹಿರ್ದಾಕ್ಕೂ ಕನಿಷ್ಟ ಬೆಂಬಲ ಬೆಲೆ ಘೋಷಿಸಬೇಕು, ರೈತಾಪಿ ಜನಗಳಿಗೆ ಸಂಪೂರ್ಣ ಸಾಲ ಮನ್ನಾ, ವಿದ್ಯುತ್ ಬಿಲ್ ಬಾಕಿಗಳ ಮನ್ನಾ ಮತ್ತು ಪ್ರತಿದಿನ 12 ಗಂಟೆಗಳ ವಿದ್ಯುತ್ ಪೂರೈಕೆ, ಅಕಾಲಿಕ ಮಳೆ ಮತ್ತು ಇತರ ನೈಸರ್ಗಿಕ ಕಾರಣಗಳಿಂದ ರೈತರಿಗಾಗಿರುವ ನಷ್ಟಗಳಿಗೆ ಸರಕಾರ ಮತ್ತು ವಿಮಾ ಕಂಪನಿಗಳಿಮದ ಪರಿಹಾರ, ಎಲ್ಲ ಅರಣ್ಯಭೂಮಿ, ಹುಲ್ಲುಗಾವಲು, ದೇವಸ್ಥಾನದ ಜಮೀನು, ಇನಾಂ, ಚಕ್ಫ್ ಮತ್ತು ಬೇನಾಮಿ ಜಮೀನಗಳ ಪಟ್ಟಾವನ್ನು ಅವನ್ನು ಸಾಗುವಳಿ ಮಾಡುತ್ತಿರುವವರ ಹೆಸರಿಗೆ ಕೊಡುವುದು ಇತ್ಯಾದಿ ರೈತರ ಬೇಡಿಕೆಗಳಷ್ಟೇ ಅಲ್ಲದೆ, ಪೆನ್ಶನ್ ಮೊತ್ತವನ್ನು 4000ರೂ. ವರೆಗೆ ಹೆಚ್ಚಿಸುವುದು, 2005ರ ನಂತರ ಸರ್ಕಾರೀ ಸೇವೆಗೆ ಸೇರಿದವರಿಗೆ ಹಳೆಯ ಪೆನ್ಶನ್ ಯೋಜನೆ, ಅರೆ ಅನುದಾನದ ಶಾಲೆಗಳಿಗೆ ಪೂರ್ಣ ಅನುದಾನ, ಕಾಂಟ್ರಾಕ್ಟ್ ಮತ್ತು ಸ್ಕೀಮ್ ಕೆಲಸಗಾರರನ್ನು ಸರಕಾರೀ ನೌಕರರೆಂದು ನಿಯಮಿತಗೊಳಿಸುವುದು, ಸರಕಾರೀ ಹುದ್ದೆಗಳಲ್ಲಿ ಆದಿವಾಸಿ ಹುದ್ದೆಗಳಲ್ಲಿರುವ ಬೋಗಸ್ ವ್ಯಕ್ತಿಗಳನ್ನು ತೆಗೆದು ಹಾಕಿ ನಿಜವಾದ ಆದಿವಾಸಿಗಳ ನೇಮಕ ಸೇರಿದಂತೆ 15 ಅಂಶಗಳ ಬೇಡಿಕೆಯ ಮೇಲೆ ಈ ಪಾದಯಾತ್ರೆ ಆರಂಭವಾಯಿತು. ಅಖಿಲ ಭಾರತ ಕಿಸಾನ್ ಸಭಾದ ಅಖಿಲ ಭಾರತ ಅಧ್ಯಕ್ಷರಾದ ಅಶೋಕ ಧವಳೆ, ಮತ್ತು ಮಹಾರಾಷ್ಟ್ರದ ಎಐಕೆಎಸ್ ಮುಖಂಡರಾದ ಜೆ.ಪಿ. ಗವಿತ್, ಡಾ.ಅಜಿತ್ ನವಳೆ, ಡಾ. ಉದಯ್ ನಾರ್ಕರ್ ಮತ್ತಿತರರು ಇದರ ನೇತೃತ್ವ ವಹಿಸಿದ್ದರು.

ಮಾರ್ಚ್ 16ರಂದು, ಲಾಂಗ್ ಮಾರ್ಚ್‌ನ ಐದನೇ ದಿನ ಮಹಾರಾಷ್ಟ್ರದ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಗಳ ಆಹ್ವಾನದ ಮೇರೆಗೆ, 16 ಸದಸ್ಯರ ಎಐಕೆಎಸ್ ನಿಯೋಗವು ಮುಂಬೈನ ವಿಧಾನಸಭೆ ಆವರಣದಲ್ಲಿ ರಾಜ್ಯ ಸರ್ಕಾರದೊಂದಿಗೆ ಎರಡೂವರೆ ಗಂಟೆಗಳ ಚರ್ಚೆ ನಡೆಸಿತು. ಇದರಲ್ಲಿ 6 ಸಚಿವರು ಮತ್ತು ಹಲವಾರು ಸಂಬಂಧಿಸಿದ ಇಲಾಖೆಗಳ ಕಾರ್ಯದರ್ಶಿಗಳು ಉಪಸ್ಥಿತರಿದ್ದರು. ರೈತರ ಬೇಡಿಕೆಗಳ 15 ಅಂಶಗಳ ಚಾರ್ಟರ್‌ಗೆ ರಾಜ್ಯ ಸರ್ಕಾರ ಒಪ್ಪಿಕೊಳ್ಳುವ ಸಂಕೇತ ದೊರೆಯಿತು.

ಆದರೆ ಈ ಸಭೆಯ ನಿರ್ಣಯಗಳ ಸಾರಾಂಶವನ್ನು ವಿಧಾನಸಭೆಯಲ್ಲಿ ಮಂಡಿಸುವ ವರೆಗೆ ಮತ್ತು ಅವುಗಳ ಅನುಷ್ಠಾನದ ಬಗ್ಗೆ ಸೂಚನೆಗಳನ್ನು ವಿಭಾಗೀಯ ಆಯುಕ್ತರು ಮತ್ತು ಜಿಲ್ಲಾಧಿಕಾರಿಗಳಿಗೆ ಅಧಿಕೃತವಾಗಿ ಕಳುಹಿಸುವ ವರೆಗೆ, ಅದಾಗಲೇ 15,000ಕ್ಕಿಂತ ಹೆಚ್ಚು ರೈತರು ಆಗ ತಲುಪಿದ್ದ, ಮುಂಬೈ–ನಾಸಿಕ್ ಹೆದ್ದಾರಿಯಲ್ಲಿರುವ ಥಾಣೆ ಜಿಲ್ಲೆಯ ವಶಿಂದ್‌ನ ಈದ್ಗಾ ಮೈದಾನದಲ್ಲೇ ಠಿಕಾಣಿ ಹೂಡುತ್ತಾರೆ, ನಿರ್ಣಯಗಳ ಜಾರಿಯ ಸ್ಪಷ್ಟ ಕ್ರಮಗಳ ನಂತರವೇ ಲಾಂಗ್ ಮಾರ್ಚನ್ನು ಹಿಂತೆಗೆದುಕೊಳ್ಳಲಾಗುವುದು ಎಂದು ಸ್ಪಷ್ಟಪಡಿಸಿದರು.

ಮಾರ್ಚ್ 18 ರಂದು ಸರಕಾರ ರೈತರ ಎಲ್ಲ ಬೇಡಿಕೆಗಳನ್ನು ಒಪ್ಪಿಕೊಂಡು, ಅವನ್ನು ವಿಧಾನಸಭೆಯಲ್ಲಿ ಮಂಡಿಸಿ, ಸಂಬಂಧಿಸಿದ ಅಧಿಕಾರಿಗಳಿಗೆ ಅವುಗಳ ಜಾರಿಯ ಲಿಖಿತ ಆದೇಶಗಳನ್ನು ಗಳಿಸಿದೆ. ವಶಿಂದ್‌ನಲ್ಲಿ ರೈತರು ತಮ್ಮ ವಿಜಯೋತ್ಸವ ನಡೆಸಿದ್ದಾರೆ.





ದುಡಿಯುವ ವರ್ಗಗಳ ಘನತೆಯ ಬದುಕು ಮತ್ತು ಹಕ್ಕುಗಳಿಗಾಗಿ ಮತ್ತೊಂದು ಬೃಹತ್ ಮಜ್ದೂರ್–ಕಿಸಾನ್ ಸಂಘರ್ಷ ರ್‍ಯಾಲಿ: ಏಪ್ರಿಲ್ 5, 2023

ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ಅದಾನಿ ಮತ್ತು ಅಂಬಾನಿಯಂತಹ ತಮ್ಮ ಬಂಟರಿಗೆ 'ಅಮೃತಕಾಲ'ವನ್ನು ಖಚಿತಪಡಿಸಿಕೊಳ್ಳಲು ಕಾರ್ಮಿಕರು ಮತ್ತು ರೈತರನ್ನು ಶೋಷಣೆ ಮತ್ತು ಲೂಟಿ ಮಾಡಲು ಹೊರಟಿದೆ ಎಂದಿರುವ ಸಿಐಟಿಯು, ಅಖಿಲ ಭಾರತ ಕಿಸಾನ್ ಸಭಾ ಮತ್ತು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ ದೇಶದ ದುಡಿಯುವ ವರ್ಗಗಳ ಜನರು ಒಂದು ಘನತೆಯ ಬದುಕಿಗೆ ಆಗ್ರಹಿಸಿ ಏಪ್ರಿಲ್ 5ರಂದು ದಿಲ್ಲಿಯಲ್ಲಿ ನಡೆಯಲಿರುವ ಬೃಹತ್ ಮಜ್ದೂರ್–ಕಿಸಾನ್ ಸಂಘರ್ಷರ್‍ಯಾಲಿಯಲ್ಲಿ ಭಾಗವಹಿಸಬೇಕು ಎಂದು ಕರೆ ನೀಡಿವೆ. ಭಾರತದ ಜನತೆ ದುಡಿಮೆಗಾರರ ಈ ಘನತೆ ಮತ್ತು ಹಕ್ಕುಗಳ ಹೋರಾಟಕ್ಕೆ ಬೆಂಬಲ ನೀಡಬೇಕು, ಇದರಲ್ಲಿ ಭಾಗವಹಿಸಬೇಕು ಎಂದೂ ಅವು ಕರೆ ನೀಡಿವೆ.

ಉತ್ಪಾದನೆಯಲ್ಲಿ ತೊಡಗಿರುವ ವರ್ಗಗಳ ದೈನಂದಿನ ಬದುಕನ್ನು ಕಾರ್ಪೊರೇಟ್ ಪರ ನೀತಿಗಳು ಭಾರೀ ಹಣದುಬ್ಬರದ ಒತ್ತಡಕ್ಕೆ ತುತ್ತಾಗಿಸಿವೆ. ಎಲ್ಲಾ ಅಗತ್ಯ ವಸ್ತುಗಳ ಬೆಲೆಗಳು–ಅಕ್ಕಿ, ಗೋಧಿ, ಬೇಳೆಕಾಳುಗಳು, ಹಾಲು, ಮೊಸರು, ತರಕಾರಿಗಳು ಮತ್ತು ಮುಂತಾದವುಗಳು ಹೆಚ್ಚುವಂತೆ ಮಾಡಲಾಗಿದೆ. ಒಂದೆಡೆ ತುತ್ತತುದಿಗೇರಿರುವ ನಿರುದ್ಯೋಗದ ಸಮಸ್ಯೆ ಬಗ್ಗೆ ಸಂವೇದನಾಶೂನ್ಯವಾಗಿರುವ ಸರಕಾರ, ಇನ್ನೊಂದೆಡೆಯಲ್ಲಿ ಉದ್ಯೋಗದ ಕಾನೂನಾತ್ಮಕ ಖಾತ್ರಿ ನೀಡಿರುವ ಮನರೇಗ ಮುಂತಾದ ಯೋಜನೆಗಳನ್ನು ಕೈಬಿಡಲು ಮತ್ತು ಕಾರ್ಮಿಕರು ಪಡೆದುಕೊಂಡಿರುವ ಹಕ್ಕುಗಳೆಲ್ಲವನ್ನೂ ನಿರ್ಮೂಲ ಮಾಡಲು ಹಾಗೂ ಕಾರ್ಪೊರೇಟ್‌ಗಳಿಗೆ ಲಂಗುಲಗಾಮಿಲ್ಲದ ಲಾಭಗಳನ್ನು ಪೇರಿಸಿಕೊಳ್ಳುವ ವಾತಾವರಣವನ್ನು ನಿರ್ಮಾಣ ಮಾಡಲು ಸರ್ವಪ್ರಯತ್ನ ನಡೆಸುತ್ತಿದೆ.

ಮೋದಿ ಆಡಳಿತದ ಕಾರ್ಪೊರೇಟ್ ಕೃಷಿ ಪರ ನೀತಿಗಳು ರೈತರ ಎಲ್ಲಾ ಪದರಗಳಿಗೆ ಕೃಷಿಯನ್ನು ಅಸಾಧ್ಯಗೊಳಿಸುತ್ತಿದೆ. ಐತಿಹಾಸಿಕ ರೈತರ ಹೋರಾಟದ ಸಮಯದಲ್ಲಿ ಕನಿಷ್ಟ ಬೆಂಬಲ ಬೆಲೆಗಳಿಗೆ ಕಾನೂನಾತ್ಮಕ ಖಾತರಿ ಸೇರಿದಂತೆ ರೈತ ಸಂಘಟನೆಗಳಿಗೆ ನೀಡಿದ ಲಿಖಿತ ಭರವಸೆಗಳನ್ನು ಸಂಪೂರ್ಣವಾಗಿ ವಂಚಿಸಲಾಗಿದೆ.

ಆಹಾರ, ಆರೋಗ್ಯ ಮತ್ತು ಶಿಕ್ಷಣದ ಜನರ ಕಾನೂನಾತ್ಮಕ ಹಕ್ಕುಗಳನ್ನು ಮೊಟಕುಗೊಳಿಸಲಾಗುತ್ತಿದೆ. ಅದೇ ಸಮಯದಲ್ಲಿ ಎಲ್ಲಾ ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ಕಳಚಿ ಹಾಕಲಾಗುತ್ತಿದೆ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಮೊಟಕುಗೊಳಿಸಲಾಗುತ್ತಿದೆ. ಯುಎಪಿಎಯಂತಹ ಕಠೋರ ಕಾನೂನುಗಳ ಮೂಲಕ ಆಡಳಿತಾರೂಢರ ವಿರುದ್ಧದ ಎಲ್ಲಾ ಭಿನ್ನಾಭಿಪ್ರಾಯದ ಧ್ವನಿಗಳನ್ನು ಹತ್ತಿಕ್ಕಲಾಗುತ್ತಿದೆ. ಜನತೆಯ ನೈಜ ಬದುಕಿನ ಪ್ರಶ್ನೆಗಳಲ್ಲಿ ಜನರ ಒಗ್ಗಟ್ಟನ್ನು ವಿಭಜಿಸಲು ಆಡಳಿತಾರೂಢ ಆರೆಸ್ಸೆಸ್–ಬಿಜೆಪಿ ಕೋಮು ವಿಷವನ್ನು ಹರಡುತ್ತಿವೆ.

ಇಂತಹ ಸನ್ನಿವೇಶದಲ್ಲಿ ಸಿಐಟಿಯು, ಎಐಕೆಎಸ್ ಮತ್ತು ಎಐಎಡಬ್ಲ್ಯುಯು ನೇತೃತ್ವದಲ್ಲಿ ಭಾರತದ ಸಂಪತ್ತನ್ನು ಉತ್ಪಾದಿಸುವ ವರ್ಗಗಳು–ಕಾರ್ಮಿಕರು, ರೈತರು ಮತ್ತು ಕೃಷಿ ಕಾರ್ಮಿಕರು–ಜಂಟಿಯಾಗಿ ತಮ್ಮ ಅವಿರತ ಹೋರಾಟಗಳನ್ನು ಮತ್ತಷ್ಟು ತೀವ್ರಗೊಳಿಸಲು ನಿರ್ಧರಿಸಿದ್ದಾರೆ ಎಂದು ಈ ಮೂರು ಸಂಘಟನೆಗಳ ಮುಖಂಡರು ಒಂದು ಜಂಟಿ ಹೇಳಿಕೆಯಲ್ಲಿ ತಿಳಿಸಿವೆ.

ಸೆಪ್ಟೆಂಬರ್ 5, 2022 ರಂದು ದೆಹಲಿಯಲ್ಲಿ ನಡೆದ ಬೃಹತ್ ಸಮಾವೇಶದಲ್ಲಿ, ಆಹಾರ, ಆರೋಗ್ಯ, ಶಿಕ್ಷಣ, ಉದ್ಯೋಗ ಮತ್ತು ನ್ಯಾಯಯುತ ಮತ್ತು ಲಾಭದಾಯಕ ಬೆಲೆಗಳ ಮೂಲಭೂತ ಹಕ್ಕುಗಳನ್ನು ಖಚಿತಪಡಿಸಿಕೊಳ್ಳಲು ಜನಪರ ನೀತಿಗಳ ಬೇಡಿಕೆಗಳ ಮೇಲೆ ಈ ಸಮಸ್ಯೆಗಳನ್ನು ಜನರ ಬಳಿಗೆ ತೆಗೆದುಕೊಂಡು ಅವರನ್ನು ಸಜ್ಜುಗೊಳಿಸಲು ನಿರ್ಧರಿಸಲಾಯಿತು. ನಮ್ಮ ಉತ್ಪನ್ನಗಳಿಗೆ ಮತ್ತು ನಮ್ಮ ಕೆಲಸಕ್ಕೆ ನ್ಯಾಯಯುತ ಜೀವನ ವೇತನಕ್ಕಾಗಿ ಈ ಜಂಟಿ ಅಭಿಯಾನದ ಪರಾಕಾಷ್ಠೆಯಾಗಿ, 5 ಏಪ್ರಿಲ್ 2023 ರಂದು 'ಮಜ್ದೂರ್–ಕಿಸಾನ್ ಸಂಘರ್ಷ ರ್‍ಯಾಲಿ'ಯಲ್ಲಿ ದೆಹಲಿಗೆ ಬರುತ್ತಿದ್ದೇವೆ, ಘನತೆ ಮತ್ತು ಭದ್ರತೆಯ ಜೀವನ, ಪರಸ್ಪರ ಭಯ ಮತ್ತು ದ್ವೇಷವಿಲ್ಲದ ಜೀವನವನ್ನು ಒತ್ತಾಯಿಸುತ್ತೇವೆ ಎಂದು ಈ ಜಂಟಿ ಹೇಳಿಕೆ ಘೋಷಿಸಿದೆ.

ಇದು ಕಾರ್ಮಿಕರು ಮತ್ತು ರೈತರ ವಿವಿಧ ಜಂಟಿ ವೇದಿಕೆಗಳಲ್ಲಿ (ಕೇಂದ್ರ ಕಾರ್ಮಿಕ ಸಂಘಗಳ ಜಂಟಿ ವೇದಿಕೆ ಮತ್ತು ಸಂಯುಕ್ತ ಕಿಸಾನ್ ಮೋರ್ಚಾ) ನಮ್ಮ ನಿರಂತರ ಹೋರಾಟಗಳ ಮುಂದುವರಿಕೆಯಾಗಿದೆ. ಈ ಜಂಟಿ ಅಭಿಯಾನ ಮತ್ತು ಜನಾಂದೋಲನವು ಕಾರ್ಮಿಕರು, ರೈತರು ಮತ್ತು ಕೃಷಿ ಕಾರ್ಮಿಕರ ಜಂಟಿ ಹೋರಾಟಗಳನ್ನು ಮತ್ತಷ್ಟು ಕ್ರೋಢೀಕರಿಸುತ್ತದೆ ಮತ್ತು ಮುನ್ನಡೆಸುತ್ತದೆ.

ಏಪ್ರಿಲ್ 5, 2023ರಂದು ಮಜ್ದೂರ್ ಕಿಸಾನ್ ಸಂಘರ್ಷರ್‍ಯಾಲಿಯನ್ನು ಯಶಸ್ವಿಗೊಳಿಸಲು, ರಾಜ್ಯ, ಜಿಲ್ಲೆ ಮತ್ತು ಸ್ಥಳೀಯ ಮಟ್ಟದಲ್ಲಿ ಸಿದ್ಧತೆಗಳು ನಡೆಯುತ್ತಿವೆ. ಕರಪತ್ರಗಳ ವಿತರಣೆ, ಭಿತ್ತಿಪತ್ರಗಳು, ಗೋಡೆ ಬರಹ, ಗುಂಪು ಸಭೆಗಳು, ಜಾಥಾಗಳು ಮತ್ತು ಮೆರವಣಿಗೆಗಳ ಮೂಲಕ ದೇಶದಾದ್ಯಂತ ಬೃಹತ್ ಪ್ರಚಾರಗಳು ನಡೆಯುತ್ತಿವೆ. ಎಲ್ಲಾರೀತಿಯ ಪ್ರಚಾರದಲ್ಲಿ ಜನರು ಅಗಾಧ ಉತ್ಸಾಹದಿಂದ ಭಾಗವಹಿಸುತ್ತಿದ್ದಾರೆ.

5ನೇ ಸೆಪ್ಟೆಂಬರ್ 2018 ರಂದು ಈ ಮೂರು ಸಂಘಟನೆಗಳು ಜಂಟಿಯಾಗಿ ಸಂಘಟಿಸಿದ ಮೊದಲ ಮಜ್ದೂರ್, ಕಿಸಾನ್ ಸಂಘರ್ಷರ್‍ಯಾಲಿಗಿಂತ ಎಷ್ಟೋ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರು, ರೈತರು ಮತ್ತು ಕೃಷಿಕೂಲಿಕಾರರು ಈ ಭಾರಿಯ ಸಂಘರ್ಷ ರ್‍ಯಾಲಿಗೆ ಸಜ್ಜುಗೊಳ್ಳುತ್ತಿದ್ದಾರೆ ಎಂದು ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೇನ್, ಎಐಕೆಎಸ್ ಪ್ರಧಾನ ಕಾರ್ಯದರ್ಶಿ ವಿಜೂ ಕೃಷ್ಣನ್ ಮತ್ತು ಎಐಎಡಬ್ಲ್ಯುಯುನ ಪ್ರಧಾನ ಕಾರ್ಯದರ್ಶಿ ಬಿ. ವೆಂಕಟ್ ಸಹಿ ಮಾಡಿರುವ ಈ ಜಂಟಿ ಹೇಳಿಕೆ ತಿಳಿಸಿದೆ.

ಮಜ್ದೂರ್ ಕಿಸಾನ್ ಸಂಘರ್ಷ ರ್‍ಯಾಲಿಯ ಬೇಡಿಕೆಗಳು

1) ಸ್ಕೀಮ್ ಕಾರ್ಮಿಕರು ಸೇರಿದಂತೆ ಎಲ್ಲಾ ಕಾರ್ಮಿಕರಿಗೆ ಕನಿಷ್ಟ ವೇತನ ರೂ. 26,000 ಮತ್ತು ಪಿಂಚಣಿ ರೂ. 10,000 ಖಾತ್ರಿಪಡಿಸಬೇಕು; ಕಾಮಗಾರಿಗಳ ಗುತ್ತಿಗೆ ನೀಡುವುದು ಬೇಡ; ಅಗ್ನಿಪಥ್ ಯೋಜನೆಯನ್ನು ರದ್ದು ಮಾಡಬೇಕು.
2) ಖಾತರಿಪಡಿಸಿದ ಸಂಗ್ರಹಣೆಯೊಂದಿಗೆ ಎಲ್ಲಾ ಕೃಷಿ ಉತ್ಪನ್ನಗಳಿಗೆ ಎಂಎಸ್‌ಪಿ ಸಿ2+50% ಕನಿಷ್ಟ ಬೆಂಬಲ ಬೆಲೆಯ ಕಾನೂನಾತ್ಮಕ ಖಾತ್ರಿ ಒದಗಿಸಬೇಕು.
3) ಎಲ್ಲಾ ಬಡ ಮತ್ತು ಮಧ್ಯಮ ರೈತರು ಮತ್ತು ಕೃಷಿ ಕಾರ್ಮಿಕರಿಗೆ ಕೇಂದ್ರ ಸರ್ಕಾರದಿಂದ ಒಂದು ಬಾರಿಯ ಸಾಲ ಮನ್ನಾ; ಅವರಲ್ಲಿ 60 ವರ್ಷ ಮೇಲ್ಪಟ್ಟ ಎಲ್ಲರಿಗೂ ಪಿಂಚಣಿ.
4) ನಾಲ್ಕು ಕಾರ್ಮಿಕಸಂಹಿತೆಗಳು ಮತ್ತು ವಿದ್ಯುತ್ ತಿದ್ದುಪಡಿ ಮಸೂದೆ 2022ರ ರದ್ದತಿ
5) ಎಲ್ಲರಿಗೂ ಉದ್ಯೋಗ ಭದ್ರತೆ ಮತ್ತು ಆ ಕುರಿತು ಖಾತರಿ; ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗಖಾತರಿ ಯೋಜನೆಯನ್ನು ವಿಸ್ತರಿಸಬೇಕು ಮತ್ತು ಕೆಲಸದ ದಿನಗಳನ್ನು 200ಕ್ಕೆ ಹೆಚ್ಚಿಸಿ ದಿನಕ್ಕೆ ಕನಿಷ್ಟ ವೇತನ ರೂ.



600 ಮಾಡಬೇಕು; ಎಲ್ಲಾ ಬಾಕಿ ಕೂಲಿಗಳನ್ನು ಪಾವತಿಸಬೇಕು; ರಾಷ್ಟ್ರೀಯ ನಗರ ಉದ್ಯೋಗ ಖಾತರಿ ಕಾಯಿದೆಯನ್ನು ತರಬೇಕು.

6) ಸಾರ್ವಜನಿಕ ವಲಯದ ಘಟಕಗಳ ಮತ್ತು ಸಾರ್ವಜನಿಕ ಸೇವೆಗಳ ಖಾಸಗೀಕರಣವನ್ನು ನಿಲ್ಲಿಸಬೇಕು; ನ್ಯಾಷನಲ್ ಮಾನಿಟೈಸೇಶನ್ ಪೈಪ್‌ಲೈನ್ (ಎನ್‌ಎಂಪಿ) ರದ್ದಾಗಬೇಕು.
7) ಬೆಲೆ ಏರಿಕೆ ತಡೆಯಬೇಕು, ಆಹಾರ ಪದಾರ್ಥಗಳು ಮತ್ತು ಅಗತ್ಯ ವಸ್ತುಗಳ ಮೇಲೆ ಜಿಎಸ್‌ಟಿ ಹಿಂತೆಗೆದುಕೊಳ್ಳಬೇಕು; ಪೆಟ್ರೋಲ್/ಡೀಸೆಲ್/ಸೀಮೆಎಣ್ಣೆ ಅಡುಗೆ ಅನಿಲದ ಮೇಲೆ ಕೇಂದ್ರೀಯ ಅಬಕಾರಿ ಸುಂಕವನ್ನು ಗಣನೀಯವಾಗಿ ಇಳಿಸಬೇಕು; ಅಡುಗೆ ಅನಿಲ ಬೆಲೆ ಏರಿಕೆಯನ್ನು ಕೂಡಲೇ ಹಿಂಪಡೆಯಬೇಕು.
8) ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸಬೇಕು ಮತ್ತು 14 ಅಗತ್ಯ ವಸ್ತುಗಳನ್ನು ಸೇರಿಸಲು ಅದರ ವ್ಯಾಪ್ತಿಯನ್ನು ವಿಸ್ತರಿಸಬೇಕು; ಎಲ್ಲಾ ಆದಾಯ ತೆರಿಗೆ ಪಾವತಿಸಬೇಕಾಗಿರದ ಕುಟುಂಬಗಳಿಗೆ ಆಹಾರ ಮತ್ತು ಆದಾಯದ ಬೆಂಬಲವನ್ನು ಖಚಿತಪಡಿಸಬೇಕು.
9) ಅರಣ್ಯ ಹಕ್ಕು ಕಾಯಿದೆಯ ಕಟ್ಟುನಿಟ್ಟಿನ ಅನುಷ್ಠಾನ; ನಿವಾಸಿಗಳಿಗೆ ತಿಳಿಸದೆ ಅರಣ್ಯವನ್ನು ತೆರವುಗೊಳಿಸಲು ಕೇಂದ್ರ ಸರ್ಕಾರಕ್ಕೆ ಅನುಮತಿ ನೀಡುವ ಅರಣ್ಯ (ಸಂರಕ್ಷಣೆ) ಕಾಯಿದೆ ಮತ್ತು ನಿಯಮಗಳಿಗೆ ತಿದ್ದುಪಡಿಗಳನ್ನು ಹಿಂಪಡೆಯಬೇಕು.
10) ತಳಮಟ್ಟದಲ್ಲಿರುವ ವಿಭಾಗಗಳ ದಮನವನ್ನು ನಿಲ್ಲಿಸಬೇಕು ಮತ್ತು ಸಾಮಾಜಿಕ ನ್ಯಾಯವನ್ನು ಖಾತರಿಪಡಿಸಬೇಕು.
11) ಎಲ್ಲರಿಗೂ ಸಾರ್ವತ್ರಿಕ ಮತ್ತು ಗುಣಮಟ್ಟದ ಆರೋಗ್ಯಮತ್ತುಶಿಕ್ಷಣವನ್ನುಖಚಿತಪಡಿಸಬೇಕು; ಹೊಸ ಶಿಕ್ಷಣ ನೀತಿ(ಎನ್‌ಇಪಿ) 2020ನ್ನು ರದ್ದುಪಡಿಸಬೇಕು.
12) ಎಲ್ಲರಿಗೂ ವಸತಿಯನ್ನು ಖಾತ್ರಿಪಡಿಸಬೇಕು.
13) ಅತಿ ಶ್ರೀಮಂತರ ಮೇಲೆ ತೆರಿಗೆ ಹಾಕಬೇಕು; ಕಾರ್ಪೊರೇಟ್ ತೆರಿಗೆಯನ್ನು ಹೆಚ್ಚಿಸಬೇಕು; ಸಂಪತ್ತು ತೆರಿಗೆಯನ್ನು ಪರಿಚಯಿಸಬೇಕು.

'ಹಿಂದುಸ್ತಾನ್ ಸಮಾಚಾರ್' ಮೂಲಕ ದೂರದರ್ಶನ ಮತ್ತು ಆಕಾಶವಾಣಿಯನ್ನು ಮತ್ತಷ್ಟು ಕೋಮುವಾದೀಕರಿಸುವ ನಡೆ: ಪತ್ರಕರ್ತರ ಸಂಘಟನೆಗಳ ಖಂಡನೆ

ದೂರದರ್ಶನ ಮತ್ತು ಆಕಾಶವಾಣಿ ಎರಡನ್ನೂ ನಡೆಸುತ್ತಿರುವ 'ಪ್ರಸಾರ ಭಾರತಿ'ಯನ್ನು ಸುದ್ದಿಸಂಸ್ಥೆ 'ಹಿಂದುಸ್ತಾನ್ ಸಮಾಚಾರ್' ಮೂಲಕ ಆರೆಸ್ಸೆಸ್ ವಶಪಡಿಸಿಕೊಂಡಂತಾಗಿದೆ ಎಂದು ರಾಷ್ಟ್ರೀಯ ಪತ್ರಕರ್ತರ ಮೈತ್ರಿಕೂಟ(ಎನ್‌ಎಜೆ) ಮತ್ತು ದಿಲ್ಲಿ ಪತ್ರಕರ್ತರ ಸಂಘ(ಡಿಯುಜೆ) ಜಂಟಿ ಹೇಳಿಕೆಯಲ್ಲಿ ತೀವ್ರ ಕಳವಳ ವ್ಯಕ್ತಪಡಿಸಿವೆ. ದೂರದರ್ಶನ ಮತ್ತು ಆಕಾಶವಾಣಿಗೆ ಸುದ್ದಿ ಒದಗಿಸುತ್ತಿದ್ದ ಪಿಟಿಐ ಈಗ ರಾಷ್ಟ್ರೀಯ ಸುದ್ದಿ ಸಂಸ್ಥೆ ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾ (ಪಿಟಿಐ) ಬದಲಿಗೆ ಸುದ್ದಿ ಪೂರೈಸಲು ಇಲ್ಲಿಯವರೆಗೆ ಹೆಣಗಾಡುತ್ತಿದ್ದ ಈ 'ಹಿಂದೂಸ್ತಾನ್ ಸಮಾಚಾರ್'ನೊಂದಿಗೆ ಈಗ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಹೇಳಿಕೆ ಖೇದ ವ್ಯಕ್ತಪಡಿಸಿದೆ.

ಇದು ಒಂದು ಕಾಲದಲ್ಲಿ ಪ್ರಧಾನ ಸುದ್ದಿ ಸಂಸ್ಥೆಗಳಾದ ಪಿಟಿಐ ಮತ್ತು ಯುನೈಟೆಡ್ ನ್ಯೂಸ್ ಆಫ್ ಇಂಡಿಯಾ(ಯುಎನ್‌ಐ) ಅನ್ನು ನಗಣ್ಯಗೊಳಿಸುವ ನಡೆ ಎಂದಿರುವ ಎನ್‌ಎಜೆ ಹಾಗೂ ಡಿಯುಜೆ, ಇದು ಆಳುವ ಪಕ್ಷಕ್ಕೆ ಸರಿಹೊಂದುವಂತೆ ಭಾರತದಲ್ಲಿ ಸುದ್ದಿಗಳನ್ನು ಕೇಸರಿಮಯಗೊಳಿಸುತ್ತದೆ ಮತ್ತು ತಟಸ್ಥ ಮತ್ತು ಸ್ವತಂತ್ರ ಪತ್ರಿಕೋದ್ಯಮವನ್ನು ಕೊಲ್ಲುತ್ತದೆ ಎಂದು ಹೇಳಿವೆ.

ಪ್ರಸ್ತುತ ಆಡಳಿತದಲ್ಲಿ ಪ್ರಾಬಲ್ಯ ಹೊಂದಿರುವ ಆರ್‌ಎಸ್‌ಎಸ್ ಸಿದ್ಧಾಂತದ ಪರವಾಗಿ ಸಮ್ಮತಿಯನ್ನು ಉತ್ಪಾದಿಸುವ ಉದ್ದೇಶದಿಂದ 1948ರಲ್ಲಿ ಹಿಂದೂಸ್ತಾನ್ ಸಮಾಚಾರ್ ಅನ್ನು ಹುಟ್ಟು ಹಾಕಲಾಯಿತು.

ದೂರದರ್ಶನ ಮತ್ತು ಆಕಾಶವಾಣ 'ರಾಷ್ಟ್ರೀಯ ಮತ್ತು ರಾಜ್ಯ ರಾಜಧಾನಿಗಳಲ್ಲಿ ತಮ್ಮದೇ ಆದ ವರದಿಗಾರರನ್ನು ಹೊಂದಿದ್ದು, ಅವರಿಗೆ ಪಿಟಿಐ ಮತ್ತು ಯುಎನ್‌ಐ ಭಾರತ ಮತ್ತು ವಿದೇಶಗಳಿಂದ ಹೆಚ್ಚಿನ ಪ್ರಮಾಣದ ಸುದ್ದಿ ಸಂಗ್ರಹದಿಂದ ನೆರವಾಗುತ್ತಿದ್ದವು. ಆದಾಗ್ಯೂ ಪ್ರಸ್ತುತ ಸರ್ಕಾರವು ಅಧಿಕಾರಕ್ಕೆ ಬಂದ ನಂತರ ಪರಿಸ್ಥಿತಿಯು ಹಂತ ಹಂತವಾಗಿ ಬದಲಾಗಿದೆ, ಈ ಸುದ್ದಿಸಂಸ್ಥೆಗಳಿಗೆ ಷರತ್ತುಗಳನ್ನು ವಿಧಿಸುವ ಪ್ರಯತ್ನಗಳು ನಡೆದಿವೆ. ಪಿಟಿಐಗೆ ಪ್ರಸಾರ ಭಾರತಿಯ ಚಂದಾದಾರಿಕೆಯನ್ನು ನಿಲ್ಲಿಸಲಾಯಿತು. ಯುಎನ್‌ಐ ಅನ್ನು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸಲಾಯಿತು. ಇದರಿಂದ ಅದರ ಹಣಕಾಸು ಸ್ಥಿತಿ ಅಸ್ತವ್ಯಸ್ತವಾಗಿದೆ ಮತ್ತು ಅನೇಕ ಪತ್ರಕರ್ತರು ತಮ್ಮ ಉದ್ಯೋಗವನ್ನು ಕಳೆದುಕೊಂಡಿದ್ದಾರೆ ಮತ್ತು ಕೆಲವರು ಅಲ್ಪ ಸಂಬಳಕ್ಕೆ ಕೆಲಸ ಮಾಡುತ್ತಿದ್ದಾರೆ.

ಈ ನಡೆಗಳು ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ರಾಜಕೀಯಕ್ಕೆ ಮತ್ತೊಂದು ಸವಾಲು ಎಂದು ಆಗಸ್ಟ್ 16ರಂದು ನೀಡಿರುವ ಜಂಟಿ ಹೇಳಿಕೆಯಲ್ಲಿ ಎನ್.ಎ.ಜೆ. ಅಧ್ಯಕ್ಷ ಎಸ್.ಕೆ.ಪಾಂಡೆ, ಡಿಯುಜೆ ಪ್ರಧಾನ ಕಾರ್ಯದರ್ಶಿ ಸುಜಾತಾ ಮಧೋಕ್ ಮತ್ತು ಎನ್‌ಎಜೆ ಪ್ರಧಾನ ಕಾರ್ಯದರ್ಶಿ ಎನ್.ಕೊಂಡಯ್ಯ ಹೇಳಿದ್ದಾರೆ.

ಹಿಂದೂಸ್ತಾನ್ ಸಮಾಚಾರ್ ಎಂಬ ಬಹುಭಾಷಾ ಸುದ್ದಿ ಸಂಸ್ಥೆಯನ್ನು 1948 ರಲ್ಲಿ ಹಿರಿಯ ಆರ್‌ಎಸ್‌ಎಸ್ ಪ್ರಚಾರಕ್ ಮತ್ತು ವಿಶ್ವ ಹಿಂದೂ ಪರಿಸತ್‌ನ ಸಹ ಸಂಸ್ಥಾಪಕ ಶಿವರಾಮ್ ಶಂಕರ್ ಆಪ್ಟೆ ಅವರು ಆರ್‌ಎಸ್‌ಎಸ್ ಸಿದ್ಧಾಂತಿ ಎಂ.ಎಸ್. ಗೋಳ್ವಾಲ್ಕರ್ ಸ್ಥಾಪಿಸಿದ್ದರು. ಹೇಗಾದರೂ ಬದುಕುಳಿಯಲು ಒದ್ದಾಡುತ್ತಿದ್ದ ಈ ಹಿಂದುಸ್ತಾನ್ ಸಮಾಚಾರ್, ಮೋದಿ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದಲೂ, ನಿಯಮಿತ ಸರ್ಕಾರಿ ಜಾಹೀರಾತುಗಳು ಮತ್ತು ಇತರ ರೀತಿಯ ಕೃಪಾಪೋಷಣೆಗಳ ಫಲಾನುಭವಿಯಾಗಿದೆ. ಈಗ ಅದಕ್ಕೆ ರಾಷ್ಟ್ರಕ್ಕೆ ಪ್ರಾಥಮಿಕ ಸುದ್ದಿ ಪೂರೈಕೆದಾರನ ಪಾತ್ರವನ್ನು ನೀಡುವ ನಡೆಯು ಭಾರತೀಯ ಸಮಾಜ ಮತ್ತು ರಾಜಕೀಯವನ್ನು ಮತ್ತಷ್ಟು ಕೇಸರೀಕರಿಸುತ್ತದೆ, ಕೋಮುವಾದೀಕರಿಸುತ್ತದೆ ಮತ್ತು ಧ್ರುವೀಕರಣಗೊಳಿಸುತ್ತದೆ, ಇದು ಆಳುವ ಪಕ್ಷಕ್ಕೆ ವಿರುದ್ಧವಾಗಿರುವ ರಾಜಕೀಯ ಪಕ್ಷಗಳಿಗೂ ಗಂಭೀರ ಅಪಾಯವಾಗಿದೆ ಎಂದು ಈ ಜಂಟಿ ಹೇಳಿಕೆ ಅಭಿಪ್ರಾಯ ಪಟ್ಟಿದೆ.

ನೈಸರ್ಗಿಕ ಸಂಪನ್ಮೂಲಗಳ ಮೇಲೆ ಹತೋಟಿಯ ಪ್ರಯತ್ನದಲ್ಲಿ ಸಾಮ್ರಾಜ್ಯಶಾಹಿಗೆ ಪೀಕಲಾಟ



ಮುಂದುವರೆದ ಬಂಡವಾಳಶಾಹಿ ದೇಶಗಳು ಉತ್ಪಾದಿಸಲು ಸಾಧ್ಯವಾಗದ ಮತ್ತು ತಮಗೆ ಅಗತ್ಯವಿರುವ ಸರಕುಗಳು, ಸಂಪನ್ಮೂಲಗಳು "ಹೊರಗಿನಿಂದ" ಕಡಿಮೆ (ಅಥವಾ ಶೂನ್ಯ) ಬೆಲೆಗಳಲ್ಲಿ ಸುಗಮವಾಗಿ ಈ ದೇಶಗಳಿಗೆ ಹರಿಯುವಂತೆ, ಸಾಮ್ರಾಜ್ಯಶಾಹಿಯು ತನ್ನ ಹಿಂದಿನ ಭಾಗವಾಗಿದ್ದ ವಸಾಹತುಶಾಹಿ ಹಂತದಲ್ಲಿ ನೋಡಿಕೊಳ್ಳುತ್ತಿದ್ದ ರೀತಿಯಲ್ಲಿ ಖಚಿತಪಡಿಸಿಕೊಳ್ಳುವ ಪ್ರಯತ್ನದಲ್ಲಿದೆ. ಈ "ಹೊರಗಿನ" ದೇಶಗಳಲ್ಲಿ ಮುಂದುವರೆದ ಬಂಡವಾಳಶಾಹಿ ದೇಶಗಳಿಗೆ ವಿಧೇಯವಾಗಿರುವ ಆಳ್ವಿಕೆಗಳನ್ನು ಸ್ಥಾಪಿಸುವುದು, 'ಅವಿಧೆಯ'ರೆಂದು ಕಾಣುವ ದೇಶಗಳ ಮೇಲೆ ನಿರ್ಬಂಧಗಳನ್ನು ಹೇರುವುದು ಅಂತಹ ಒಂದು ಮಾರ್ಗವಾಗಿದೆ. ಆದರೆ ಹೀಗೆ ಸಾಮ್ರಾಜ್ಯಶಾಹಿಯ ನಿರ್ಬಂಧಗಳಿಗೆ ಗುರಿಯಾಗುತ್ತಿರುವ ದೇಶಗಳ ಸಂಖ್ಯೆ ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರುವುದರೊಂದಿಗೆ, ಅದರ ವಿರುದ್ಧ ಪ್ರತಿರೋಧಗಳೂ ಹೆಚ್ಚುತ್ತಿರುವುದು ಕಾಣುತ್ತಿದೆ. ಏಕೆಂದರೆ, ನಿರ್ಬಂಧಗಳಿಂದ ಅವುಗಳಿಗೆ ಗುರಿಯಾದ ದೇಶಗಳ ಜನರಷ್ಟೇ ಅಲ್ಲ, ನಿರ್ಬಂಧಗಳನ್ನು ವಿಧಿಸಿದ ದೇಶಗಳ ದುಡಿಯುವ ಜನರೂ ಸಹ ಬಳಲುತ್ತಿದ್ದಾರೆ. ಇದು ಯುರೋಪಿನಾದ್ಯಂತ ಸಾವಿರಗಟ್ಟಲೆ ಕಾರ್ಮಿಕರನ್ನು ಯುದ್ಧ-ವಿರೋಧಿ, ಹಣದುಬ್ಬರ-ವಿರೋಧಿ ಪ್ರದರ್ಶನಗಳ ಮೂಲಕ ಬೀದಿಗೆ ಇಳಿಯುವಂತೆ ಮಾಡಿದೆ. ಈ ಪ್ರತಿರೋಧಗಳು ಮರ್ಮಾಘಾತಗಳ ರೀತಿಯಲ್ಲಿ ಸಾಮ್ರಾಜ್ಯಶಾಹಿಯನ್ನು ತಾಗುತ್ತಿವೆ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ. ನಾಗರಾಜ್

ದೇಶ ದೇಶಗಳು ಹೊಂದಿರುವ ನೈಸರ್ಗಿಕ ಸಂಪನ್ಮೂಲಗಳಿಗೂ ಮತ್ತು ಅವು ಸಾಧಿಸಿದ "ಅಭಿವೃದ್ಧಿ"ಯ ಮಟ್ಟಕ್ಕೂ ಒಂದು ತಾಳ-ಮೇಳವೇ ಇಲ್ಲ ಎನ್ನಬಹುದು. ಈ ಸಂಬಂಧವಾಗಿ ಅತ್ಯಂತ ಮುಂದುವರಿದ ದೇಶಗಳಾದ ಯುಎಸ್, ಯುಕೆ, ಜರ್ಮನಿ, ಫ್ರಾನ್ಸ್, ಇಟಲಿ, ಜಪಾನ್ ಮತ್ತು ಕೆನಡಾವನ್ನು ಒಳಗೊಂಡ ಜಿ-7 ಗುಂಪಿನ ಪರಿಸ್ಥಿತಿಯನ್ನು ನೋಡೋಣ. ವಿಶ್ವದ ಜನಸಂಖ್ಯೆಯ ಕೇವಲ ಶೇ.10ರಷ್ಟನ್ನು ಹೊಂದಿದ್ದರೂ, ಈ ಗುಂಪು, 2020ರ ವೇಳೆಗೆ ಜಾಗತಿಕ ನಿವ್ವಳ ಸಂಪತ್ತಿನ ಅರ್ಧಕ್ಕಿಂತಲೂ ಹೆಚ್ಚು ಭಾಗವನ್ನು ಹೊಂದಿತ್ತು ಮತ್ತು ವಿಶ್ವ ಜಿಡಿಪಿಯ ಸರಿಸುಮಾರು ಶೇ.40 ರಷ್ಟು ಭಾಗವನ್ನು ಹೊಂದಿತ್ತು. (ಅನುಕೂಲಕ್ಕಾಗಿ ಶೇ. 32ರಿಂದ ಶೇ. 46ರ ವರೆಗಿನ ಅಂದಾಜುಗಳ ನಡುವಿನ ಸಂಖ್ಯೆಯನ್ನುತೆಗೆದುಕೊಳ್ಳಲಾಗಿದೆ). ಆರ್ಥಿಕ ದೃಷ್ಟಿಯಲ್ಲಿ ಹೇಳುವುದಾದರೆ, ಈ ಗುಂಪು ಹೊಂದಿರುವ ಬಲ ಅಗಾಧವೇ. ಆದರೆ, ನೈಸರ್ಗಿಕ ಸಂಪನ್ಮೂಲಗಳ ದೃಷ್ಟಿಯಲ್ಲಿ ಹೇಳುವುದಾದರೆ, ಈ ಗುಂಪು ಹೊಂದಿರುವ ನೈಸರ್ಗಿಕ ಸಂಪನ್ಮೂಲಗಳ ನಿಕ್ಷೇಪಗಳು ಕಡಿಮೆಯೇ.

ನೈಸರ್ಗಿಕ ಸಂಪನ್ಮೂಲಗಳ ಪೈಕಿ ಇಂದಿನ ದಿನಮಾನಗಳಲ್ಲಿ ಅತಿ ಹೆಚ್ಚು ಪ್ರಾಮುಖ್ಯತೆ ಪಡೆದಿರುವ ತೈಲದ ಮತ್ತು ನೈಸರ್ಗಿಕ ಅನಿಲದ ಪರಿಸ್ಥಿತಿಯನ್ನು ಪರಿಗಣಿಸೋಣ. ತೈಲದ ಮತ್ತು ಅನಿಲದ ವಿಶ್ವ-ನಿಕ್ಷೇಪಗಳ ಅಂದಾಜುಗಳಲ್ಲಿ ಎಷ್ಟು ವ್ಯತ್ಯಾಸಗಳಿವೆಯೋ ಅಷ್ಟೇ ವ್ಯತ್ಯಾಸಗಳು ಅವುಗಳ ದೇಶಗಳಾದ್ಯಂತ ಹರಡಿಕೆಯ ಸಂಬಂಧದ ಅಂದಾಜುಗಳಲ್ಲಿಯೂ ಇವೆ. ಆದರೂ ಕೆಲವು ಅಂಶಗಳು ಎಷ್ಟು ಸ್ಪಷ್ಟವಾಗಿವೆ ಎಂದರೆ, ಅಂದಾಜುಗಳಲ್ಲಿನ ವ್ಯತ್ಯಾಸಗಳು ಅವುಗಳ ನಿಖರತೆಯ ಮೇಲೆ ಪರಿಣಾಮ ಬೀರುವುದಿಲ್ಲ. ಅಮೆರಿಕದ ಎನರ್ಜಿ ಇನ್ಫಾರ್ಮೇಶನ್ ಅಡ್ಮಿನಿಸ್ಟ್ರೇಷನ್ (ಇಐಎ) ಪ್ರಕಾರ, ವಿಶ್ವದ ಒಟ್ಟು ಪ್ರಮಾಣಿಸಲ್ಪಟ್ಟ ತೈಲ ನಿಕ್ಷೇಪಗಳಲ್ಲಿ, ಜಿ-7 ದೇಶಗಳು ಶೇ. 13ರಷ್ಟನ್ನು ಹೊಂದಿದ್ದವು. (ಕೆನಡಾ ಮಾತ್ರವೇ ವಿಶ್ವದ ತೈಲ ನಿಕ್ಷೇಪಗಳ ಸುಮಾರು ಶೇ. 10ರಷ್ಟನ್ನು ಹೊಂದಿದೆ). ಇತ್ತೀಚೆಗೆ ಅಮೆರಿಕಾ ಶೇಲ್ ತೈಲದತ್ತ ಹೊರಳುತ್ತಿದ್ದು ಅದರ ಉತ್ಪಾದನೆಯ ಪ್ರಮಾಣವನ್ನು ಈ ಲೆಕ್ಕಾಚಾರದಲ್ಲಿ ಸೇರಿಸಿಲ್ಲ. ಏಕೆಂದರೆ, ಹೆಚ್ಚಿನ ದೇಶಗಳ ಶೇಲ್ ತೈಲ ನಿಕ್ಷೇಪಗಳ ಗಾತ್ರ ಎಷ್ಟು ಎಂಬುದು ಇನ್ನೂ ತಿಳಿದಿಲ್ಲ. ಒಂದು ವೇಳೆ ಶೇಲ್ ತೈಲದ ಉತ್ಪಾದನೆಯ ಪ್ರಮಾಣವನ್ನು ಈ ಲೆಕ್ಕಾಚಾರದಲ್ಲಿ ಸೇರಿಸಿದರೂ ಸಹ ಈ ಅಂಕಿ ಅಂಶಗಳಲ್ಲಿ ಹೆಚ್ಚು ವ್ಯತ್ಯಾಸ ಇರುವುದಿಲ್ಲ. ಏಕೆಂದರೆ, ವಿಶ್ವದ ತೈಲ ನಿಕ್ಷೇಪಗಳ ಬಹು ದೊಡ್ಡ ಪಾಲು ಈ ಗುಂಪಿನ ದೇಶಗಳ ಆಚೆಯೇ ಇದೆ.

ಮುಂದುವರೆದ ದೇಶಗಳು:
ಲಭ್ಯತೆ ಅಲ್ಪ-ಅವಲಂಬನೆ ಗಣನೀಯ

ನೈಸರ್ಗಿಕ ಅನಿಲದ ನಿಕ್ಷೇಪಗಳು ಈಗ ಎಷ್ಟಿವೆ ಎಂಬುದನ್ನು ನೋಡೋಣ. ನೈಸರ್ಗಿಕ ಅನಿಲದ ನಿಕ್ಷೇಪಗಳು ಮತ್ತು ದೇಶಗಳಾದ್ಯಂತ ಅವುಗಳ ಹರಡಿಕೆಯ ಅಂದಾಜುಗಳ ಬಗ್ಗೆಯೂ ಗಮನಾರ್ಹ ವ್ಯತ್ಯಾಸಗಳಿವೆ. 2020ರ ಅಂತ್ಯದ ಅವಧಿಗೆ ಜಿ-7 ದೇಶಗಳಿಗೆ ಸಂಬಂಧಿಸಿದ ಇಐಎ ಅಂದಾಜನ್ನು ತೆಗೆದುಕೊಂಡು ಮತ್ತು ಅದನ್ನು ವಿಶ್ವದ ಒಟ್ಟು ಅಂದಾಜು 188 ಟ್ರಿಲಿಯನ್ ಘನ ಮೀಟರ್ ಅನಿಲ ನಿಕ್ಷೇಪದಿಂದ ಭಾಗಿಸಿದಾಗ, ವಿಶ್ವ ನಿಕ್ಷೇಪಗಳಲ್ಲಿ ಜಿ-7 ದೇಶಗಳ ಪಾಲು ಕೇವಲ ಶೇ.8 ಕ್ಕಿಂತ ತುಸು ಹೆಚ್ಚು ಎಂಬುದು ಕಂಡುಬರುತ್ತದೆ. ಈ ಅಂದಾಜುಗಳಿಂದಲೂ ಸಹ ಶೇಲ್ ಅನಿಲದ ಉತ್ಪಾದನೆಯ ಪ್ರಮಾಣವನ್ನು ಹೊರಗಿಡಲಾಗಿದೆ. ಅದೇನೇ ಇರಲಿ, ವಿಶ್ವದ ಅನಿಲ ನಿಕ್ಷೇಪಗಳ ಬಹುಪಾಲು ಈ ಗುಂಪಿನ ದೇಶಗಳ ಹೊರಗೇ ಇದೆ ಎಂಬುದಂತೂ ನಿಸ್ಸಂದೇಹವಾಗಿದೆ. ಆದಾಗ್ಯೂ, ತೈಲ ಮತ್ತು ಅನಿಲದ ಮೇಲೆ ಈ ದೇಶಗಳ ಅವಲಂಬನೆಯಂತೂ ಅಗಾಧವೇ. ಪರಿಸರ ಮಾಲಿನ್ಯದ ಕಾರಣದ ಮೇಲೆ, ಈ ಇಂಧನಗಳಿಂದ ದೂರ ಸರಿಯಲು ಈ ಗುಂಪಿನ ಕೆಲವು ದೇಶಗಳು ಪ್ರಯತ್ನಿಸುತ್ತಿವೆ ನಿಜ. ಫ್ರಾನ್ಸ್ ದೇಶವು ಪರಮಾಣು ಶಕ್ತಿಯ ಮೇಲೆ ಹೆಚ್ಚು ಅವಲಂಬಿತವಾಗಿದೆ. ಹವಾಮಾನ ಬದಲಾವಣೆಯ ಭೀತಿಯು ಇಂಧನದ ವೈವಿಧ್ಯೀಕರಣವನ್ನು ಸ್ವಲ್ಪಮಟ್ಟಿಗೆ ತ್ವರಿತಗೊಳಿಸಿದೆ. ಆದರೂ, ಈ ದೇಶಗಳ ಗಡಿಯೊಳಗೆ ತೈಲ ಮತ್ತು ಅನಿಲದ ಲಭ್ಯತೆಯು ಅಲ್ಪವಾಗಿದ್ದರೂ, ಈ ಸಂಪನ್ಮೂಲಗಳ ಮೇಲೆ ಅವುಗಳ ಅವಲಂಬನೆಯು ಗಣನೀಯವೇ.



ನಾವು ಈಗ ಕೃಷಿ ಸರಕುಗಳ ಬಗ್ಗೆ ಗಮನ ಹರಿಸೋಣ. ಕೆಲವು ಭೌಗೋಳಿಕ ಪರಿಗಣನೆಗಳಿಂದಾಗಿ ಮುಂದುವರಿದ ದೇಶಗಳ ಕೃಷಿ ಸರಕುಗಳ ಉತ್ಪಾದನಾ ಸಾಮರ್ಥ್ಯವು ಸೀಮಿತವಾಗಿದೆ. ಹತ್ತಿ ಬಟ್ಟೆಯ ಉದ್ಯಮವು ಬ್ರಿಟನ್‌ನಲ್ಲಿ ಕೈಗಾರಿಕಾ ಕ್ರಾಂತಿಗೆ ಮತ್ತು ಆ ಮೂಲಕ ಕೈಗಾರಿಕಾ ಬಂಡವಾಳಶಾಹಿಯ ಉಗಮಕ್ಕೆ ಮುನ್ನುಡಿ ಬರೆಯಿತು ಎಂಬುದು ನಿಜವಿದ್ದರೂ, ಬ್ರಿಟನ್ ಹತ್ತಿಯನ್ನು ಬೆಳೆಯುವುದು ಸಾಧ್ಯವಿರಲಿಲ್ಲ. ಅದು ಕಚ್ಚಾ ಹತ್ತಿಯನ್ನು ಸಂಪೂರ್ಣವಾಗಿ ಆಮದು ಮಾಡಿಕೊಳ್ಳುತ್ತಿತ್ತು. ಅಂತೆಯೇ, ವಿಶ್ವದ ಸಮಶೀತೋಷ್ಣ ಪ್ರದೇಶಗಳಲ್ಲಿರುವ ಬಂಡವಾಳಶಾಹಿ ದೇಶಗಳು ಎಲ್ಲ ಬೆಳೆಗಳನ್ನು ಬೆಳೆಯುವುದು ಸಾಧ್ಯವಿಲ್ಲ. ಅಥವಾ ಅವುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಅಥವಾ ವರ್ಷಪೂರ್ತಿ ಬೆಳೆಯುವುದು ಸಾಧ್ಯವಿಲ್ಲ. ಮತ್ತೊಂದೆಡೆಯಲ್ಲಿ, ಉಷ್ಣವಲಯದ ಮತ್ತು ಉಪೋಷ್ಣವವಲಯದ ದೇಶಗಳು ಎಲ್ಲ ಬೆಳೆಗಳನ್ನು ಬೆಳೆಯಬಹುದು ಮಾತ್ರವಲ್ಲ, ಅವುಗಳನ್ನು ಸಮಶೀತೋಷ್ಣ ಪ್ರದೇಶಗಳಲ್ಲಿರುವ ಬಂಡವಾಳಶಾಹಿ ದೇಶಗಳಿಗೆ ಪೂರೈಸುತ್ತಿರುವುದೂ ಹೌದು. ಹಾಗಾಗಿ, ಈ ಬಂಡವಾಳಶಾಹಿ ದೇಶಗಳು ತಮಗೆ ಬೇಕಾಗುವ ಪಾನೀಯಗಳಿಂದ ಹಿಡಿದು ನೂಲುಗಳವರೆಗೆ ಮತ್ತು ಆಹಾರ ಪದಾರ್ಥಗಳ ವರ್ಷಪೂರ್ತಿಯ ಪೂರೈಕೆಗಾಗಿ ಉಷ್ಣವಲಯದ ಮತ್ತು ಉಪ-ಉಷ್ಣವಲಯದ ದೇಶಗಳನ್ನು ಅವಲಂಬಿಸಿವೆ. ಇತ್ತೀಚಿನ ವರ್ಷಗಳಲ್ಲಿ ಮುಂದುವರಿದ ಈ ದೇಶಗಳು ಆಹಾರ ಧಾನ್ಯಗಳನ್ನು ಹೆಚ್ಚುವರಿಯಾಗಿ ಉತ್ಪಾದಿಸಲು ಪ್ರಾರಂಭಿಸಿವೆ ಎಂಬುದು ನಿಜವಿದ್ದರೂ ಸಹ, ಉಷ್ಣವಲಯದ ಮತ್ತು ಉಪ-ಉಷ್ಣವಲಯದ ಪ್ರದೇಶಗಳ ಮೇಲಿನ ಅವರ ಭಾರಿ ಅವಲಂಬನೆಯೇನೂ ಬದಲಾಗುವುದಿಲ್ಲ. ಒಂದು ವಾಸ್ತವಾಂಶವಾಗಿ ಹೇಳುವುದಾದರೆ, ಅವರ ಧಾನ್ಯಗಳ ಹೆಚ್ಚುವರಿ ಬೆಳೆಯ ಅಂಶವನ್ನು, ಮುಖ್ಯವಾಗಿ ಅವರು ವಿಶ್ವದ ಉಷ್ಣವಲಯದ ಮತ್ತು ಉಪೋಷ್ಣವಲಯದ ಮೂರನೇ ವಿಶ್ವದ ದೇಶಗಳು ಆಹಾರ ಧಾನ್ಯಗಳ ತಮ್ಮ ಉತ್ಪಾದನೆಯನ್ನು ತ್ಯಜಿಸುವಂತೆ ಮಾಡಿ ಅವರು ಬಯಸುವ ಬೆಳೆಗಳ ಉತ್ಪಾದನೆಯತ್ತ ಹೊರಳುವಂತೆ ಒತ್ತಾಯಿಸುವ ತಂತ್ರವಾಗಿ ಬಳಸುತ್ತಿದ್ದಾರೆ.

ಆದ್ದರಿಂದ, ವಿಶ್ವದ ಹೆಚ್ಚು ಮುಂದುವರಿದ ದೇಶಗಳು ತಮಗೆ ಅಗತ್ಯವಿರುವ ಖನಿಜ ಸಂಪನ್ಮೂಲಗಳಿಗಾಗಿ ಮತ್ತು ಕೃಷಿ ಸರಕುಗಳೂ ಸೇರಿದಂತೆ ಎಲ್ಲ ಪ್ರಾಥಮಿಕ ಸರಕುಗಳಿಗಾಗಿ "ಹೊರಗಿನ" ಪ್ರಪಂಚವನ್ನು ಅತಿಯಾಗಿ ಅವಲಂಬಿಸಿವೆ ಎಂಬ ಅಂಶವು ನಿಸ್ಸಂದೇಹವಾಗಿದೆ. ಅವರು ಈ ಸರಕುಗಳ ಸ್ಥಿರ ಪೂರೈಕೆಯನ್ನು ಕಡಿಮೆ ಬೆಲೆಯಲ್ಲಿ ಪಡೆಯಲು ಬಯಸುತ್ತಾರೆ. ವಸಾಹತುಶಾಹಿ ಆಳ್ವಿಕೆಯ ಕಾಲದಲ್ಲಿ ಅವರು ಗಣನೀಯ ಪ್ರಮಾಣದ ಈ ಎಲ್ಲ ಸರಕುಗಳನ್ನು ಯಾವುದೇ ಪಾವತಿಯಿಲ್ಲದೆ, ಅಂದರೆ ಉಚಿತವಾಗಿ, ವಸಾಹತುಗಳಿಂದ ಮತ್ತು ಅರೆ-ವಸಾಹತುಗಳಿಂದ "ಮಿಗುತಾಯದ ಹರಿವಿನ" ಭೌತಿಕರೂಪವಾಗಿ ಪಡೆಯುತ್ತಿದ್ದರು. ಈಗ ವಸಾಹತುಗಳನ್ನು ಅವರು ಹೊಂದಿದ್ದಾರೊ ಅಥವಾ ಇಲ್ಲವೊ ಎಂಬುದು ಬೇರೆ ಮಾತು, ಇಂತಹ ಸರಕುಗಳ ಸರಬರಾಜಿನ ಅಗತ್ಯವಂತೂ ಅವರಿಗೆ ಇನ್ನೂ ಮುಖ್ಯವೇ.

ಸಂಪನ್ಮೂಲಗಳಿಗಾಗಿ ಸಾಮ್ರಾಜ್ಯಶಾಹಿ ಹೇರಿಕೆ

ಮುಂದುವರೆದ ಬಂಡವಾಳಶಾಹಿ ದೇಶಗಳು ಉತ್ಪಾದಿಸಲು ಸಾಧ್ಯವಾಗದ ಮತ್ತು ತಮಗೆ ಅಗತ್ಯವಿರುವ ಇಂತಹ ಸರಕುಗಳನ್ನು "ಹೊರಗಿನಿಂದ"ಕಡಿಮೆ (ಅಥವಾ ಶೂನ್ಯ) ಬೆಲೆಗಳಲ್ಲಿ ಸುಗಮವಾಗಿ ಈ ದೇಶಗಳಿಗೆ ಹರಿಯುವಂತೆ ಸಾಮ್ರಾಜ್ಯಶಾಹಿಯು ತನ್ನ ಹಿಂದಿನ ಭಾಗವಾಗಿದ್ದ ವಸಾಹತುಶಾಹಿ ಹಂತದಲ್ಲಿ ನೋಡಿಕೊಳ್ಳುತ್ತಿದ್ದ ರೀತಿಯಲ್ಲಿ ಖಚಿತಪಡಿಸಿಕೊಳ್ಳುತ್ತದೆ. ತೈಲ ಉತ್ಪಾದಿಸುವ ದೇಶಗಳೂ ಸೇರಿದಂತೆ ಮೂರನೇ ಜಗತ್ತಿನ ದೇಶಗಳಲ್ಲಿ ಮುಂದುವರೆದ ಬಂಡವಾಳಶಾಹಿ ದೇಶಗಳು ಹೇಳಿದಂತೆ ಕೇಳುವ ಆಳ್ವಿಕೆಗಳನ್ನು/ಸರ್ಕಾರಗಳನ್ನು ಸ್ಥಾಪಿಸುವುದು ಸಾಮ್ರಾಜ್ಯಶಾಹಿಯ ಇಚ್ಛೆಯನ್ನು ಹೇರುವ ಒಂದು ಮಾರ್ಗವಾಗಿದೆ. ಈ ಉದ್ದೇಶಕ್ಕಾಗಿ ದೇಶ ದೇಶಗಳನ್ನು ನವ ಉದಾರವಾದಿ ವಿಶ್ವ ವ್ಯವಸ್ಥೆಯೊಳಗೆ ಸಿಲುಕಿಸುವುದು ಒಂದು ಹೆಚ್ಚು ಸಾಮಾನ್ಯವಾಗಿ ಅನುಸರಿಸುವ ತಂತ್ರವಾಗಿದೆ. ಈ ನವ ಉದಾರ ವ್ಯವಸ್ಥೆಗೆ ಸಿಲುಕಿದ ದೇಶಗಳು ತಮ್ಮ ಆಂತರಿಕ ಅರ್ಥವ್ಯವಸ್ಥೆಗಳಿಗೆ ಒದಗಿಸುತ್ತಿದ್ದ ಯಾವುದೇ ರೀತಿಯ ರಕ್ಷಣೆಯನ್ನು ತ್ಯಜಿಸುವ ಒತ್ತಾಯಕ್ಕೆ ಮತ್ತು ಆಮದು-ಅವಲಂಬಿತರಾಗುವ ಒತ್ತಾಯಕ್ಕೆ ಒಳಪಡುತ್ತವೆ.

ಸಾಮ್ರಾಜ್ಯಶಾಹಿಯ ಮಾತು ಕೇಳದ ಮೂರನೇ ಜಗತ್ತಿನ "ಅವಿಧೇಯ" ಸರ್ಕಾರಗಳನ್ನು ಅಧಿಕಾರದಿಂದ ಕಿತ್ತುಹಾಕಲು ನಾನಾ ವಿಧಾನಗಳನ್ನು ಬಳಸಲಾಗುತ್ತದೆ. ಈ ಉದ್ದೇಶಕ್ಕಾಗಿ, ಸಿಐಎ ಪ್ರಾಯೋಜಿತ ದಂಗೆಗಳಿಂದ ಹಿಡಿದು ನಿರ್ಬಂಧಗಳನ್ನು ಹೇರುವವರೆಗಿನ ಹಲವು ಹತ್ತು ವಿಧಾನಗಳನ್ನು ಬಳಸಲಾಗುತ್ತದೆ. ಸಾಮ್ರಾಜ್ಯಶಾಹಿಯ ನಿರ್ಬಂಧಗಳಿಗೆ ಗುರಿಯಾಗುತ್ತಿರುವ ದೇಶಗಳ ಸಂಖ್ಯೆ ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರುವ ಸಂಗತಿಯು ಅದರ ವಿರುದ್ಧ ಹೆಚ್ಚುತ್ತಿರುವ ಪ್ರತಿರೋಧದ ಲಕ್ಷಣವೂ ಹೌದು ಮತ್ತು ಈ ಪ್ರತಿರೋಧಗಳು ಮರ್ಮಾಘಾತಗಳ ರೀತಿಯಲ್ಲಿ ಸಾಮ್ರಾಜ್ಯಶಾಹಿಯನ್ನು ತಾಗುತ್ತಿವೆ.

ಕೇವಲ ಒಂದು ಅಥವಾ ಎರಡು ದೇಶಗಳ ಮೇಲೆ ನಿರ್ಬಂಧಗಳನ್ನು ಹೇರಿದಾಗ ಮಾತ್ರ ಅವು ಸಾಮ್ರಾಜ್ಯಶಾಹಿಯು ಬಯಸಿದ ಪರಿಣಾಮಗಳನ್ನು ಉಂಟುಮಾಡಬಲ್ಲವು. ಆದರೆ, ನಿರ್ಬಂಧಗಳಿಗೆ ಒಳಗಾದ ದೇಶಗಳ ಸಂಖ್ಯೆಯು ಒಂದು ವೇಳೆ ದೊಡ್ಡದಿದ್ದರೆ ಅದು ಸಾಮ್ರಾಜ್ಯಶಾಹಿ-ವಿಶ್ವ-ವ್ಯವಸ್ಥೆಗೆ ಭಯ ಹುಟ್ಟಿಸುತ್ತದೆ. ಅಂದರೆ,

ಪುಟ 14 ಕ್ಕೆ





ಜಾತಿ ತಾರತಮ್ಯ ತಡೆಯುವಲ್ಲಿ ಸರ್ಕಾರ ವಿಫಲ ದಲಿತರ ಮೇಲಿನ ದೌರ್ಜನ್ಯ ಖಂಡಿಸಿ ಪ್ರತಿಭಟನೆ

ಕೇಂದ್ರ ಮತ್ತು ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವ ಸರ್ಕಾರಗಳು ದಲಿತರ ಮೇಲಿನ ದೌರ್ಜನ್ಯ, ಜಾತಿ ತಾರತಮ್ಯವನ್ನು ತಡೆಗಟ್ಟುವಲ್ಲಿ ಸಂಪೂರ್ಣ ವಿಫಲವಾಗಿದೆ. ಪ್ರತಿದಿನವೂ ಒಂದಲ್ಲ ಒಂದು ಪ್ರದೇಶದಲ್ಲಿ ದಲಿತರ ಮೇಲೆ ಹಲ್ಲೆ ದಾಳಿಗಳು ನಡೆಯುತ್ತಲೇ ಇವೆ. ಇದರಿಂದ ನೆಮ್ಮದಿಯ ಬದುಕು ಹಾಳಾಗುತ್ತಿವೆ ಎಂದು ದಲಿತ ಹಕ್ಕುಗಳ ಸಮಿತಿ–ಕರ್ನಾಟಕ(ಡಿಹೆಚ್ಎಸ್) ರಾಜ್ಯ ಸಂಚಾಲಕ ಗೋಪಾಲಕೃಷ್ಣ ಅರಳಹಳ್ಳಿ ಆರೋಪಿಸಿದರು.

ದೇಶದಲ್ಲಿ ಮತ್ತು ರಾಜ್ಯದಲ್ಲಿ ದಲಿತರ ಮೇಲೆ ನಿರಂತರವಾಗಿ ಹೆಚ್ಚುತ್ತಿರುವ ದೌರ್ಜನ್ಯಗಳನ್ನು ವಿರೋಧಿಸಿ ದಲಿತರು, ಕೃಷಿ ಕೂಲಿಕಾರರು, ಆದಿವಾಸಿಗಳ ದೇಶವ್ಯಾಪಿ ಪ್ರತಿಭಟನೆಯ ಕರೆಯ ಭಾಗವಾಗಿ ಬೆಂಗಳೂರು ನಗರದ ಸ್ವಾತಂತ್ರ್ಯ ಉದ್ಯಾನವನದಲ್ಲಿ ಮಾರ್ಚ್ 14ರಂದು ನಡೆದ ಪ್ರತಿಭಟನೆಯಲ್ಲಿ ಮಾತನಾಡಿದ ಅವರು 'ಇತ್ತೀಚೆಗೆ ಕೋಲಾರ, ಹಾವೇರಿ, ಚಾಮರಾಜನಗರ, ಮಂಡ್ಯ ಸೇರಿದಂತೆ ಹಲವು ಕಡೆಗಳಲ್ಲಿ ದಲಿತರನ್ನು ಹೀನಾಯವಾಗಿ ನಡೆಸಿಕೊಳ್ಳಲಾಗುತ್ತಿದೆ. ಹಲ್ಲೆ, ದೌರ್ಜನ್ಯ, ಬಹಿಷ್ಕಾರದಂತಹ ಪ್ರಕರಣಗಳು ನಡೆಯುತ್ತಿವೆ. ಚಾಮರಾಜನಗರ ಜಿಲ್ಲೆಯ ಕೊಳ್ಳೆಗಾಲ ತಾಲ್ಲೂಕಿನಲ್ಲಿ ಅಂತರ್ಜಾತಿ ವಿವಾಹಿತ ದಂಪತಿಗಳನ್ನು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ದಿನದಂದು ಊರೊಳಗೆ ಬರದಂತೆ ತಡೆದು ಬಹಿಷ್ಕಾರ ಹಾಕಿರುವ ಅಮಾನವೀಯ ಘಟನೆ ನಡೆದಿದೆ ಎಂದರು.

ಹಲವು ವರ್ಷಗಳ ಹೋರಾಟದ ಫಲವಾಗಿ ಜಾರಿಗೆ ಬಂದಿರುವ ಎಸ್ಸಿಪಿ/ಟಿಎಸ್ಪಿ ಉಪಯೋಜನೆಯೂ ದಲಿತ ಸಮುದಾಯದ ಏಳಿಗೆಗಾಗಿ ಕಾರ್ಯನಿರ್ವಹಿಸುತ್ತಿಲ್ಲ. ಬದಲಾಗಿ ಬಿಡುಗಡೆಯಾದ ಹಣ ಸಮರ್ಪಕವಾಗಿ ಬಳಕೆಯಾಗದೇ ಅನಾವಶ್ಯಕ ಖರ್ಚುಗಳನ್ನು ಮಾಡಲಾಗುತ್ತಿದೆ. ಟೆಂಡರ್ ಪ್ರಕ್ರಿಯೆಯಲ್ಲಿ ಭಾರೀ ಅಕ್ರಮಗಳು ಜರುಗಿದ್ದು ಅವುಗಳೆಲ್ಲವನ್ನೂ ತನಿಖೆಗೆ ಒಳಪಡಿಸಿ ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ಜರುಗಿಸಬೇಕು. ಈ ಯೋಜನೆಯನ್ನು ಮರುಸ್ಥಾಪಿಸಿ, ಆದ್ಯತೆಯ ಪ್ರಶ್ನೆಗಳಾದ ಶಿಕ್ಷಣ, ಉದ್ಯೋಗ ಹಾಗೂ ವಸತಿ ಯೋಜನೆಗಳಿಗಾಗಿ ಬಳಕೆ ಮಾಡಿಕೊಳ್ಳಬೇಕು ಎಂದು ಅವರು ಆಗ್ರಹಿಸಿದರು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ(ಎಐಎಡಬ್ಲ್ಯೂಯು)ದ ರಾಜ್ಯಾಧ್ಯಕ್ಷ ಎಂ. ಪುಟ್ಟಮಾದು ಮಾತನಾಡಿ, 'ಹೆಚ್ಚುತ್ತಿರುವ ದೌರ್ಜನ್ಯ ಹಾಗೂ ಹಿಂಸಾತ್ಮಕ ಪ್ರಕರಣಗಳನ್ನು ತಡೆಯುವಲ್ಲಿ ಸರ್ಕಾರಗಳು ವಿಫಲವಾಗಿವೆ. ಕೃಷಿರಂಗದಲ್ಲಿ ಕೂಲಿಕಾರರಾಗಿ ದುಡಿಮೆ ಮಾಡುವವರಲ್ಲಿ ದಲಿತರೇ ಹೆಚ್ಚಾಗಿದ್ದು ಅವರಲ್ಲಿ ಬಹುತೇಕರಿಗೆ ಒಂದಿಂಚೂ ಭೂಮಿ ಇಲ್ಲ. ಒಂದೆಡೆ ಕೇಂದ್ರದ ಬಿಜೆಪಿ ಸರ್ಕಾರ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗಾಗಿ ಮೀಸಲಿಟ್ಟ ಹಣವನ್ನು ವರ್ಷದಿಂದ ವರ್ಷಕ್ಕೆ ಕಡಿತ ಮಾಡುತ್ತಾ ಬಂದಿದೆ. ಈ ವರ್ಷದ ಬಜೆಟ್‌ನಲ್ಲಿ ಸುಮಾರು 29 ಸಾವಿರ ಕೋಟಿ ರೂ.ಗಳಷ್ಟು ಮೊತ್ತವನ್ನು ಕಡಿತ ಮಾಡಿದೆ. ಇದರಿಂದ ಕೂಲಿ ದರ ಕಡಿತದೊಂದಿಗೆ ಉದ್ಯೋಗದ ವಂಚನೆಯೂ ಆಗುತ್ತಿದೆ. ಕೃಷಿ ಕೂಲಿಕಾರರ ಬದುಕು ಹೀನಾಯ ಸ್ಥಿತಿಗೆ ತಲುಪಿದೆ ಎಂದು ಆರೋಪಿಸಿದರು.

ಎಸ್.ಸಿ./ಎಸ್.ಟಿ. ಸರ್ಕಾರಿ ನೌಕರರ ಸಮನ್ವಯ ಸಮಿತಿ ರಾಜ್ಯಾಧ್ಯಕ್ಷ ಟಿ. ಶಿವಶಂಕರ್ ಮಾತನಾಡಿ, ಜಾತಿ ದೌರ್ಜನ್ಯ ಪ್ರಕರಣಗಳು ದೇಶದಲ್ಲಿ ಹೆಚ್ಚಳವಾಗುತ್ತಿದೆ. ಒಂದೆಡೆ ಲಕ್ಷಾಂತರ ಪ್ರಮಾಣದಲ್ಲಿ ಸರ್ಕಾರಿ ಹುದ್ದೆಗಳು ಖಾಲಿ ಉಳಿದಿವೆ. ಸರ್ಕಾರವು ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸುತ್ತಿಲ್ಲ. ಮತ್ತೊಂದೆಡೆ ಲಕ್ಷಾಂತರ ವಿದ್ಯಾವಂತ ಯುವಜನತೆ ಉದ್ಯೋಗಕ್ಕಾಗಿ ಅಲೆದಾಡುವ ಧಾರುಣ ಸ್ಥಿತಿ ಎದುರಾಗಿದೆ. ಸರ್ಕಾರದ ಮಟ್ಟದಲ್ಲಿ ದಲಿತ ಸಮುದಾಯದ ನೌಕರರಲ್ಲಿ ಜಾತಿ ತಾರತಮ್ಯದಂತಹ ಪ್ರಕರಣಗಳು ಹೆಚ್ಚುತ್ತಿವೆ. ಇದರಿಂದ ನೌಕರರು ಕಿರುಕುಳಕ್ಕೆ ಒಳಗಾಗುತ್ತಿದ್ದಾರೆ. ಇವು ಜರುಗದಂತೆ ತಡೆಯುವ ನಿಟ್ಟಿನಲ್ಲಿ ಕಾಯ್ದೆಗಳನ್ನು ಬಲಪಡಿಸಬೇಕು ಮತ್ತು ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮಗಳನ್ನು ಜರುಗಿಸಬೇಕೆಂದು ಆಗ್ರಹಿಸಿದರು.

ದಲಿತ ಸಂಘರ್ಷ ಸಮಿತಿ (ಭೀಮವಾದ)ಯ ರಾಜ್ಯ ಅಧ್ಯಕ್ಷ ಆರ್. ಮೋಹನ್ ರಾಜ್ ಮಾತನಾಡಿ, ಜಾತಿ ತಾರತಮ್ಯ ಮತ್ತು ದೌರ್ಜನ್ಯದಂತಹ ಪ್ರಕರಣಗಳಲ್ಲಿಯೂ ತಾರತಮ್ಯ ಮಾಡಲಾಗುತ್ತಿದೆ. ರಾಯಚೂರಿನಲ್ಲಿ ನ್ಯಾಯಾಧೀಶರೊಬ್ಬರು ಡಾ. ಅಂಬೇಡ್ಕರ್ ಭಾವಚಿತ್ರಕ್ಕೆ ಅವಮಾನ ಮಾಡಿ ಅಸ್ಪೃಶ್ಯತೆ ಆಚರಿಸಿದ್ದರೂ ಯಾವುದೇ ಕಾನೂನು ಕ್ರಮ ಜರುಗಿಸಲಿಲ್ಲ. ಕೋಲಾರದಲ್ಲಿ 2022ರ ಸೆಪ್ಟಂಬರ್ ತಿಂಗಳಿನಲ್ಲಿ ದಲಿತ ಬಾಲಕ ಚೇತನ ಎಂಬ ಹುಡುಗ ದೇವರ ಗುಜ್ಜರ್ ಕೋಲು ಮುಟ್ಟಿದ ಕಾರಣಕ್ಕೆ ಸಾಮಾಜಿಕ ಬಹಿಷ್ಕಾರ ಹಾಕಲಾಗಿದೆ. ಕೋಲಾರದಲ್ಲಿಯೇ ದೇವರ ಜಾತ್ರೆ ತೇರಿನ ಮೆರವಣಿಗೆ ತಮ್ಮ ಕೇರಿಯ ಓಣಿಗೂ ಬರಲಿ ಎಂದು ದಲಿತರು ಆಗ್ರಹಿಸಿದ್ದಕ್ಕಾಗಿ ಸವರ್ಣೀಯರು ದಲಿತರ ಕೇರಿಗೆ ನುಗ್ಗಿ ದಾಂಧಲೆ ಮಾಡಿದ್ದಾರೆ. ಹಾವೇರಿಯಲ್ಲಿ ದಲಿತ ಕುಟುಂಬ ದೇವರ ದರ್ಶನ ಪಡೆದರು ಎಂಬ ವಿಚಾರವಾಗಿ ಸವರ್ಣೀಯರು ಹಲ್ಲೆ ಮಾಡಿರುವ ಘಟನೆ ನಡೆದಿದೆ. ಇಂತಹ ದಾಳಿ ದೌರ್ಜನ್ಯಗಳು ಪ್ರತಿದಿನ ಜರುಗುತ್ತಿದ್ದರೂ, ಆರೋಪಿಗಳ ಮೇಲೆ ಸೂಕ್ತ ಕ್ರಮಜರುಗಿಸದೇ ಸರ್ಕಾರವೇ ಅವರ ರಕ್ಷಣೆಗೆ ನಿಂತಂತೆ ಕಾಣುತ್ತಿದೆ ಎಂದು ಆರೋಪಿಸಿದರು.

ಕರ್ನಾಟಕ ರಾಜ್ಯ ಕೃಷಿಕೂಲಿಕಾರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ ಮಾತನಾಡಿ, ರೈತ ವಿರೋಧಿ ಮೂರು ಕೃಷಿ ಕಾಯ್ದೆಗಳು ಹೋರಾಟದ ಫಲದಿಂದ ಕೇಂದ್ರದ ಬಿಜೆಪಿ ಸರ್ಕಾರ ಹಿಂದಕ್ಕೆ ಪಡೆದಿದ್ದರೂ ಸಹ ಕಾಯ್ದೆಯಲ್ಲಿ ಅಡಕವಾಗಿರುವ ಕೆಲವು ಅಂಶಗಳು ಬೇರೆ ಬೇರೆ ಮಾದರಿಯಲ್ಲಿ ಜಾರಿಯಾಗುತ್ತಿದೆ. ಇದರಿಂದ ರೈತರು ಕೂಲಿಕಾರರಿಗೆ ರಕ್ಷಣೆ ↗

ನೈಸರ್ಗಿಕ ಸಂಪನ್ಮೂಲಗಳ ಮೇಲೆ ಹತೋಟಿಯ ಪ್ರಯತ್ನದಲ್ಲಿ ಸಾಮ್ರಾಜ್ಯಶಾಹಿಗೆ ಪೀಕಲಾಟ.........

ಪುಟ 13 ರಿಂದ

ನಿರ್ಬಂಧಗಳಿಗೆ ಗುರಿಯಾದ ದೇಶಗಳು ತಮ್ಮ ಮೇಲೆ ಬೀಳುವ ನಿರ್ಬಂಧಗಳ ಪ್ರತಿಕೂಲ ಪರಿಣಾಮಗಳಿಂದ ತಪ್ಪಿಸಿಕೊಳ್ಳಲು ಒಗ್ಗೂಡುತ್ತವೆ. ಮತ್ತು ಮುಂದುವರೆದ ಬಂಡವಾಳಶಾಹಿ ಗುಂಪಿಗೆ ಸೇರದ ಅಥವಾ ನಿರ್ಬಂಧ ಪೀಡಿತ ದೇಶಗಳ ಪಟ್ಟಿಗೆ ಸೇರದ ಇತರ ದೇಶಗಳೂ ಸಹ ತಮ್ಮ ತಮ್ಮ ಅರ್ಥವ್ಯವಸ್ಥೆಗಳಿಗೆ ತಟ್ಟಬಹುದಾದ ಹಾನಿಕಾರಕ ಪರಿಣಾಮಗಳಿಂದ ತಪ್ಪಿಸಿಕೊಳ್ಳಲು ನಿರ್ಬಂಧಗಳನ್ನು ನಿರ್ಲಕ್ಷಿಸುವ ಉಪ–ಮಾರ್ಗಗಳನ್ನು ಕಂಡುಕೊಳ್ಳುತ್ತವೆ. ಅಂತೆಯೇ, ನಿರ್ಬಂಧಗಳಿಗೆ ಒಳಗಾದ ದೇಶವು ದೊಡ್ಡದಿದ್ದರೆ ಮತ್ತು ಸಾಕಷ್ಟು ವೈವಿಧ್ಯಮಯವಾಗಿದ್ದರೆ, ಅದರ ವಿರುದ್ಧ ಹೇರಿದ ನಿರ್ಬಂಧಗಳು ಸಾಮ್ರಾಜ್ಯಶಾಹಿಗೇ ತಿರುಗುಬಾಣವಾಗುತ್ತವೆ. ಇದು ರಷ್ಯಾದ ಮೇಲೆ ಹೇರಿದ ನಿರ್ಬಂಧಗಳ ಪ್ರಕರಣದಲ್ಲಿ ಇತ್ತೀಚೆಗೆ ಸಂಭವಿಸಿದೆ.

ಉಕ್ರೇನ್ ಯುದ್ಧ–ದಶಕಗಳ ಮೂಲಭೂತ ತಿಕ್ಕಾಟಗಳ ಪರಿಣಾಮ

ಪಾಶ್ಚಾತ್ಯ ಮಾಧ್ಯಮಗಳು ಉಕ್ರೇನ್ ಯುದ್ಧವನ್ನು ಅದು ಕೇವಲ ಒಂದು ವರ್ಷದ ಹಿಂದೆ ಪ್ರಾರಂಭವಾಯಿತು ಎಂಬಂತೆ ಮತ್ತು ಈ ಯುದ್ಧವನ್ನು ಒಂದು ದೊಡ್ಡ ಶಕ್ತಿಶಾಲಿ ದೇಶವು ತನ್ನ ನೆರೆಯ ಪುಟ್ಟ ದೇಶದೊಂದಿಗೆ ವರ್ತಿಸಿದ ಆಕ್ರಮಣಕಾರಿ ನಡವಳಿಕೆಯ ಪರಿಣಾಮ ಎಂಬಂತೆ ಪ್ರಸ್ತುತಪಡಿಸುತ್ತವೆ. ವಾಸ್ತವವಾಗಿ, ರಷ್ಯಾ–ಉಕ್ರೇನ್ ಸಂಘರ್ಷವು ಸುಮಾರು ಒಂದು ದಶಕದ ಹಿಂದೆ ಉಕ್ರೇನ್‌ನ ಅಧ್ಯಕ್ಷರಾಗಿ ಪ್ರಜಾಪ್ರಭುತ್ವದ ರೀತಿ–ನೀತಿಗಳಿಗನುಗುಣವಾಗಿ ಆಯ್ಕೆಯಾದ ವಿಕ್ಟರ್ ಯಾನು ಕೋವಿಚ್ ಅವರನ್ನು ಅಮೆರಿಕದ ನವ–ಸಂಪ್ರದಾಯ ಶರಣರಿಂದ ಯೋಜಿಸಲ್ಪಟ್ಟ, ಸಿಐಎ ನೆರವಿನ ಕಾರ್ಯಾಚರಣೆಯ ಮೂಲಕ ಪದಚ್ಯುತಗೊಳಿಸಿದಾಗ ಪ್ರಾರಂಭವಾಯಿತು. ಆದ್ದರಿಂದ ಪ್ರಸ್ತುತ ಸಂಘರ್ಷದ ತಳದಲ್ಲಿ ಪಾಶ್ಚಾತ್ಯ ಸಾಮ್ರಾಜ್ಯಶಾಹಿ ಮತ್ತು ರಷ್ಯಾದ ನಡುವೆ ನಡೆಯುತ್ತಿದ್ದ ಒಂದು ಮೂಲಭೂತ ತಿಕ್ಕಾಟವಿದೆ. ಈ ತಿಕ್ಕಾಟವು ರಷ್ಯಾದ ನೈಸರ್ಗಿಕ ಸಂಪನ್ಮೂಲಗಳಿಗೆ ಸಂಬಂಧಿಸುತ್ತದೆ. ರಷ್ಯಾ, ನೈಸರ್ಗಿಕ ಅನಿಲದ ಅಪಾರ ನಿಕ್ಷೇಪಗಳನ್ನು ಹೊಂದಿದೆ. ಇದು ವಿಶ್ವದ ಒಟ್ಟು ನಿಕ್ಷೇಪಗಳ ಶೇ. 20ರಷ್ಟಿದೆ ಮತ್ತು ಎಲ್ಲಾ ದೇಶಗಳಿಗಿಂತಲೂ ದೊಡ್ಡದಿದೆ. ಜೊತೆಗೆ, ವಿಶ್ವದ ಸುಮಾರು ಶೇ. 5ರಷ್ಟು ತೈಲ ನಿಕ್ಷೇಪಗಳನ್ನೂ ಸಹ ರಷ್ಯಾ ಹೊಂದಿದೆ.

ಉಕ್ರೇನ್ ಯುದ್ಧವನ್ನು ಪಾಶ್ಚಾತ್ಯ ಸಾಮ್ರಾಜ್ಯಶಾಹಿ ಮತ್ತು ರಷ್ಯಾದ ನಡುವಿನ ಸಂಘರ್ಷದೊಳಗೇ ಗುರುತಿಸುವ ಅಂತಾರಾಷ್ಟ್ರೀಯ ವ್ಯವಹಾರಗಳ ವ್ಯಾಖ್ಯಾನಕಾರರೂ ಸಹ, ಈ ಸಂಘರ್ಷವನ್ನು ಸಂಪೂರ್ಣವಾಗಿ ಏಕ–ಧ್ರುವೀಯತೆಯಿಂದ ಬಹು–ಧ್ರುವೀಯತೆಯತ್ತ ಹೊರಳುವ ಪರಿವರ್ತನೆಯ ಪ್ರಯತ್ನವೆಂದು ನೋಡುತ್ತಾರೆ. ಇಂತಹ ಚರ್ಚೆಗಳಲ್ಲಿ, ರಷ್ಯಾದ ಅಪಾರ ನೈಸರ್ಗಿಕ ಸಂಪನ್ಮೂಲಗಳನ್ನು ನಿಯಂತ್ರಿಸುವ ಪಾಶ್ಚಾತ್ಯ ಬಯಕೆಯು ವ್ಯಕ್ತವಾಗುವುದೇ ಇಲ್ಲ. ಆದರೆ, ಈ ಅದಮ್ಯ ಬಯಕೆಯ ಬಲವನ್ನು ಕೀಳಂದಾಜು ಮಾಡುವಂತಿಲ್ಲ. ಬೋರಿಸ್ ಯೆಲ್ಟಿನ್ ಅವರನ್ನು ನಿಯಂತ್ರಿಸುವಲ್ಲಿ ಸಾಮ್ರಾಜ್ಯಶಾಹಿಯು ಯಶಸ್ವಿಯಾಗಿತ್ತು. ಅವರನ್ನು ಸಿಐಎ ಸಿಬ್ಬಂದಿಯು ಹಗಲಿರುಳೂ ಕಣ್ಗಾವಲಿನಲ್ಲಿಟ್ಟಿತ್ತು ಎಂದು ಹೇಳಲಾಗಿದೆ. ಆದರೆ, ಪುಟಿನ್ ಅಧಿಕಾರ ಹಿಡಿದ ನಂತರ, ಅವರ ತಪ್ಪುಗಳು ಏನೇ ಇರಲಿ, ರಷ್ಯಾದ ವ್ಯವಹಾರಗಳ ಮೇಲೆ ಇದ್ದ ಪಾಶ್ಚಾತ್ಯ ಹತೋಟಿಯು ಕೊನೆಗೊಂಡಿದೆ. ಉಕ್ರೇನ್ ಯುದ್ಧದಲ್ಲಿ ಅಮೆರಿಕದ ಉದ್ದೇಶವು ರಷ್ಯಾದಲ್ಲಿ ಆಳ್ವಿಕೆಯ ಬದಲಾವಣೆಯೇ (ಅಂದರೆ, ಬಂಡವಾಳಶಾಹಿ ದೇಶಗಳಿಗೆ "ವಿಧೇಯ"ವಾಗಿ ಉಳಿಯುವ ಒಂದು ಆಳ್ವಿಕೆಯನ್ನು ಸ್ಥಾಪಿಸುವುದು) ಎಂದು ಯುಎಸ್ ಅಧ್ಯಕ್ಷ ಜೋ ಬೈಡನ್ ಮೊನ್ನೆ ಒದರಿದ್ದರಲ್ಲಿ ಆಶ್ಚರ್ಯವೇನಿಲ್ಲ.

ಆದರೆ, ರಷ್ಯಾದಂತಹ ದೊಡ್ಡ ದೇಶವೂ ಸೇರಿದಂತೆ ಅನೇಕ ದೇಶಗಳ ಮೇಲೆ ಏಕಕಾಲದಲ್ಲಿ ನಿರ್ಬಂಧಗಳನ್ನು ವಿಧಿಸಿರುವ ಕ್ರಮವು ಪಾಶ್ಚಾತ್ಯ ಸಾಮ್ರಾಜ್ಯಶಾಹಿಗೂ ನಷ್ಟ ಉಂಟುಮಾಡಿದೆ. ನಿರ್ಬಂಧಗಳಿಗೆ ಗುರಿಯಾದ ದೇಶಗಳ ಜನರಷ್ಟೇ ಅವುಗಳ ಪರಿಣಾಮಗಳಿಂದ ಬಳಲುತ್ತಿಲ್ಲ. ನಿರ್ಬಂಧಗಳನ್ನು ವಿಧಿಸಿದ ದೇಶಗಳ ದುಡಿಯುವ ಜನರೂ ಸಹ ಬಳಲುತ್ತಿದ್ದಾರೆ. ನೈಸರ್ಗಿಕ ಅನಿಲವನ್ನು ಆಮದು ಮಾಡಿಕೊಳ್ಳಲಾಗದ ಪರಿಸ್ಥಿತಿಯಿಂದಾಗಿ ಉದ್ಭವಿಸಿರುವ ಸಂಕಷ್ಟಗಳು ಯುರೋಪಿನಾದ್ಯಂತ ಸಾವಿರಗಟ್ಟಲೆ ಕಾರ್ಮಿಕರನ್ನು ಯುದ್ಧ–ವಿರೋಧಿ, ಹಣದುಬ್ಬರ–ವಿರೋಧಿ ಪ್ರದರ್ಶನಗಳ ಮೂಲಕ ಬೀದಿಗೆ ಇಳಿಯುವಂತೆ ಮಾಡಿವೆ. 1970ರ ದಶಕದ ನಂತರ ಎಂದೂ ಕಾಣದಿದ್ದ ಪ್ರಮಾಣದಲ್ಲಿ ಈ ಪ್ರದರ್ಶನಗಳು ನಡೆಯುತ್ತಿವೆ. ನಿರ್ಬಂಧಗಳನ್ನು ವಿಧಿಸಿದಾಗ ಇದ್ದ ನಿರೀಕ್ಷೆಗೆ ವ್ಯತಿರಿಕ್ತವಾಗಿ, ಅಂದರೆ, ರಷ್ಯಾದ ಕರೆನ್ಸಿಯ ಅಪಮೌಲ್ಯ ಮತ್ತು ಅಲ್ಲಿ ಹಣದುಬ್ಬರದ ತೀವ್ರಗೊಳ್ಳುವ ನಿರೀಕ್ಷೆಗೆ ವ್ಯತಿರಿಕ್ತವಾಗಿ, ಡಾಲರ್‌ಗೆ ಹೋಲಿಸಿದರೆ ರಷ್ಯಾದ ರೂಬಲ್‌ನ ಮೌಲ್ಯವು ಮೇಲೇರಿದೆ. ಅದೇ ಸಮಯದಲ್ಲಿ ನಿರ್ಬಂಧಗಳನ್ನು ವಿಧಿಸಿದ ದೇಶಗಳು ಹಣದುಬ್ಬರದಿಂದಾಗಿ ಬಲವಾದ ಹೊಡೆತ ತಿನ್ನುತ್ತಿವೆ. ಒಟ್ಟಿನಲ್ಲಿ, ಸಾಮ್ರಾಜ್ಯಶಾಹಿಯು ಕಷ್ಟದ ಕಾಲವನ್ನು ಪ್ರವೇಶಿಸಿದೆ ಎಂಬುದರಲ್ಲಿ ಸಂದೇಹವೇ ಇಲ್ಲ.

ಇಲ್ಲವಾಗುತ್ತಿದೆ. ರಾಜ್ಯದ ಬಿಜೆಪಿ ಸರ್ಕಾರ ಭೂ ಸುಧಾರಣೆ ಕಾಯ್ದೆ, ಗೋಹತ್ಯೆ ನಿಷೇಧ ಕಾಯ್ದೆ, ಇತ್ಯಾದಿ ಜನವಿರೋಧಿ ಕಾಯ್ದೆಗಳನ್ನು ಜಾರಿಗೆ ತರಲು ಹೊರಟಿದ್ದು ಇದು ಮುಂದಿನ ದಿನಗಳಲ್ಲಿ ಮಾರಕ ಪರಿಣಾಮ ಬೀರಲಿದೆ ಎಂದರು.

ದಲಿತರ ಭೂಮಿ ಕಬಳಿಕೆ ತಡೆಯುವ ನಿಟ್ಟಿನಲ್ಲಿ 1978ರಲ್ಲಿ ಪಿಟಿಸಿಎಲ್ ಕಾಯ್ದೆಯನ್ನು ಜಾರಿಗೆ ತರಲಾಯಿತು. ಇದರಡಿ ಭೂಮಿ ಮಂಜೂರಾತಿಗಾಗಿ ಎಸ್ ಟಿ/ಎಸ್ ಟಿ ಸಮುದಾಯದವರು ಅರ್ಜಿ ಸಲ್ಲಿಸಿದರೆ ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಸರ್ಕಾರವು ಎಸ್ ಟಿ/ಎಸ್ ಟಿ ಕಲ್ಯಾಣ ಸಮಿತಿ ಅಡಿ ಮರುಮಂಜೂರಾತಿ ಕೋರಿ ಅರ್ಜಿ ಸಲ್ಲಿಸಲು ಕಾಲ ಮಿತಿ ಅನ್ವಯಿಸದಂತೆ ಕಾಯಿದೆಯನ್ನು ತಿದ್ದುಪಡಿಗೊಳಿಸಬೇಕು. ಲಕ್ಷಾಂತರ ದಲಿತರು– ಬಡವರು ಬಗರ್ ಹುಕ್ಕುಂ ಉಳುಮೆ ಮಾಡುವ ಇವರಿಗೆ ಉಳುಮೆ ಚೀಟಿ ನೀಡದೆ ಸರ್ಕಾರ ವಂಚಿಸುತ್ತಿದೆ ಎಂದು ಆರೋಪಿಸಿದರು.

ನಂತರ ಮುಖ್ಯಮಂತ್ರಿಯವರಿಗೆ ಬರೆದ ಮನವಿ ಪತ್ರವನ್ನು ಸಮಾಜ ಕಲ್ಯಾಣ ಇಲಾಖೆ ಆಯುಕ್ತರು ಸ್ಥಳಕ್ಕೆ ಬಂದು ಸ್ವೀಕರಿಸಿದರು. ದಲಿತರ ಮೇಲಿನ ದೌರ್ಜನ್ಯ ತಡೆಗಟ್ಟಲು ತಕ್ಷಣ ಕ್ರಮವಹಿಸಬೇಕು, ಇಂತಹ ಪ್ರಕರಣಗಳನ್ನು ಇತ್ಯರ್ಥಪಡಿಸಲು ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಬೇಕು. ಎಸ್ಸಿ/ಎಸ್ಟಿ ದೌರ್ಜನ್ಯ ತಡೆ ಕಾಯ್ದೆ ಬಲಪಡಿಸಬೇಕು. ಸಾರ್ವಜನಿಕ ವಲಯದ ಸಂಸ್ಥೆಗಳ ಖಾಸಗೀಕರಣ ನಿಲ್ಲಿಸಬೇಕು. ಎಲ್ಲಾ ಗುತ್ತಿಗೆ ಮತ್ತು ಹಂಗಾಮಿ ಕಾರ್ಮಿಕರನ್ನು ಕಾಯಂಗೊಳಿಸಬೇಕು. ಎಸ್ಸಿಪಿ– ಟಿಎಸ್ಪಿ ಉಪಯೋಜನೆಯನ್ನು ಮರುಸ್ಥಾಪಿಸಿ, ಶಿಕ್ಷಣ, ಉದ್ಯೋಗ ಮತ್ತು ವಸತಿ ಯೋಜನೆಗಳನ್ನು ಜಾರಿಗೆ ತರಬೇಕು. ಹೊಸ ಶಿಕ್ಷಣ ನೀತಿ(ಎನ್ಇಪಿ) ರದ್ದುಗೊಳಿಸಬೇಕು. ಭೂಮಿತಿ ಕಾಯ್ದೆ ಜಾರಿಗೊಳಿಸಿ, ಭೂರಹಿತರಿಗೆ ಭೂಮಿಯನ್ನು ವಿತರಿಸಬೇಕು. ಆದಿವಾಸಿ ಜನಸಮೂಹಗಳ ಹಕ್ಕುಗಳಿಗೆ ಸಂಪೂರ್ಣ ರಕ್ಷಣೆ ನೀಡಬೇಕು. ಉದ್ಯೋಗ ಖಾತ್ರಿ ಯೋಜನೆಯನ್ನು ನಗರ ಪ್ರದೇಶಗಳಿಗೂ ಅನ್ವಯಿಸಿ ಜಾರಿಗೆ ತರಬೇಕೆಂದು ಸರ್ಕಾರವನ್ನು ಒತ್ತಾಯಿಸಲಾಗಿದೆ.

ಅಖಿಲ ಭಾರತ ಕೃಷಿ ಮತ್ತು ಗ್ರಾಮೀಣ ಕಾರ್ಮಿಕರ ಸಂಘದ ರಾಜ್ಯ ಮುಖಂಡರಾದ ನಿರ್ಮಲ ಅವರು ಪ್ರತಿಭಟನಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು. ಡಿಎಚ್ ಎಸ್ ರಾಜ್ಯ ಮುಖಂಡರಾದ ಎನ್. ನಾಗರಾಜ್, ಎನ್. ರಾಜಣ್ಣ, ಹೆಚ್.ಜಿ. ನಾಗಣ್ಣ, ಕೃಷ್ಣ(ಮಂಡ್ಯ), ಮಂಗಳ, ಕವಿತಾ, ಕೃಷಿ ಕೂಲಿಕಾರರ ಸಂಘಟನೆಯ ನಿತ್ಯಾನಂದಸ್ವಾಮಿ, ಜಿ.ಎನ್.ನಾಗರಾಜ್, ಹನುಮೇಗೌಡ, ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ರಾಜ್ಯ ಮುಖಂಡರಾದ ಎಸ್.ವೈ.ಗುರುಶಾಂತ್, ಅಖಿಲ ಭಾರತ ಕೃಷಿ ಮತ್ತು ಗ್ರಾಮೀಣ ಕಾರ್ಮಿಕರ ಸಂಘ(ಎಐಎಆರ್ಎಲ್ಎ) ಮುಖಂಡರಾದ ನಾಗರಾಜ ಪೂಜಾರ್, ಎಐಎಸ್ಎ ರಾಜ್ಯ ಅಧ್ಯಕ್ಷ ಸಾಯಿ ಬಾಲಾಜಿ, ಅಖಿಲ ಭಾರತ ದಲಿತ ಹಕ್ಕುಗಳ ಆಂದೋಲನ(ಎಐಡಿಆರ್ಎಂ), ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ), ದಲಿತ ಸಂಘರ್ಷ ಸಮಿತಿ(ಭೀಮವಾದ), ಎಸ್.ಸಿ./ ಎಸ್.ಟಿ. ಸರ್ಕಾರಿ ನೌಕರರ ಸಮನ್ವಯ ಸಮಿತಿ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ಕಾರ್ಯಕರ್ತರು ಧರಣಿಯಲ್ಲಿ ಭಾಗವಹಿಸಿದ್ದರು.

ವೈದ್ಯಕೀಯ ನಿರ್ಲಕ್ಷ್ಯಕ್ಕೆ ಪರಿಹಾರಕ್ಕಾಗಿ ಆಗ್ರಹಿಸಿ ಡಿವೈಎಫ್ಐ ಧರಣಿ:

ಮಂಗಳೂರು ತಾಲೂಕು ದೇರಳಕಟ್ಟೆಯ ಸುಪ್ರಸಿದ್ಧ ಖಾಸಗಿ ಆಸ್ಪತ್ರೆಯಲ್ಲಿ ವೈದ್ಯಕೀಯ ನಿರ್ಲಕ್ಷ್ಯಕ್ಕೆ ಈಡಾಗಿ ಕಾಲು ಕಳೆದುಕೊಂಡ ಕುರ್ನಾಡು ನೌಷಾದ್ ಎಂಬ 27 ವರ್ಷ ಪ್ರಾಯದ ಯುವಕನಿಗೆ ಸೂಕ್ತ ಪರಿಹಾರ ನೀಡಬೇಕೆಂದು ಆಗ್ರಹಿಸಿ ದ.ಕ.ಜಿಲ್ಲಾ ಡಿವೈಎಫ್ಐ ಸಮಿತಿಯ ನೇತೃತ್ವದಲ್ಲಿ ಮಾರ್ಚ್ 14ರಂದು ದೇರಳಕಟ್ಟೆಯ ಪೇಟೆ ಮಧ್ಯದಲ್ಲಿ ಪ್ರತಿಭಟನಾ ಧರಣಿ ನಡೆಸಲಾಯಿತು.

ಉಳ್ಳಾಲ ತಾಲೂಕು ವ್ಯಾಪ್ತಿಯ ಹಲವಾರು ಸಂಘ ಸಂಸ್ಥೆಗಳವರು, ಸಾರ್ವಜನಿಕರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಪ್ರತಿಭಟನೆಯನ್ನುದ್ದೇಶಿಸಿ ಡಿವೈಎಫ್ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ, ದ.ಕ. ಜಿಲ್ಲಾದ್ಯಕ್ಷ ಬಿ.ಕೆ. ಇಮ್ತಿಯಾಜ್, ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿ, ದಸಂಸ ಹಿರಿಯ ಮುಖಂಡ ಎಂ. ದೇವದಾಸ್, ಸಿಪಿಐ ಮುಖಂಡ ವಿ. ಕುಕ್ಯಾನ್, ಸಿಐಟಿಯು ಮುಖಂಡ ಸುನಿಲ್ ಕುಮಾರ್ ಬಜಾಲ್, ಪ್ರಾಂತ ರೈತ ಸಂಘದ ಕೃಷ್ಣಪ್ಪ ಸಾಲ್ಯಾನ್ ಮಾತನಾಡಿದರು.

ಈ ಮಧ್ಯೆ ಆಸ್ಪತ್ರೆಯ ಪ್ರತಿನಿಧಿಗಳು ಧರಣಿ ಸ್ಥಳಕ್ಕೆ ಆಗಮಿಸಿ ಮಾತುಕತೆಗೆ ಆಹ್ವಾನ ನೀಡಿದರು. ಅದರಂತೆ ಸಂತ್ರಸ್ತ ನೌಷಾದ್, ಆತನ ತಂದೆ, ಡಿವೈಎಫ್ಐ ಮುಖಂಡರಾದ ಮುನೀರ್ ಕಾಟಿಪಳ್ಳ, ಬಿ.ಕೆ. ಇಮ್ತಿಯಾಜ್, ನ್ಯಾಯವಾದಿ ನಿತಿನ್ ಕುತ್ತಾರ್ ಒಳಗೊಂಡ ನಿಯೋಗ ಆಸ್ಪತ್ರೆಗೆ ತೆರಳಿ ಆಡಳಿತಾಧಿಕಾರಿಗಳೊಂದಿಗೆ ಮಾತುಕತೆ ನಡೆಸಿತು. ಒಂದು ವಾರದೊಳಗೆ ಸೂಕ್ತ ಪರಿಹಾರ ನೀಡುವುದಾಗಿ ಆಸ್ಪತ್ರೆ ಅಧಿಕಾರಿಗಳು ನೀಡಿದ ಭರವಸೆಯಂತೆ ಧರಣಿಯನ್ನು ಹಿಂದೆ ಪಡೆಯಲಾಯಿತು.

ಡಿವೈಎಫ್ಐ ನೇತೃತ್ವದ ಹೋರಾಟಗಳಲ್ಲಿ ಹಲವಾರು ಪ್ರಕರಣಗಳು ಇತ್ಯಾತ್ಮಕವಾಗಿ ಪರಿಹಾರವಾಗುತ್ತಿದ್ದು, ಸಾರ್ವಜನಿಕರಲ್ಲಿ ಡಿವೈಎಫ್ಐ ಬಗ್ಗೆ ಸದಾಶಯ ವ್ಯಕ್ತವಾಗುವುದು ದೃಢವಾಗುತ್ತಿದೆ.

ರಸ್ತೆ ಕಾಮಗಾರಿ ಪೂರ್ಣಗೊಳಿಸುವಂತೆ ಸುರತ್ಕಲ್‌ನಲ್ಲಿ ಡಿವೈಎಫ್ಐ ರಸ್ತೆತಡೆ:

ಕಾನ–ಬಾಳ–ಎಂಆರ್‌ಪಿಎಲ್ ಮುಖ್ಯರಸ್ತೆ ಕಾಮಗಾರಿ ಪೂರ್ಣಗೊಳಿಸದೇ ವಿಳಂಬ ಧೋರಣೆ ಅನುಸರಿಸುತ್ತಿರುವ ಗುತ್ತಿಗೆದಾರರು ಹಾಗೂ ಸುರತ್ಕಲ್ ಶಾಸಕರ ವಿರುದ್ಧ ಡಿವೈಎಫ್ಐ ಸುರತ್ಕಲ್ ಘಟಕ ಹಾಗೂ ಸ್ಥಳೀಯ ಆಟೋ ಚಾಲಕರ ಸಂಘದ ನೇತೃತ್ವದಲ್ಲಿ ಮಾರ್ಚ್ 17ರಂದು ರಸ್ತೆ ತಡೆ ಹಾಗೂ ಧರಣಿ ನಡೆಸಲಾಯಿತು.


ಧರಣಿಯನ್ನುದ್ದೇಶಿಸಿ ಡಿವೈಎಫ್ಐ ದ.ಕ. ಜಿಲ್ಲಾ ಅಧ್ಯಕ್ಷ ಬಿ.ಕೆ. ಇಮ್ತಿಯಾಜ್, ಮಂಗಳೂರು ನಗರ ಉಪಾಧ್ಯಕ್ಷ ಶ್ರೀನಾಥ್ ಕುಲಾಲ್, ಆಟೋ ಚಾಲಕರ ಸಂಘದ ಉಪಾಧ್ಯಕ್ಷ ಗಣೇಶ್ ಮಾತನಾಡಿದರು.

ಟೋಲ್ ಸಂಗ್ರಹದ ವಿರುದ್ಧ ಜನರ ಆಕ್ರೋಶ... ಪುಟ 5 ರಿಂದ

ಟಿಪ್ಪು ಸುಲ್ತಾನ್ ನನ್ನು ಕೊಂದರು' ಎಂಬ ಕಟ್ಟು ಕತೆಯನ್ನು ಹಿಂದುತ್ವವಾದಿಗಳು ಮೊದಲಿಗೆ ರಂಗಮಂದಿರದಲ್ಲಿ ನಾಟಕ ಪ್ರದರ್ಶನದ ಮೂಲಕ ಹೇಳಿದರು. ಅದನ್ನು ಸಾಮಾಜಿಕ ಜಾಲತಾಣಗಳಲ್ಲಿ ಒಂದಷ್ಟು ಜನರು ವಿರೋಧಿಸಿದರು. ಆದರೆ, ಹಿಂದುತ್ವವಾಧಿಗಳು ತಾವು ಹೇಳಿದ್ದೇ ಸತ್ಯ, ಅದೇ ನಿಜವಾದ ಇತಿಹಾಸ ಎಂದು ಜನರನ್ನು ನಂಬಿಸುವ ಪ್ರಯತ್ನವನ್ನು ತಮ್ಮ ಗುರಿ ತಲುಪುವವರೆಗೂ ಬಿಡಲಾರರು. ನಾಟಕದ ಮುಂದುವರಿದ ಭಾಗವೇ ಉರಿಗೌಡ, ನಂಜೇಗೌಡರ ಹೆಸರನ್ನು ಹೆದ್ದಾರಿಗೆ ತಂದಿದ್ದು, ಸುದ್ದಿ ಮಾಧ್ಯಮಗಳಲ್ಲಿ ವ್ಯಾಪಕ ಚರ್ಚೆಯಾಗುವಂತೆ ನೋಡಿಕೊಂಡಿದ್ದು, ಬಿಜೆಪಿ ಸಚಿವರುಗಳು, ನಾಯಕರುಗಳು ಇದರ ಪರವಾಗಿ ವಾದಿಸಿದ್ದು. ಇದು ಇಲ್ಲಿಗೇ ನಿಲ್ಲುವುದಿಲ್ಲ. ಪುರಾಣ ಕತೆಗಳನ್ನೇ ಇತಿಹಾಸ ಎಂದು ಜನರನ್ನು ನಂಬಿಸಿದ್ದೂ ಇದೇ ವಿಧಾನದಲ್ಲಿ ಎಂಬುದನ್ನು ಮರೆಯಬಾರದು.

ಸ್ಥಳೀಯ ವ್ಯಾಪಾರಿಗಳ ಬದುಕಿಗೆ ಕುತ್ತು

ಮತ್ತೊಂದೆಡೆ ಇದುವರೆಗೆ ಬದುಕು ಕಂಡುಕೊಂಡಿದ್ದ ರಸ್ತೆ ಅಕ್ಕಪಕ್ಕದ ಸ್ಥಳೀಯ ವ್ಯಾಪಾರಿಗಳ ಬದುಕುನ್ನು ಈ ಹೆದ್ದಾರಿ ಕಸಿಯುತ್ತದೆ. ಬೆಂಗಳೂರು– ಮೈಸೂರು ನಡುವಿನ ಹಳೆಯ ರಸ್ತೆ ನಗರ, ಪಟ್ಟಣ ಮತ್ತು ಗ್ರಾಮಗಳ ನಡುವೆ ಹಾದುಹೋಗುತ್ತದೆ. ಇಲ್ಲೆಲ್ಲಾ ವ್ಯಾಪಾರ ಮಾಡುವ ಮೂಲಕ ಸಹಸ್ರಾರು ಕುಟುಂಬಗಳು ಬದುಕು ಕಟ್ಟಿಕೊಂಡಿದ್ದವು. ಟೀ ಅಂಗಡಿ, ಹೋಟೆಲ್ ಗಳು, ಹಣ್ಣು ತರಕಾರಿ, ಎಳೆನೀರು, ಮದ್ದೂರು ವಡೆ, ಬಿಡದಿ ತಟ್ಟೆ ಇಡ್ಲಿ, 'ಗೌಡರ ಮನೆ ಬಾಡೂಟ' ಹೆಸರಿನ ಹೋಟೆಲ್ ಗಳು, ಚನ್ನಪಟ್ಟಣದ ಬೊಂಬೆಗಳು, ಸಿಗ್ನಲ್ ಬಳಿ ನಿಂತು ವಾಹನಗಳ ಬಳಿ ಓಡೋಡಿ ಬಂದು ಸೌತೆಕಾಯಿ, ಕಲ್ಲಂಗಡಿ, ಸೊಪ್ಪು ಮಾರುತ್ತಿದ್ದವರು, ಇವರೆಲ್ಲರ ವ್ಯವಹಾರ ಸಂಪೂರ್ಣವಾಗಿ ನಾಶವಾಗಿದೆ. ಬೆಂಗಳೂರು ಮೈಸೂರು ನಡುವೆ ಪ್ರಯಾಣಿಸುವ ಪ್ರಯಾಣಿಕರಿಗೆ ಈ ಜನರ ಸಂಪರ್ಕವೇ ಇಲ್ಲದಂತೆ ಮಾಡಲಾಗಿದೆ.





ಅಭಿವೃದ್ಧಿ ಬೇಕು. ಇದರಿಂದ ನಿರಾಶ್ರಿತರಾದವರ ಬದುಕಿಗೂ ದಾರಿ ತೋರಿಸಬೇಕು

ಹಾಗಾದರೆ, ರಸ್ತೆ ನಿರ್ಮಾಣದಂತಹ ಮೂಲಸೌಕರ್ಯಗಳ ಅಭಿವೃದ್ಧಿ ಬೇಡವೇ? ಇಂತಹ ಪ್ರಶ್ನೆ ಮೂಡುವುದು ಸಹಜ. ಅಭಿವೃದ್ಧಿ ಮಾಡುವಾಗ ಒಂದಷ್ಟು ಜನರಿಗೆ ನಷ್ಟ ಆಗುತ್ತದೆ, ಅದಕ್ಕೆ ಏನೂ ಮಾಡಲಾಗದು ಎಂಬ ಕೆಲವರ ವಾದವೂ ಇದೆ. ಅಭಿವೃದ್ಧಿ ಎಂದರೆ ಒಂದನ್ನು ನಾಶಮಾಡಿ ಮತ್ತೊಂದನ್ನು ಸೃಷ್ಟಿ ಮಾಡುವುದಲ್ಲ. ಹಲವರ ಬದುಕನ್ನು ಕಸಿದು ಕೆಲವರಿಗೆ ಅನುಕೂಲ ಮಾಡಿಕೊಡಲು ಅಭಿವೃದ್ಧಿ ಮಾಡುವುದಲ್ಲ. ಕೆಲವರ ಲಾಭಕ್ಕಾಗಿ ಹಲವರ ಬದುಕಿನ ಆಸರೆಯನ್ನು ಕಸಿಯುವುದಲ್ಲ. ಈ ರೀತಿ ಅಭಿವೃದ್ಧಿ ಮಾಡುವಾಗ ಭೂಮಿ ಕಳೆದುಕೊಳ್ಳುವ ರೈತರಿಗೆ ಇದಕ್ಕೆ ಪರ್ಯಾಯವಾಗಿ ಕೃಷಿ ಭೂಮಿಯನ್ನು ಬೇರೆಡೆ ಕೊಡಬೇಕೇ ವಿನಃ, ಒಂದಷ್ಟು ಹಣ ಕೊಟ್ಟು ಅವರನ್ನು ಕೃಷಿಯಿಂದ ಹೊರದಬ್ಬುವುದಲ್ಲ. ಹೆದ್ದಾರಿ ನಿರ್ಮಾಣದಿಂದ ಮನೆ ಕಳೆದುಕೊಂಡವರಿಗೆ ಬೇರೆಡೆ ಮನೆ ನಿರ್ಮಾಣ ಮಾಡಿಕೊಡಬೇಕೇ ವಿನಃ, ಒಂದಷ್ಟು ಹಣ ಕೊಟ್ಟು ಕೈತೊಳೆದುಕೊಳ್ಳುವುದಲ್ಲ. ಇಂತಹ ಅಭಿವೃದ್ಧಿಗಳಿಂದ ತಮ್ಮ ವ್ಯಾಪಾರ, ಕೆಲಸ ಕಳೆದುಕೊಳ್ಳುವವರಿಗೆ, ಪರ್ಯಾಯ ವ್ಯವಸ್ಥೆ ರೂಪಿಸಿಕೊಡಬೇಕೇ ವಿನಃ, ಇವರ ನಾಶವಾದ ಬದುಕಿಗೂ ಸರ್ಕಾರಕ್ಕೂ ಸಂಬಂಧವಿಲ್ಲ ಎಂಬಂತೆ ಇರುವುದು ತರವಲ್ಲ.

ಮೂಲಭೂತ ಸೌಕರ್ಯಗಳು ಸಾರ್ವಜನಿಕರಿಗೆ ಮುಕ್ತವಾಗಿರಬೇಕು

ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಿಕೊಡುವ ರಸ್ತೆ ನಿರ್ಮಾಣದಂತಹ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸರ್ಕಾರದ ಕರ್ತವ್ಯವಾಗಬೇಕು. ಅದು ಬಡವ, ಬಲ್ಲಿದರೆನ್ನದೆ ಎಲ್ಲರೂ ಉಚಿತವಾಗಿ ಬಳಕೆ ಮಾಡುವಂತಿರಬೇಕು. ಜನರಿಂದ ತೆರಿಗೆ ಸಂಗ್ರಹ ಮಾಡುವುದು, ಪ್ರಕೃತಿ ಸಂಪತ್ತಿನಿಂದ ಬರುವ ಆದಾಯ, ಸಾರ್ವಜನಿಕ ಉದ್ಯಮಗಳಿಂದ ಬರುವ ಆದಾಯ ಇವುಗಳನ್ನು ಬಳಸಿ ಇಂತಹ ಸೌಕರ್ಯಗಳನ್ನು ನಿರ್ಮಾಣ ಮಾಡಬೇಕು. ಆದರೆ, 1990ರ ದಶಕದಲ್ಲಿ ಭಾರತ ಮುಕ್ತ ಆರ್ಥಿಕ ನೀತಿಗಳನ್ನು ಒಪ್ಪಿಕೊಂಡ ನಂತರ ಇಂತಹ ಮೂಲಭೂತ ಸೌಕರ್ಯಗಳ ನಿರ್ಮಾಣ ಮತ್ತು ಅಭಿವೃದ್ಧಿ ಸರ್ಕಾರದ ಕೆಲಸವಲ್ಲ, ಇವುಗಳನ್ನು ಖಾಸಗಿಯವರೇ ಮಾಡುತ್ತಾರೆ ಎನ್ನುತ್ತಾ ಇವುಗಳನ್ನು ಖಾಸಗಿ ಬಂಡವಾಳಗಾರರಿಗೆ ಒಪ್ಪಿಸಲಾಗಿದೆ. ಎಲ್ಲಿ ಬಂಡವಾಳ ಹೂಡಿಕೆ ಮಾಡಿದರೆ ಹೆಚ್ಚು ಲಾಭ ಸಿಗುತ್ತದೆಯೋ ಅಂತಹ ವಲಯಗಳಲ್ಲಿ ಬಂಡವಾಳಗಾರರು ಹೂಡಿಕೆ ಮಾಡಿ ಲಾಭ ಮಾಡಿಕೊಳ್ಳುತ್ತಾರೆ. ನಾವು ನೂರಾರು ವರ್ಷಗಳ ಕಾಲ ನಮ್ಮದೇ ಎಂದುಕೊಂಡ ರಸ್ತೆಗಳು, ನದಿಗಳು, ರೈಲು ಮಾರ್ಗ, ಪ್ರಕೃತಿ ಸಂಪತ್ತು, ವಿದ್ಯುತ್ ಎಲ್ಲವೂ ಖಾಸಗಿಯವರ ಪಾಲಾಗುತ್ತದೆ. ಮುಕ್ತ ಆರ್ಥಿಕ ನೀತಿಗಳು ಎಲ್ಲವನ್ನೂ ಉಳ್ಳವರಿಗೆ ಮುಕ್ತವಾಗಿ ತೆರೆದಿಡುತ್ತದೆ. ಆರ್ಥಿಕವಾಗಿ ಬಲಿಷ್ಟರಾಗಿರುವವರ ಅನುಕೂಲಕ್ಕೆ ತಕ್ಕಂತೆ ಅಭಿವೃದ್ಧಿಯಾಗುತ್ತದೆ. ಅವರ ಅನುಕೂಲಕ್ಕೆ ತಕ್ಕಂತೆ ಯೋಜನೆಗಳು, ಕಾನೂನು ಕಟ್ಟಳೆಗಳು ರೂಪುಗೊಳ್ಳುತ್ತವೆ. ಇಂತಹ ಅಭಿವೃದ್ಧಿಗಳು ಆರ್ಥಿಕವಾಗಿ ದುರ್ಬಲರಾಗಿರುವ ವರ್ಗಗಳ ಪಾಲಿಗೆ ಕೈಗುಟದ ಗಗನ ಕುಸುಮವಾಗಿ ಉಳಿಯುತ್ತವೆ. ಇವರ ಬದುಕು ಮತ್ತಷ್ಟು ನರಕವಾಗುತ್ತದೆ. ಜನತೆ ಇದರ ಬಗ್ಗೆ ಎಚ್ಚರಿಕೆಯಿಂದ ಇರಬೇಕಾಗಿದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE MARCH 20-26, 2023 Price: Rs. 10/- Date of Publication: 17 MARCH 2023 RNI No. KARKAN /2006/17926 Posted on 21-03-2023
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate** - Rs. 2

ಕೋಲಾರ: ವ್ಯಕ್ತಿ ಸ್ವಾಂತಂತ್ರ್ಯದ ಮೇಲೆ ಸಂಸದನ ಧಾಳಿ

ಮುರಳಿಕೃಷ್ಣ, ವಿ.ಗೀತಾ





ಮಂಗಳೂರಿನಲ್ಲಿನಂತೆ ಮೂಲಭೂತವಾದಿಗಳ ಅಟ್ಟಹಾಸ ಕೋಲಾರದಲ್ಲೂ ಆರಂಭಗೊಂಡಿದೆ. ಮಂಗಳೂರನ್ನು ಕೇಸರಿ ಭಯೋತ್ಪಾದನೆಯ ಪ್ರಯೋಗಾಲಯ ಮಾಡಿದಂತೆ ಕೋಲಾರವನ್ನೂ ಕೇಸರಿ ಪ್ರಯೋಗಶಾಲೆ ಮಾಡುವ ಹುನ್ನಾರ ವ್ಯವಸ್ಥಿತವಾಗಿ ಸಾಗಿದೆ. ಮಂಗಳೂರಿನಲ್ಲಿ ಬುರ್ಖಾ, ಹಿಜಾಬ್, ಗೋಮಾಂಸ, ಹೀಗೆ ಅಲ್ಲೋಲ ಕಲ್ಲೋಲ ಸೃಷ್ಟಿಸಿ ತಮ್ಮ ಸ್ವಾರ್ಥ ರಾಜಕೀಯ ಹಿತಾಸಕ್ತಿಗಳನ್ನು ಸಾಧಿಸಲು ಮುಂದಾದ ಆರ್.ಎಸ್.ಎಸ್. ಪಡೆ ಕೋಲಾರದಲ್ಲೂ ಅಂತದೇ ಪ್ರಯತ್ನದಲ್ಲಿ ತೊಡಗಿದೆ.

ಇತ್ತೀಚೆಗೆ ಕೋಲಾರದ ಚನ್ನಯ್ಯ ರಂಗ ಮಂದಿರದಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಸ್ವಸಹಾಯ ಸಂಘದ ಮಹಿಳೆಯರು ವ್ಯಾಪಾರಿ ಮಳಿಗೆಗಳನ್ನು ತೆರೆದಿದ್ದರು. ಕೋಲಾರದ ಬಿಜೆಪಿ ಸಂಸದ ಮುನಿಸ್ವಾಮಿ ಅಲ್ಲಿಗೆ ಭೇಟಿ ನೀಡಿದ್ದರು. ಮಳಿಗೆಗಳನ್ನು ಹಾಕಿದ್ದ ಮಹಿಳೆಯರ ಪೈಕಿ ಒಬ್ಬಾಕೆ ಹಣೆಯಲ್ಲಿ ಕುಂಕುಮ ಇಟ್ಟಿರಲಿಲ್ಲ. ಇದನ್ನು ಗಮನಿಸಿದ ಸಂಸದರು "ಯಾಕೆ ಹಣೆಯಲ್ಲಿ ಬೊಟ್ಟನ್ನು ಇಟ್ಟಿಲ್ಲ, ನೀನು ಹಿಂದೂ ಅಲ್ಲವೇ ಅಥವಾ ನಿನ್ನ ಗಂಡ ಸತ್ತು ಹೋಗಿದ್ದಾನಾ, ಮತಾಂತರ ಆಗ್ತೀಯಾ" ಎಂದೆಲ್ಲಾ ಪ್ರಶ್ನಿಸಿದ್ದಾರೆ. ಸಂಸದರ ಈ ನಡೆಯನ್ನು ಕಂಡ ಅಲ್ಲಿ ನೆರೆದಿದ್ದ ಮಹಿಳೆಯರು ಸ್ತಂಭೀಭೂತರಾಗಿದ್ದಾರೆ. ಹಣೆಯಲ್ಲಿ ಕುಂಕುಮ ಇಡುವುದು, ಬಿಡುವುದು ನಮ್ಮ ಸ್ವಯಿಚ್ಛೆಗೆ ಬಿಟ್ಟ ವಿಚಾರ. ಅದನ್ನು ಕೇಳಲು ಇವರ್‍ಯಾರು ಎಂದು ಪ್ರಶ್ನಿಸಿದ್ದಾರೆ.

ಕೋಲಾರ ಜಿಲ್ಲೆ ಜಾತ್ಯಾತೀತತೆ ಮತ್ತು ಸೌಹಾರ್ದತೆಯನ್ನು ಮೈಗೂಡಿಸಿಕೊಂಡಿರುವ ನೆಲ. ಎಂದೂ ತನ್ನ ಮಣ್ಣಿನ ಗುಣವನ್ನು ಬಿಟ್ಟುಕೊಟ್ಟಿಲ್ಲ. ಕೆಲವು ಅನಿವಾರ್ಯ ಸಂದರ್ಭಗಳನ್ನು ಹೊರತುಪಡಿಸಿದರೆ ಎಂದೂ ಸಹ ಬಿಜೆಪಿ ಅಥವಾ ಕೋಮುವಾದದ ಬೀಜಗಳು ಇಲ್ಲಿ ಮೊಳೆಯಲು ಬಿಟ್ಟಿಲ್ಲ. ಪರಿಸ್ಥಿತಿ ಹೀಗಿರುವುದರಿಂದ ಇದನ್ನು ಏನಾದರೂ ಮಾಡಿ ಕೋಮು ನೆಲೆಯನ್ನಾಗಿ ಮಾಡುವ ಹುನ್ನಾರವನ್ನು ಸಂಘ ಪರಿವಾರ ಮಾಡುತ್ತಲೇ ಇದೆ.


ಸಂಸದರು ಈ ಹಿಂದೆಯೂ ಇಂತದೇ ಪ್ರಯತ್ನಕ್ಕೆ ಮುಂದಾಗಿದ್ದರು. ನಾಗರೀಕ ಪೌರತ್ವ– ಸಿಎಎ ಮತ್ತು ಎನ್‌ಆರ್‌ಸಿ ಪರ ಹೋರಾಟ ನಡೆದಾಗ ಕೋಮುವಾದಿಗಳ ಮೆರವಣಿಗೆಯನ್ನು ಕ್ಲಾಕ್ ಟವರ್ ಕಡೆ ಕರೆದೊಯ್ಯಲು ಮುಂದಾಗಿದ್ದರು. ಕ್ಲಾಕ್ ಟವರ್ ಮುಸ್ಲಿಂ ಜನರ ಪ್ರಾಬಲ್ಯ ವಾಸ ಇರುವ ಕೇಂದ್ರವಾಗಿದ್ದು ಅತಿ ಸೂಕ್ಷ್ಮ ಪ್ರದೇಶವಾಗಿದೆ. ಆದರೆ ಜಿಲ್ಲಾಧಿಕಾರಿಗಳು ಮತ್ತು ಪೊಲೀಸರ ಸಮಯ ಪ್ರಜ್ಞೆಯಿಂದ ಆಗಬಹುದಾಗಿದ್ದ ಅಹಿತಕರ ಘಟನೆಗಳು ನಡೆಯಲಿಲ್ಲ. ಮತ್ತೊಂದು ಪ್ರಸಂಗದಲ್ಲಿ ಇದ್ದಕ್ಕಿದ್ದಂತೆ ಕ್ಲಾಕ್ ಟವರ್ ಮೇಲೆ ರಾಷ್ಟ್ರ ಧ್ವಜ ಹಾರಿಸಿಯೇ ತೀರುತ್ತೇವೆ ಎಂದು ಪಟ್ಟು ಹಿಡಿದಿದ್ದರು. ಆದರೆ ಮುಸ್ಲಿಮರೇ ರಾಷ್ಟ್ರ ಧ್ವಜವನ್ನು ಹಾರಿಸುವ ಮೂಲಕ ವಿವಾದಕ್ಕೆ ತೆರೆ ಎಳೆದಿದ್ದರು.

ಹಣೆಯಲ್ಲಿನ ಬೊಟ್ಟಿನ ವಿಚಾರದಲ್ಲಿ ಸಂಸದರ ಇಂತಹ ನಡೆಗಳನ್ನು ಪ್ರಶ್ನಿಸಿ ಜನವಾದಿ ಮಹಿಳಾ ಸಂಘಟನೆಯನ್ನು ಒಳಗೊಂಡು ವಿವಿಧ ಮಹಿಳಾ ಸಂಘಟನೆಗಳು ಮರುದಿನ ಪ್ರತಿಭಟನೆ ನಡೆಸಿದರು. ಹೊಸ ಬಸ್ ನಿಲ್ದಾಣದ ಬಳಿ ಜಮಾಯಿಸಿದ ಮಹಿಳೆಯರು ಪ್ರತಿಭಟನೆ ನಡೆಸಿದರು. 'ಬೊಟ್ಟು ಇಡುವುದು ನಮ್ಮ ಸ್ವಂತ ವಿಚಾರ ಸಂಸದರಿಗೆ ಅದರಲ್ಲಿ ಏನು ಕೆಲಸ' ಎಂದು ಪ್ರಶ್ನಿಸಿದರು. 'ಇದು ನಮ್ಮ ವೈಯಕ್ತಿಕ ಸ್ವಾತಂತ್ರ್ಯದ ಹರಣ' ಎಂದು ತರಾಟೆಗೆ ತೆಗೆದುಕೊಂಡು. ಇದು ವ್ಯಕ್ತಿಯ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ನಡೆಸಿದ ದಾಳಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಳೆದ ಹತ್ತಾರು ವರ್ಷಗಳಿಂದ ಇಲ್ಲಿನ ಅಂತರ ಗಂಗೆ ಪುಣ್ಯ ಕ್ಷೇತ್ರವನ್ನು ಮತ್ತೊಂದು ಬಾಬಾ ಬುಡನ್ ಗಿರಿ ಮಾಡಲು ಸಂಘ ಪರಿವಾರ ಸತತವಾಗಿ ಪ್ರಯತ್ನಿಸುತ್ತಿದೆ. ಅಲ್ಲಿನ ಬೆಟ್ಟದ ಮೇಲೆ ಶಿವನ ದೇವಾಲಯ ಇದ್ದು ತಪ್ಪಲಲ್ಲಿ ಮಸೀದಿ ಇದೆ. ಇಂತಹ ಪ್ರಾಕೃತಿಕ ಸನ್ನಿವೇಶವನ್ನು ಬಳಸಿಕೊಂಡು ಆ ಪುಣ್ಯ ಕ್ಷೇತ್ರವನ್ನು ಮತ್ತೊಂದು ಬಾಬಾಬುಡನ್‌ಗಿರಿ ಮಾಡಲು ಬಜರಂಗದಳ ಹೊರಟಿದೆ. ಪ್ರತಿ ವರ್ಷ ಕೊನೆಯ ಕಾರ್ತಿಕ ಸೋಮವಾರದಂದು ಅಂತರ ಗಂಗೆಯಲ್ಲಿ ವಿಶೇಷ ಪೂಜೆಗಳು ನಡೆಯುತ್ತವೆ. ಇದು ಅನಾದಿ ಕಾಲದಿಂದಲೂ ನಡೆದುಕೊಂಡು ಬಂದಿರುವ ಸಂಪ್ರದಾಯ. ಆದರೆ ಕೆಲವು ವರ್ಷಗಳಿಂದ ಬಜರಂಗ ದಳ ತಾನು ಗುತ್ತಿಗೆ ಪಡೆದಂತೆ ಈ ಸಂಪ್ರದಾಯವನ್ನು ತನ್ನದಾಗಿಸಿಕೊಂಡಿದೆ. ಭಕ್ತಾದಿಗಳಿಗೆ ಉಚಿತವಾಗಿ ವಾಹನ ವ್ಯವಸ್ಥೆ ಮಾಡಿಸುವುದು, ಪ್ರಸಾದ ವ್ಯವಸ್ಥೆ ಮಾಡಿಸುವುದು. ಪ್ರಚೋದನಕಾರಿ ಗೋಡೆ ಬರಹಗಳನ್ನು ಮಾಡಿಸುವುದು ಮತ್ತಿತರ ಪ್ರಚೋದನಾತ್ಮಕ ಕ್ರಿಯೆಗಳಲ್ಲಿ ತೊಡಗಿದೆ.

ಜಿಲ್ಲೆಯ ಜನ ಈ ದುಷ್ಕೃತ್ಯಗಳನ್ನು ನಿರಂತರವಾಗಿ ವಿರೋಧಿಸುತ್ತಾ ಬಂದಿದ್ದಾರೆ. ಜಾತ್ಯಾತೀತ ಗುಣ ಈ ಮಣ್ಣಿನಲ್ಲಿದ್ದು ಸಂಘಪರಿವಾರದ ಯವುದೇ ಕೃತ್ಯಗಳು ಇಲ್ಲಿ ಮೇಲುಗೈ ಸಾಧಿಸಲು ಅವಕಾಶ ನೀಡುತ್ತಿಲ್ಲ. ಇಲ್ಲವೇ ಅವರೆಂದಿಗೂ ಕೋಲಾರವನ್ನು ಕೋಮುವಾದದ ಪ್ರಯೋಗ ಶಾಲೆ ಮಾಡಲು ಇಲ್ಲಿನ ಜನರಲ್ಲಿ ರಕ್ತಗತವಾಗಿರುವ ಸೌಹಾರ್ದತಾ ಮನೋಭಾವ ಅವಕಾಶ ನೀಡಿಲ್ಲ. ಇನ್ನು ಮುಂದೆಯೂ ನೀಡುವುದಿಲ್ಲ.

ನಮ್ಮ ಕನಸು



ಕನಸು ಕಟ್ಟುತ್ತವೆ ನಾವು
ಬದುಕ ಹಂದರದ ಕನಸು
ಭಾರದ ಬುಟ್ಟಿ ಎತ್ತಿ
ಮರಳು ಗಾರೆ ಕಲ್ಲಹೊತ್ತು
ಮುಗಿಲೆತ್ತರ ಮಹಡಿ ಕಟ್ಟಿ
ತಳಾದೀಗೆ ಸಿಲುಕಿ
ನರಳುವವರು ನಾವು.
ಸಂಜೆ ಕೈ ಚಾಚಿ
ಗೇಣುದ್ದ ಹೊಟ್ಟೆಗೆ
ಕಾಸು ಎಣಿಸಿ
ಕೊಳಚೆಯ ಗೂಡಿನೊಳಗೆ
ಕೈಕಾಲು ಮಡಚಿ ಮೈ ಮುದುಡಿ
ಕನಸ ಕಾಣುತ್ತೇವೆ.
ಹಸಿವಿಗೆ ಅನ್ನ ಬೆಳೆವ ಕನಸು
ಮಣ್ಣು ಹದಗೊಳಿಸಿ
ಉತ್ತಿ ಬಿತ್ತಿ ನೆಲಕೆ ಬೆವರ ಹರಿಸಿ
ಮಾತು ಕಳೆದು ಮೌನವಾಗಿ
ಸಾಲ ತೀರುವ ಕನಸ ಕಾಣುತ್ತೇವೆ.
ಜನರು ನಡೆವ ರಸ್ತೆ ಅಗೆದು
ಪಿಕಾಸಿಗಳಾಗಿ
ಬೆಂಕಿಯ ಕಾವಲಿ ಡಾಂಬರ್ ಹಾಸಿ
ತಗ್ಗು ದಿಣ್ಣೆಗಳ ಸಮಗೊಳಿಸಿ
ದುಗ್ಗಾಣಿ ಕಾಸಿನ ಕನಸ ಕಾಣುತ್ತೇವೆ.
ಚಿಂದಿಯುಟ್ಟು ಊರೂರು ಅಲೆದು
ತಂಗಳು ತಿಂದು
ಬದುಕ ಬಂಡಿಯ ಹಳಿಯ
ಕನಸು ಕಾಣುತ್ತೇವೆ.

–ಈರಮ್ಮ, ಬಳ್ಳಾರಿ, ಅಂಗನವಾಡಿ ಕಾರ್ಯಕರ್ತೆ
ಬಳ್ಳಾರಿಯ ಮಹಿಳಾ ದಿನಾಚರಣೆ ಸಂದರ್ಭದಲ್ಲಿ ಓದಿದ ಕವಿತೆಗಳು

ಖಜಾನೆ

ಸುರುವಾಯ್ತು ನೋಡಿ ಸ್ವಾಮಿ
ಅಭಿವೃದ್ಧಿಯ ಭಜನೆ
ಆರಿಸಿ ಬಂದ ಮೇಲೆ
ಒಪ್ಪಿಸುವರು ಉದ್ಯಮ ಪತಿಗಳೀಗೆ
ದೇಶದ ಖಜಾನೆ

ನರಸಿಂಹಪ್ಪ ರಾಮತ್ನಳು
ಜಕಾಲೋನಿ ಸಿಂಧನೂರು

ಗಜಲ್

ಪುರಾಣದ ಆ ಮೌನ ರೂಪಕಗಳೊಂದಿಗೆ ಮಾತನಾಡು
ಹೆಪ್ಪುಗಟ್ಟಿದ ಜೀವ ನೋವುಗಳೊಂದಿಗೆ ಮಾತನಾಡು

ಪತಿ ಹೆಜ್ಜೆಯ ನೆರಳಲಿ ನಡೆದಾಡಿಸಿ ಮಹಾ ಸತಿಯೆಂದರು
ಸೀತಾ ಮಾತೆಯ ನಿಟ್ಟುಸಿರುಗಳೊಂದಿಗೆ ಮಾತನಾಡು

ಪರಶುರಾಮ ಪಿತೃ ಪರಿಪಾಲಕನಾಗಿ ಪುರುಷತ್ವವ ಮೆರೆದ
ಶಿರ ಕೊಟ್ಟ ರೇಣುಕೆಯ ರೋದನದೊಂದಿಗೆ ಮಾತನಾಡು

ಬ್ರಹ್ಮದೇವ ಮಗಳನ್ನೇಕೆ ಮದುವೆಯಾದನೋ ಗೊತ್ತಿಲ್ಲ
ಕಾಮಕ್ಕೆ ಕಣ್ಣಿಲ್ಲವೆಂದವನೊಂದಿಗೆ ಮಾತನಾಡು.

ಯಶೋಧರ ದೊರೆ ರತಿಕ್ರೀಡೆಯಲ್ಲಿ ವಿಫಲನಾಗಿದ್ದ ಗೊತ್ತೇನು.
ಅಮೃತಮತಿಯ ಆರ್ದ್ರ ಆಲಾಪನೆಯೊಂದಿಗೆ ಮಾತನಾಡು

ಪಾಂಡುರಾಜನಿಗೆ ವಾಸಿಯಾಗದ ಪಾಂಡುರೋಗ ಇತ್ತಂತೆ
ವಿರಹಹೊತ್ತ ಕುಂತಿಯ ನರಳಿಕೆಯೊಂದಿಗೆ ಮಾತನಾಡು

ದರಬಾರೇ ದೌಲತ್ತನ್ನ ಮೆರೆದ ದುರ್ಯೋಧನ ರಾಜನಾದ
ಪಾಂಚಾಲಿ ದ್ರೌಪದಿಯ ದರ್ದುಗಳೊಂದಿಗೆ ಮಾತನಾಡು

ಮೋಹಿಸಿ ಮಾಯವಾದ ದುಶ್ಯಂತನಿಗೆ ಅಕಾಲ ಮರುವು ಇತ್ತಂತೆ
ಶಕುಂತಲೆಯ ವೇದನಾಮಯ ಬಿಕ್ಕುಗಳೊಂದಿಗೆ ಮಾತನಾಡು

ಗೌತಮ ಮುನಿಯನ್ನ ಮಹರ್ಷಿಯಾಗಿಸಿದ್ದು ಈ ಪುರುಷ ಪ್ರಭುತ್ವವೇ
ಶಾಪಗ್ರಸ್ತಳಾಗಿ ಕಲ್ಲಾದ ಅಮಾಯಕಿ ಅಹಲ್ಯಳೊಂದಿಗೆ ಮಾತನಾಡು

ಭಕ್ತಿಯೆಂಬುದು ತೋರುಂಬ ಲಾಭವೆಂದ ನಿಜ ಶರಣ ಅಲ್ಲಮ
ಅನುಭಾವಿ ಅಕ್ಕಳ ಬಯಲ ಆಲಯದೊಂದಿಗೆ ಮಾತನಾಡು

ಬಯಕೆಗಳಿಗೆ ಬಣ್ಣ–ರೆಕ್ಕೆ ಪುಕ್ಕ ಪೋಣಿಸಿ ಸಿಂಗರಿಸಿದ್ದು ಸಾಕು ಹೈ.ತೋ
ವರ್ತಮಾನದಲ್ಲೂ ನಿಲ್ಲದ ಹೆಣ್ಣಿನ ಕಣ್ಣೀರಿನೊಂದಿಗೆ ಮಾತನಾಡು

–ಅಬ್ದುಲ್ ಹೈ ತೋರಣಗಲ್ಲು
ಬಳ್ಳಾರಿಯ ಮಹಿಳಾ ದಿನಾಚರಣೆ ಸಂದರ್ಭದಲ್ಲಿ ಓದಿದ ಕವಿತೆಗಳು

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**